ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ನಮ್ಮ ಮಾನ್ಯ ಮಿತ್ರರು ನಾನು ಇಲ್ಲೇ ಉಳಿಯಬೇಕೆಂದು ಅಭಿಮಾನದಿಂದ ಹೇಳಿದ್ದನ್ನು ಕೇಳಿ ನನಗೆ ಪರಮಾನಂದವಾಗಿದೆ. ಆದರೆ ನನಗೆ ಇಲ್ಲೇ ಉಳಿಯಬೇಕೆಂಬ ಇಷ್ಟವಿಲ್ಲ ಎಂದು ಸಾಕಷ್ಟು ಸಲ ಹೇಳಿದ್ದೇನೆ. ನಾನು ಒಂದು ಜವಾಬ್ದಾರಿ ಸ್ಥಾನಕ್ಕೆ ಹೋಗಬೇಕಾಗಿದೆ, ಈ ಬಜೆಟ್ ಅಧಿವೇಶನ ಮುಗಿಯುವವರೆಗೆ ಸ್ವಲ್ಪ ತಾಳಿ ಎಂದು ಹೇಳಿದ್ದೇನೆ. ಆದಾಗ್ಯೂ ಕೂಡ ಇನ್ನೂ ಗಲಾಟೆ ಮಾಡಿದರೆ ನನಗೆ ಬೇಕಾಗುವಷ್ಟು ಕಾಲ ನಾನು ಇಲ್ಲಿರುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ನಮ್ಮ ಅಭೀಷ್ಟ ಪೂರ್ಣವಾಗುವವರೆಗೂ ನಾವು ಗಲಾಟೆ ಮಾಡುತ್ತಲೇ ಇರುತ್ತೇವೆ.

ಶ್ರೀ ಎಸ್. ನಿಜಲಿಂಗಪ್ಪ.—ನಾನು ಇಲ್ಲೇ ಇರಬೇಕೆಂದಿಲ್ಲ, ಒಂದು ಜವಾಬ್ದಾರಿ ವಹಿಸಿಕೊಂಡಿದ್ದೇನೆ. ಆದಷ್ಟು ಜಾಗ್ರತೆ ಅಲ್ಲಿಗೆ ಹೋಗಬೇಕೆಂಬುದು ನನ್ನ ಇಷ್ಟ. ಬಜೆಟ್ ಅಧಿವೇಶನ ಮುಗಿದಮೇಲೆ ಹೋಗಬೇಕೆಂದಿರುವುದಾಗಿ ಹೇಳಿದ್ದೇನೆ. ಹಾಗಿರುವಾಗ ಪುನಃ ಪುನಃ ಇದನ್ನೇ ಕೇಳಿದರೆ ಏನು ಪ್ರಯೋಜನ ?

BUDGET ESTIMATES FOR 1968-69—DEMANDS FOR GRANTS

Demand No. 20-(31) Agriculture

(*Debate Continued*).

Sri D. B. PAWAR (Deputy Minister for Agriculture).—We have tried to attain self-sufficiency in Food. I was telling the House yesterday that we wanted to grow about 48 lakhs tons of foodgrains. It was our desire also to grow as much as 52 lakhs tons of foodgrains this year. Unfortunately, owing to bad seasons, we could not achieve this target. We have yet to receive the figures from the various districts. To achieve this target and attain self-sufficiency in food, I would say we will not be only content with self-sufficiency in food, we also desire to be surplus in food and with that desire we have a seven pronged scheme by which we can combat food shortage. Now I would like to tell the House the various schemes under the 7 pronged drive which we want to achieve.

The first is land development. Under this scheme, we want to develop various areas which are under irrigated crops. We want also to improve the lands by soil conservation and for this purpose I would like to quote a few figures regarding land development we have achieved during the past few years.

Sir, during the Third Five Year Plan we have covered an area of 67,909 acres of land under mechanical operation. Then under the manual labour, we have covered an area of 8,871 acres.

[MR. CHAIRMAN (SRI S. D. KOTHAVALE) in the Chair]

During the same period we have covered 42,131 acres under soil conservation. In the year 1966-67, we have covered 9269 acres of land under the mechanical operation, and under manual labour 4701 acres, under soil conservation we have covered 2,87,000 acres of land. Similarly this year in 1967-68, we hope to cover 4000 acres of land under

(SRI D. B. PAWAR)

mechanical operation and about 4000 acres under manual labour; and in the prevailing scarcity conditions in various parts, we hope to cover about 2 lakhs of acres under soil conservation this year.

Along with this in the irrigated areas, the Tungabhadra project, we have so far covered 17,420 acres of land in the Bellary area and 21,000 acres under the T.B.D. area of Raichur, and 7,766 acres of land under the Bhadra project, and 1,988 acres under the Ghataprabha project.

Regarding this development of land, certain suggestions were made that the provisions made in the present Budget are very meagre and some more money should be allotted for the development of lands and soil conservation. I want to bring to the notice of the Hon'ble House that we have been trying to secure some assistance from the Agriculture Re-Finance Corporation and we hope to get money to the tune of nearly six crores of rupees for soil conservation work and we will be able to meet the demand of the State under this scheme.

As regards, soil reclamation works taken up in the irrigated areas, I would like to give the House certain figures as to how much amount we have intended to spend in the various project areas. Under the Thungabhadra Left Bank Canal area, Agricultural Re-Finance Corporation have sanctioned 5 crores 33 lakhs of rupees and we have spent Rs. 42,63,000 for the reclamation of land under the Thungabhadra Project left Bank Canal. As regards Tungabhadra Right Bank Canal, the Agricultural Re-finance Corparation have sanctioned Rs. 1.42 crores and applications are being collected from the ryots for the implementation of this scheme. Then, for the Bhadra Project, the Agriculture Re-finance Corporation has sanctioned Rs. 2.28 crores. For the Ghataprabha Project, the Agriculture Re-finance Corporation has sanctioned Rs. 1.23 crores. In the Bhadra Project, we have so far spent Rs. 43,51,000 for reclamation of land. In the Ghataprabha Project, we have so far spent Rs. 73,000.

After giving these figures, I would like to tell the House that we have about 43 bulldozers working in the Department. Under this scheme, we hope to cover nearly 9,000 acres of land this year.

Sri B. L. NARAYANASWAMY (Srinivasapur).—May I know what is the plan of the Government for improving dry farming in drought affected areas?

Sri D. B. PAWAR.—I will come to that later on please.

I was telling the House that we have got 43 bulldozers working in the Department. Unfortunately, the machinery we are having is very old. Although we have on the list 69, only 49 are actually working. With a view to having greater capacity of work, we have recently entered into an agreement with the Government of the Soviet Union; and we hope to get 41 new bulldozers and tractors in course of three months on which we are spending Rs. 76 lakhs. While on the subject

of tractors, I wish to inform the Hon'ble House that we also help the individual ryot to purchase tractors. Our idea is that the individual farmers also help us in the development of these lands.

Accordingly, I will give an idea of the tractors we have so far distributed to the ryots. This year the Agriculture Department has sanctioned about 133 tractors to the ryots; out of them, the Department has released 110 tractors so far. Now, the distribution of these tractors has been handed over to the Agro-Industries Corporation. We have taken the work of the distribution.

There was a suggestion yesterday by the Hon'ble Members that the rate of interest charged by the Agro-Industries Corporation is very high. They said that the Department was charging only 6 per cent interest.

(Sri C. M. S. Sastry was seen crossing across the floor)

MR. CHAIRMAN.—Hon'ble Member Mr. Sastry will please take care that he does not cross in between the Minister and the Chair.

SRI D. B. PAWAR.—The Members said that the Agro-Industries Corporation is charging a heavier rate of interest, namely, 9 per cent. I want to assure the House that some applications have been sanctioned under the departmental scheme; and to those ryots we have sanctioned 133 tractors at 6 per cent interest, as has been agreed to by the Department. But so far as Agro-Industries Corporation is concerned, we are borrowing money from outside agencies at the rate of 7 per cent interest. For the sake of managerial expenses, we have got a margin of 1½ to 2 per cent. It is not possible in the circumstances to lower the rate of interest. Even then, we are trying our best to reduce this interest to at least 8½ per cent.

From this Agro-Industries Corporation, we have sanctioned about 129 applications so far. We have released 45 tractors through this Corporation. I am bringing to the notice of the Hon'ble Members that the Corporation was started on 1-9-1967; and it actually started functioning from 1-1-1968. The fact that we have released 72 tractors within such a small time of its functioning, shows that the Corporation is doing its best to help the ryots.

Now, the second item I want to deal is irrigation and food crops. Probably, the House is aware that in the year 1956-57, the irrigated area in the State was only 7 per cent; and to-day, it is 10 per cent. So, there is gradual rise of 3 per cent during the last ten years. For these irrigation purposes, we have been trying to implement certain schemes. And from that point of view, we are trying to encourage the farmers to dig more wells. We are also helping them with diesel pump sets and electric pump sets. I will just give a few statistical figures on this subject. In the Third Five-Year Plan, we have sunk 32,156 wells. In the year 1966-67, we have sunk 5,700 wells. In the year 1967-68, we have sunk 3,400 wells. We proposed to sink this year 3,400 wells.

(SRI D. B. PAWAR)

We have distributed 28,423 diesel pump sets in the year 1966–67. We have distributed 1,672 diesel sets this year so far till the taking over of the working by the Agro-Industries Corporation. In the year 1967–68, we have distributed 680 diesel pump sets. As regards electric pumpsets, in the III Five-Year Plan we have distributed 34,522 electric pump sets. This year, in 1967–68, we have distributed through the various agencies 1,200 pump sets. The Agro-Industries Corporation has also come forward to distribute diesel and electric pump sets to the ryots. From this point of view, we have so far distributed during the last few months 28 diesel pump sets. We have sanctioned some applications and we are ready to hand over 110 electric pump sets to the ryots. Sir, thus, it would be seen that we have been trying our best to help the ryots to irrigate the lands. And besides this, there is a steady increase in the irrigated areas also in the various project areas. I shall just give some figures regarding this position. In the beginning of 56–57 the area covered by these various projects was 18.29 lakhs acres. Today it is 26.69 lakhs acres and under the T.B. and Ghataprabha project areas we hope to irrigate 12 lakhs of acres.

1-30 P.M.

Besides this, we have also helped the farmers in boring wells. The department has got about 16 boring machines and we have bored about 145 bore-wells. In 1966-67 we have bored about 100 bore-wells. So, it can be seen that in the sphere of agriculture, we have been doing our best to help the farmers.

Then, the third method which we are implementing in tackling the food problem is by supplying to farmers fertilisers and manures. The farmer has become more of fertiliser minded and wants to use improved practices in agriculture and as could be seen from these figures, there is great deal of demand for supply of fertilisers. In 1956–57 it was 19,922tons whereas the demand in 1965-66 is 1·18 lakh tons. In 66-67 we distributed 1,78,887 tons of fertilisers and this year, that is 1967-68 we indented from Central Government about 4,54,000 tons but actually we are given only 2 lakh tons of fertilisers and we have distributed so far in this year 1,25,000 tons of fertilisers to the ryots I am very happy to inform the House that so far as our position about fertiliser is concerned, we are quite well off and at present we have in stock about 1,25,000 tons of fertilisers. Along with this, we have been trying to persuade the farmers to go in for rural compost.

Under this rural compost, we hope to get 48 lakh tons of manure and along with rural compost we have also been persuading various cities and towns to turn the nightsoil into urban compost and this scheme also, we hope, will give 4 lakh 54,000 tons of manure. We have also been persuading the farmers to go in for green manure which helps

them a lot and thus, we have succeeded in persuading the farmers to realise the utility of green manure. We hope that 10,000 acres of land will come under this manuring.

The fourth item under which we want to fight this food scarcity is the improved seeds. We have been trying to supply to the farmers improved variety of seeds for the last ten years and we have also tried to increase the number of Seed Farms. There was a suggestion yesterday that every taluk should have at least one seed farm. I would say that we are having in the State at present 83 seed farms and we want to open 22 new seed farms in the course of this year and next year. The seed farms would be capable of handling the need of the improved seeds in the State. To quote the figures about our achievement so far, in the year 1966-67 we covered 46.35 lakhs of acres of paddy; 17·94 lakhs of acres under jowar; under ragi we covered about 6 lakhs acres of land and under bajra we covered about 2 lakhs of acres of land. During that year we got about 3,26,000 quintals of seeds.

Sir, there was a criticism yesterday that the farmer had nothing to learn from the seed farms belonging to Government. I want to tell the House that the seed farms are not supposed to be demonstration farms in the sense that the farmers should go and try to imitate the practices followed in these farms. Actually, these seed farms are meant to multiply the seeds where we do not pay much attention to the economical aspect. From that point of view, we only concentrate on multiplying of seeds. From the 83 farms that we have at present and the 23 additional farms that we are going to have in the course of next two years, we would be able to meet the entire need of the seeds so far as seeds are concerned in our State.

Sir, now I come to the fifth point and that is the intensive agricultural production programme. In 1966–67 it was found necessary that the old practices of agriculture will not help the State to attain the self–sufficiency in food and with that view in mind, we brought 6.39 lakhs of acres under intensive agricultural production. Then, in 1967--68 we have brought under paddy 6,99,000 acres of land, under ragi 5,29,000 acres of land, under jowar 9,39 000 acres of land. We have paid special attention to the growing of oil seeds which are in great demand. Under this scheme; we have covered 3, 52, 000 acres of land. Recently, with the introduction of Mexican wheat which has caught the fancy of the farmers, we have been successful in covering about 9,000 acres of land with Maxican wheat. There was a criticism that we are unnecessarily importing cotton from foreign countries whereas India is a cotton growing area and we are not paying sufficient attention to the growing of cotton. Unfortunately, due to the prices that were prevailing cotton was not a very paying crop for the farmers and actually the area covered under cotton crop decreased. Now we are encouraging the farmers to take to growing of cotton on a large scale. We have covered 3,87,000 acres under cotton.

(SRI D. B. PAWAR)

We are also concentrating on new high yielding variety of crops. We have received a very good response from the people in growing these hybrid crops. A mention was made about this the other day and especially Sri K. H. Patil was speaking about the hybrid seeds. Recently the Government has taken a decision to purchase all the seeds grown in the State. On the representation received from various areas stating that the price of hybrid maize seed is low, we have decided to give Rs. 3 instead of Rs. 2. 50 to the farmers. I am sure with this, many more farmers will come forward and take the benefit of the scheme, with the assurance that the seeds will be purchased by the Government, the farmers need not have any fear that their seed may not have a market. with this high yield programme we have been doing our best to bring as much area as possible under cultivation. I shall give some figures.

Under Taichung paddy we have covered an area of 50,000 acres under the khariff crop and 3, 000 acres under rabi crop. Under paddy 31,000 acres in Khariff season and 4000 acres in rabi season. Mexican wheat we have covered 22,685 acres, under the high yielding variety programme. We have covered 6, 189 acres in Khariff season and 5,288 acres in the rabi season. Under the hybrid maize we have convered 57,937 acres in khariff season and 37,144 acres in rabi season. As regards bajra we have covered 11,319 acres in khariff season and 5,415 acres in rabi season. With this high yielding variety programmes, as most members are aware, these are susceptible to pests and diseases. From that point of view we are trying our best to help the farmers in plant protection programme. Under the Second Plan we have covered 3.72 lakh acres and during the third plan we have covered 14. 7 lakh acres under the plant protection programme. Our target for the year 1967-68 is 30 lakh acres and we have actually in covering 22 lakh acres. For the next year we propose to take over about 35 lakh acres under plant protection programme. Besides we have also covered 51,000 acres under aerial spraying.

There was a criticism that pesticides are costly and farmers are not in a position to pay these high prices and they should be given some subsidy. I would like to tell the House that in the past years we were getting 50 per cent subsidy from the Government of India and that has been discontinued. Hence we are unable to give any subsidy to ryots. However, in the case of epidemics we will give subsidies and the farmers can avail of this opportunity.

These are seven methods by which we intend to tackle the scarcity of food. Although due to unfavourable seasonal conditions we were not able to do well, we hope to do well this year. We hope that this year favourable conditions will prevail and we will achieve self-sufficiency in food.

Some mention was made regarding agriculture education. Smt. Basavarajeswari made a suggestion that the Government should think

of opening an Agriculture College at Raichur. Previously the request was for opening an Agriculture College in Raichur. But subsequently after giving much thought we have come to the conclusion that it would be advisable to open an agricultural engineering college. With this view in mind the scheme is approved and the matter is sent to ICAR for approval and also to the Government of India. Besides, the people of Raichur have assured us that they will contribute something towards starting of this college. We have recently issued instructions to the Deputy Commissioner, Raichur, to collect an amount to the tune of 50 lakhs for starting of this college because it will cost over a crore and some financial assistance will have to come from the public. There was a suggestion that there should be many more agricultural schools for farmers. I have visited a few of these agricultural schools in the State and interviewed a few students. The general tendency of our students is that they are out for some service and when we look at the attitude of students in those schools, I do not think it is advisable to have any more schools because these schools are intended to educate the sons of the farmers. I have also visited a few soil conservation centres in Gokak where representations were made by the students that Government should assure them a service after their finishing the course. When we take into consideration the tendency of the studenes that are coming to these schools, I feel that no useful purpose would be served by opening any more schools in the State. Besides agricultural training schools, we have in the State about five different grama sevak training centres and we have so far trained about 2,317 gram sevaks in various centres and about 322 gram sevikas. During the training course for the gram sevaks we are giving a stipend of Rs. 60 per month and in the case of Soil Conservation training centres, we are giving a stipend of Rs. 40 to the students.

While talking about agricultural education, there was a suggestion that admissions to the University of Agricultural Sciences, sons of farmers should be given preference. As far as I know, 75 per cent of the students are selected from the families of farmers only and I do not think there is any difficulty for the farmers to get admission to the Agricultural University.

While talking of the University of Agricultural Sciences, there was a bit of criticism regarding the state of affairs that are prevailing in the various research centres of the University. I myself visited about half a dozen of these research centres and I agree with the Hon'ble Members of this House that the conditions prevailing in these research centres are not very satisfactory and with that view I enquired with the Vice-Chancellor of the University that something should be done for improving the conditions of these research centres. I was, however, given to understand by the Vice-Chancellor of the University that the University has meagre funds and therefore they are not in a position to maintain these research centres. We tried to see whether we could improve the conditions of these research

(SRI D. B. PAWAR)

centres. We also wrote to the Government of India to help the University of Agricultural Sciences in this behalf, but we are given to understand that the ICAR which was financing the University of Agricultural sciences has been allotted lesser funds. I am told the ICAR was getting Rs. 38 crores of grant from the Government of India and that has been reduced to Rs. 18 crores. In view of this, the ICAR is finding it very difficult to help these educational institutes. So, something will have to be done to help these Universities and to improve the research work in the State.

I have already told the House that we are trying our best to attain self-sufficiency in food. I have also told the House how we are trying by various means to achieve self-sufficiency in food. It is only owing to bad seasonal conditions that we are not in a position to achieve our target. But I can assure the House that with better seasonal conditions next year we hope to achieve this target. If we have better seasonal conditions we will even be surplus in food. With this assurance, I conclude.

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಅತ್ಯಂತ ಮುಖ್ಯವಾದ ಬೇಡಿಕೆಯಾದ ವ್ಯವಸಾಯಕ್ಕೆ ಎಲ್ಲಾ ಬೇಡಿಕೆಗಳಿಗಿಂತಲೂ ಹೆಚ್ಚಿನ ಸ್ಥಾನವನ್ನು ಕೊಡಬೇಕೆಂದು ಇಷ್ಟಪಡುತ್ತೇನೆ. ಈ ಬೇಡಿಕೆಯ ಮೇಲೆ ಅನೇಕ ಮಾನ್ಯ ಸದಸ್ಯರುಗಳು ನಾನು ಮಾತನಾಡಬೇಕೆಂದು ಸಕಾರಣ ಇದ್ದೋ ಅಥವಾ ಇಲ್ಲದೆಯೋ ಒತ್ತಾಯ ಮಾಡಿದ್ದಾರೆ. ಅದು ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಉಪ ಸಚಿವರು ಈ ಇಲಾಖೆಗೆ ಸಂಬಂಧಪಟ್ಟಂತೆ ಅನೇಕ ಅಂಕಿ ಅಂಶಗಳನ್ನು ಈ ಸಭೆಗೆ ಮನದಟ್ಟಾಗುವಂತೆ ಕೊಟ್ಟಿದ್ದಾರೆ. ಅವರು ಮೆಚ್ಚತಕ್ಕಂಥ ರೀತಿಯಲ್ಲಿ ಹೇಳಿದ್ದಾರೆ. ಈ ಇಲಾಖೆ ಇದುವರೆಗೆ ಏನು ಕೆಲಸ ಮಾಡಿದೆ, ಅದರ ಉದ್ದೇಶವೇನು, ಸಾಧನೆಯೇನು ಎಂಬುದನ್ನೆಲ್ಲಾ ಸ್ಪಷ್ಟವಾಗಿ ತಿಳಿಸಿದ್ದಾರೆ. ನಿಜವಾಗಿಯೂ ಈ ಇಲಾಖೆ ಮಾಡಿರುವ ಕೆಲಸ ಮೆಚ್ಚತಕ್ಕಂಥದ್ದು ಆಗಿದೆ. ಹಾಗೂ ಈ ಇಲಾಖೆಗೆ ಸಂಬಂಧಪಟ್ಟಂತೆ ಏನು ಒಂದು ಹಣವನ್ನು ಕೇಳಿದ್ದಾರೆ, ಆ ವಿಚಾರದಲ್ಲಿ ಒಂದು ರೀತಿಯ ಒಪ್ಪಿಗೆ ಇದ್ದರೂ ಸಹ ಅದು ಸಾಲದು ಎನ್ನತಕ್ಕಂಥ ಪುಕಾರು ಇದೆ. ಶ್ರೀಮಾನ್ ಜಿ. ರಾಮೇಗೌಡರು ಸ್ವತಃ ವ್ಯವಸಾಯಗಾರರು. ಸ್ವತಃ ಜಮೀನು ಸಾಗುವಳಿ ಮಾಡುವವರಾಗಿದ್ದಾರೆ. ಅವರು ಹೇಳಿರತಕ್ಕಂಥ ಮಾತಿಗೆ ಸಾಕಷ್ಟು ಬೆಲೆ ಕೊಡುವುದು ಅವಶ್ಯಕವಾಗಿದೆ. ಈಗ ಕೇಳಿರತಕ್ಕಂಥ 7 ಕೋಟಿ ಚಿಲ್ಲರೆ ರೂಪಾಯಿಗಳಲ್ಲಿ ಎಲ್ಲಾ ಹೋಗಿ 6 ಕೋಟಿ ರೂಪಾಯಿಗಳು ಮಾತ್ರ ವ್ಯವಸಾಯ ಇಲಾಖೆಗೆ ಬಂದಂತಾಗಿಯೆಂದು ಹೇಳಿದ್ದಾರೆ. ಹೆಚ್ಚಿಗೆ ಕೊಡಬೇಕಾಗಿತ್ತು, ಆದರೆ ನಮ್ಮ ಶಕ್ತಿಯನ್ನು ನೋಡಿಕೊಂಡು ಕೊಟ್ಟಿದ್ದೇವೆ. ಈ ವಿಚಾರವನ್ನು ಶ್ರೀಮಾನ್ ರಾಮೇಗೌಡರು ಆಲೋಚನೆ ಮಾಡಿದ್ದರೆ ಆ ರೀತಿಯ ಆಕ್ಷೇಪ ಮಾಡುತ್ತಿರಲಿಲ್ಲ. ವ್ಯವಸಾಯ ಇಲಾಖೆಯಲ್ಲಿ ಅನೇಕ ಕೆಲಸಗಳು ನಡೆಯುತ್ತಿವೆ ಮಧ್ಯಮ ಮತ್ತು ದೊಡ್ಡ ನೀರಾವರಿ ಯೋಜನೆಗಳಿಗಾಗಿ ಸುಮಾರು 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದೇವೆ. ಕೊನೆಯಪಕ್ಷ 12 ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಬೇಕೆಂದು ಇದ್ದೇವೆ. ಇದಕ್ಕೆ ಕಾರಣವಿಷ್ಟೆ? ಒಂದೆರಡು ವರ್ಷಗಳು ಸತತವಾಗಿ ಮಳೆಯೇನಾದರೂ ಹೋದರೆ ದೇಶದಲ್ಲಿ ಹಾಹಾಕಾರ ಉಂಟಾಗುತ್ತದೆ, ಸಣ್ಣ ಸಣ್ಣ ಕೆರೆಗಳು ಮತ್ತು ಬಾವಿಗಳು ಬತ್ತಿ ಹೋಗುತ್ತವೆ, ಇದನ್ನು ನಿವಾರಣೆ ಮಾಡಬೇಕಾದರೆ ಮಧ್ಯಮ ಹಾಗೂ ದೊಡ್ಡ ನೀರಾವರಿ ಯೋಜನೆಗಳು ಅವಶ್ಯಕ. ಮಳೆ ಬಂದಾಗ ಸುಖವಿರುತ್ತದೆ, ಮಳೆ ಬಾರದಾಗ ಕಷ್ಟವಾಗುತ್ತವೆ. ಈ ದೃಷ್ಟಿಯಿಂದ ನಾವು ಈ ಮಧ್ಯಮ ಹಾಗೂ ದೊಡ್ಡ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಲೇ ಬೇಕು. ಸಣ್ಣ ನೀರಾವರಿ ಯೋಜನೆಗಳು ಎಷ್ಟು ಅವಶ್ಯಕವೋ, ಬಾವಿಗಳು ಎಷ್ಟು ಅವಶ್ಯಕವೋ ಅಷ್ಟೇ ಮಧ್ಯಮ ಹಾಗೂ ದೊಡ್ಡ ನೀರಾವರಿ ಯೋಜನೆಗಳು ಅವಶ್ಯಕವಾಗಿದೆ. ಅದಕ್ಕಾಗಿ 10 ಕೋಟಿ ರೂಪಾಯಿಗಳು ಮಂಜೂರಾಗಿದ್ದರೂ ಸಹ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದೇವೆ. ಇದರ ಜೊತೆಗೆ ಸಣ್ಣ ಸಣ್ಣ ನೀರಾವರಿ ಯೋಜನೆಗಳಿಗಾಗಿ 6 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದೇವೆ. ಅಂದರೆ ಈ ಯೋಜನೆಗಳಿಗಾಗಿ

18-20 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರುಗಳು ಈ ವ್ಯವಸಾಯದ ಇಲಾಖೆಯನ್ನು ಕಡೆಗಣ್ಣಿನಿಂದ ನೋಡುತ್ತಿದ್ದಾರೆ, ಕಡಿಮೆ ಹಣವನ್ನು ಇಟ್ಟಿದ್ದಾರೆಂದು ಹೇಳುತ್ತಿರುವುದರಲ್ಲಿ ಆಧಾರವಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬಗ್ಗೆ ಅಂಕಿಅಂಶಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ಈಗ ಇರತಕ್ಕಂಥ ದೊಡ್ಡ ಪುಕಾರೆಂದರೆ ಟ್ರಾಕ್ಟರ್ ಮುಂತಾದವನ್ನು ಕೊಂಡುಕೊಳ್ಳುವುದಕ್ಕೆ ಕೊಡತಕ್ಕಂಥ ಹಣದ ಮೇಲೆ ಶೇಕಡ 9 ರಂತೆ ಸರ್ಕಾರದವರು ಬಡ್ಡಿ ಹಾಕುತ್ತಿದ್ದಾರೆಂದು. ಇದು ಬಹಳ ಜಾಸ್ತಿಯೆಂದು ನಾನೂ ಸಹ ಒಪ್ಪುತ್ತೇನೆ. ನನಗೆ ಜಾಸ್ತಿಯೆಂದು ಕಾಣುತ್ತಿದೆ ಎಂಬುದಾಗಿ ನೆನ್ನೆ ದಿವಸವೂ ಸಹ ಹೇಳಿದ್ದೇನೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರು ನಮಗೆ ಏಳೂವರೆಯಿಂದ 8 ಪರ್‌ಸೆಂಟ್‌ವರೆಗೆ ಬಡ್ಡಿಯನ್ನು ಹಾಕುವುದರಿಂದ, ಅದರ ಮೇಲೆ ಒಂದು ಪರ್‌ಸೆಂಟ್ ಮಾತ್ರ ಹೆಚ್ಚಿಗೆ ಹಾಕಿ 9 ಪರ್‌ಸೆಂಟ್ ಬಡ್ಡಿಯನ್ನು ತೆಗೆದುಕೊಳ್ಳುತ್ತಿದ್ದೇವೆ. ರೈತರ ಉತ್ಪಾದನಾ ಶಕ್ತಿ ಜಾಸ್ತಿಯಾಗುವವರೆಗೆ ಬಡ್ಡಿ ಕಡಿಮೆ ಇದ್ದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ವ್ಯವಸಾಯದ ಇಲಾಖೆಯಲ್ಲಿ ರೈತರು ಪಡೆಯತಕ್ಕ ಹಣಕ್ಕೆ ಕಡಿಮೆ ಬಡ್ಡಿ ಹಾಕುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯವಾಗಿದೆ, ಈ ಮನೆಯ ಅಭಿಪ್ರಾಯವಾಗಿದೆ ಮತ್ತು ಪ್ರತಿಯೊಬ್ಬ ಸದಸ್ಯರ ಅಭಿಪ್ರಾಯವಾಗಿದೆ. ಇದನ್ನು ನೆರವೇರಿಸಬೇಕಾದರೆ ಕೇಂದ್ರ ಸರ್ಕಾರದ ನೆರವು ಬೇಕು. ಅಷ್ಟೇ ದೊಡ್ಡ ದೊಡ್ಡ ರಿಜರ್ವ್ ಬ್ಯಾಂಕ್‌ಗಳು ಮತ್ತು ಸ್ಟೇಟ್ ಬ್ಯಾಂಕ್‌ಗಳು ಸಹ ಆದಷ್ಟು ಮಟ್ಟಿಗೆ ಕಡಿಮೆ ದರದಲ್ಲಿ ಹಣವನ್ನು ಕೊಡಬೇಕು. ಈ ವಿಚಾರವನ್ನು ನಾನು ಎಲ್ಲೆಲ್ಲಿ ಹೇಳಬೇಕೋ ಅಲ್ಲೆಲ್ಲಾ ಕಳೆದ 4-5 ವರ್ಷಗಳಿಂದ ಹೇಳಿಕೊಂಡು ಬಂದಿದ್ದೇನೆ. ಬಡ್ಡಿದರವನ್ನು ಕಡಿಮೆ ಮಾಡುವುದು ಅವಶ್ಯಕವಾಗಿದೆ. ರೈತನ ಶಕ್ತಿ ಜಾಸ್ತಿಯಾದಾಗ ಜಾಸ್ತಿ ಬಡ್ಡಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರು, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು ಮತ್ತು ರೀ-ಫೈನಾನ್ಸ್ ಕಾರ್ಪೊರೇಷನ್ ಅವರು ಸಹ ಕೊಡತಕ್ಕಂಥ ಹಣದ ಮೇಲೆ ಶೇಕಡ ಒಂದೆರಡು ರೂಪಾಯಿಗಳನ್ನು ಕಡಿಮೆ ಬಡ್ಡಿ ವಿಧಿಸುವುದು ಒಳ್ಳೆಯದೆಂದು ನನ್ನ ಸ್ಪಷ್ಟ ಅಭಿಪ್ರಾಯ. ಇದಕ್ಕಾಗಿ ಸರ್ಕಾರ ಪ್ರಯತ್ನ ಮಾಡುತ್ತಿದೆ. ಇನ್ನೂ ಹೆಚ್ಚು ಪ್ರಯತ್ನ ಮಾಡುವುದು ಅವಶ್ಯಕವಿದೆ. ರೇಟ್-ಆಫ್-ಇಂಟರೆಸ್ಟ್ ಕಡಿಮೆಯಾಗಬೇಕಾಗಿದೆ. ಆದ್ದರಿಂದ ಈ ಬಡ್ಡಿ ಕಡಿಮೆಯಾಗಬೇಕಾದುದು ಒಳ್ಳೆಯದು. ಇನ್ನು ಸಾಯಿಲ್ ಟೆಸ್ಟಿಂಗ್ ಅಂದರೆ, ಭೂಮಿಯ ಗುಣವನ್ನು ಪರೀಕ್ಷೆ ಮಾಡತಕ್ಕದ್ದು ಬಹಳ ಅವಶ್ಯಕ. ಇದೇ ಸಂದರ್ಭದಲ್ಲಿ ಹಲವರು ಒಂದು ಆಕ್ಷೇಪಣೆಯನ್ನು ಮಾಡಿದರು. ರೀಆರ್ಗನೈಜೇಶನ್ ಆದಮೇಲೆ ಅಧಿಕಾರಗಳ ಸಂಖ್ಯೆ ಬಹಳ ಜಾಸ್ತಿಯಾಗಿದೆ ಎಂದು. ಅದು ಇಲ್ಲದಿದ್ದರೆ, ನಮ್ಮ ಕೆಲಸ ಕಾರ್ಯಗಳು ಸುಸೂತ್ರವಾಗಿ ಆಗುವುದಿಲ್ಲ. ಏಕೆಂದರೆ ಮೊದಲಿನ ರೀತಿಯಲ್ಲಿ ನಾವು ವ್ಯವಸಾಯವನ್ನು ಮಾಡುವುದಕ್ಕಾಗುವುದಿಲ್ಲ. ಹೊಸ ಹೊಸ ಔಷಧಿಗಳು ಬೇಕಾಗುತ್ತವೆ, ಗೊಬ್ಬರ ಬೇಕಾಗುತ್ತದೆ, ಹೊಸ ಸಂವಿಧಾನಗಳನ್ನು ಕಂಡುಹಿಡಿಯಬೇಕಾಗುತ್ತದೆ. ರೈತರಿಗೆ ಸಾಕಷ್ಟು ವಿಚಾರಗಳನ್ನು ತಿಳಿಸಿ, ನಾನಾ ಬೆಳೆಗಳಿಗೆ ಏನೇನು ಮಾಡಬೇಕೆಂಬುದನ್ನು ಶಾಸ್ತ್ರೀಯವಾಗಿ ತಿಳಿಸಬೇಕಾಗಿದ್ದರೆ, ಒಂದು ಕಡೆ ರಿಸರ್ಚ್ ಆಗಬೇಕು, ಮತ್ತೊಂದು ಕಡೆ ಅದರ ಉಪಯೋಗವನ್ನು ಹೇಳಬೇಕಾಗುತ್ತದೆ. ಇದಕ್ಕೆ ಅನೇಕ ರೀತಿಯ ತಜ್ಞರು ಬೇಕಾಗುತ್ತಾರೆ. ಹೆಚ್ಚು ಹೆಚ್ಚು ರೊಕ್ಕದ ಬೆಳೆಗಳನ್ನು ಬೆಳೆಸುವುದಕ್ಕೂ ತಜ್ಞರು ಬೇಕು. ನಮ್ಮ ದೇಶವನ್ನು ಮತ್ತು ಉಳಿದ ದೇಶಗಳನ್ನು ಹೋಲಿಸಿ ನೋಡಿದರೆ, ಅವರು ಎಷ್ಟು ತಜ್ಞರನ್ನು ಉಪಯೋಗಿಸುತ್ತಿದ್ದಾರೋ, ಅದರ ಹತ್ತನೇ ಒಂದು ಭಾಗ ಕೂಡ ನಾವು ಇಲ್ಲಿ ಉಪಯೋಗಿಸುತ್ತಿಲ್ಲ. ಆ ದೃಷ್ಟಿಯಿಂದ ನಾವು ಏನು ಖರ್ಚು ಮಾಡಿದ್ದೇವೆ, ಅದು ಜಾಸ್ತಿ ಎಂದು ಹೇಳುವುದು ಸರಿಯಲ್ಲ. ಇನ್ನು ಕೆಲವರು ಇನ್ನೂ ಅನೇಕ ಜನರು ಬೇಕು ಎಂದು ಹೇಳುತ್ತಿದ್ದಾರೆ.

2-00 P.M.

Sri H. SIDDAVEERAPPA.—We want more field workers but not table workers.

ಶ್ರೀ ಎಸ್. ನಿಜಲಿಂಗಪ್ಪ.—ಎರಡನ್ನೂ ಸೇರಿ ಮಾಡಬೇಕಾಗುತ್ತದೆ. ಫೀಲ್ಡ್ ವರ್ಕರ್ಸ್ ಜಾಸ್ತಿ ಮಾಡತಕ್ಕಂಥಹ ಉದ್ದೇಶ ಸರ್ಕಾರಕ್ಕೆ ಇದೆ. ಅದೇ ರೀತಿಯಲ್ಲಿ ಸಾಯಿಲ್ ಟೆಸ್ಟಿಂಗ್ ಬರೇ ಒಂದು ಕಡೆಯಲ್ಲಿ ಇದೆ. ಸಾಧ್ಯವಾದಷ್ಟು ಮಟ್ಟಿಗೆ ಪ್ರತಿಯೊಂದು ಜಿಲ್ಲೆಗೂ ಕೊಡಬೇಕೆಂದು ಇದೆ. ಒಬ್ಬ ಮನುಷ್ಯ ಅದನ್ನು ಹಳ್ಳಿಹಳ್ಳಿಗೆ ಹೋಗಿ ಮಾಡುವಂತಹ ಒಂದು ವಿಧಾನವನ್ನು ಮಾಡಬೇಕೆಂದು ಇದೆ. ಇದನ್ನು ಕೆಲವು ದೇಶಗಳಲ್ಲಿ ಮಾಡುತ್ತಿದ್ದಾರೆ, ಅದನ್ನು ಇಲ್ಲಿಯೂ ಮಾಡಿದರೆ ಬಹಳ ಸೂಕ್ತವೆಂದು ಕಾಣುತ್ತದೆ.

(ಶ್ರೀ ಎಸ್. ನಿಜಲಿಂಗಪ್ಪ)

ಮತ್ತು ಕಾಂಟೂರ್ ಬಂಡಿಂಗ್ ವಿಚಾರ. ಒಬ್ಬ ಸದಸ್ಯರು ಕಟ್ ಮೋಶನ್ ಕಳಿಸಿದ್ದಾರೆ. ಅದರಿಂದ ಏನೂ ಪ್ರಯೋಜನವಿಲ್ಲವೆಂದು ಹೇಳುತ್ತೇನೆ. ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಈ ಕಾಂಟೂರ್ ಬಂಡಿಂಗ್‌ನಿಂದ ಅನೇಕ ಕಡೆಗಳಲ್ಲಿ ಒಳ್ಳೆಯ ಕೆಲಸಗಳು ಆಗುತ್ತದೆ. ಕೆಲವು ಕಡೆ ನಾನು ಹೋದಲ್ಲಿ ರೈತರು ನಮಗೆ ಇದರಿಂದ ಏನೂ ಪ್ರಯೋಜನವಿಲ್ಲವೆಂದು ಹೇಳುತ್ತಾರೆ. ಏಕೆಂದರೆ ಇಷ್ಟರತನಕ ಅನುಭವಿಸಿದ್ದಾರೆ. ಈಗ ವಸೂಲು ಮಾಡುವುದಕ್ಕೆ ಹೋದರೆ, ಇಲ್ಲ ನಮಗೆ ಏನೂ ಪ್ರಯೋಜನವಾಗಿಲ್ಲವೆಂದು ಹೇಳುತ್ತಿದ್ದಾರೆ. ನಾನು ಸಾಧಾರಣ ಒಂದು ಮೈಲಿ ಈ ಕಡೆ ಬಂದು ಒಬ್ಬನನ್ನು ಕೇಳಿದರೆ, ಏನಪ್ಪಾ ಅದರಿಂದ ಏನೂ ಅನುಕೂಲವಾಗಿಲ್ಲವೇ ? ಎಂದರೆ, ಮೊದಲು ಒಂದು ಚೀಲ ಬೆಳೆಯುತ್ತಿದ್ದಲ್ಲ, ಈಗ ಅದಕ್ಕಿಂತ ಜಾಸ್ತಿ ಬೆಳೆಯುತ್ತಿದ್ದಾರೆ ಎಂದು ಹೇಳಿದ. ಇದರ ಖರ್ಚು ಶೇಕಡಾ 25ರಷ್ಟು ಸರ್ಕಾರ ವಹಿಸಿಕೊಳ್ಳುತ್ತದೆ. ಬಾಕಿ ಇದ್ದದ್ದನ್ನು ಅವರಿಗೆ ಹಾಕುತ್ತೇವೆ. ಇದರಿಂದ ಅಲ್ಲಿ ನೀರಿನ ಶೀತ ಉಳಿಯುತ್ತದೆ, ಕೊಚ್ಚಿಕೊಂಡು ಹೋಗತಕ್ಕದ್ದು ತಪ್ಪುತ್ತದೆ ಮತ್ತು ಕೆರೆಗಳ ಹೂಳು ಜಾಸ್ತಿಯಾಗತಕ್ಕದ್ದನ್ನು ತಪ್ಪಿಸುತ್ತದೆ. ಇದರಿಂದ ನಾನಾ ರೀತಿಯ ಅನುಕೂಲ ಉಂಟು. ಇನ್ನೂ ಕೋಟ್ಯಾಂತರ ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಆಮೇಲೆ ಮಳೆ ಬಾರದಿರತಕ್ಕಂತಹ ಒಳ ಪ್ರದೇಶ ನಮ್ಮ ರಾಜ್ಯದಲ್ಲಿ ಮೂರನೇ ಎರಡು ಭಾಗ ಇದೆ. ಸಾಧ್ಯವಾದ ಕಡೆಗಳಲ್ಲಿ ಈ ಕಾಂಟೂರ್ ಬಂಡಿಂಗ್ ಮಾಡತಕ್ಕದ್ದು ಅವಶ್ಯ.

ಇನ್ನು ಅಗ್ರಿಕಲ್ಚರಲ್ ಸ್ಕೂಲ್ ಬೇಕೆಂದು ಹೇಳುತ್ತಿದ್ದಾರೆ. ಇವತ್ತು ಕೇವಲ ಗ್ರಾಜುಯೇಟ್ ಆದರೆ, ಏನೂ ಕೆಲಸ ಮಾಡುವುದಕ್ಕೆ ಬರುವುದಿಲ್ಲ. ಇವತ್ತು ಅನೇಕ ದೃಷ್ಟಿಯಿಂದ ನಾವು ಆಲೋಚನೆ ಮಾಡಿದರೆ, ವ್ಯವಸಾಯವು ಸರಿಯಾದ ರೀತಿಯಲ್ಲಿ ಅಭಿವೃದ್ಧಿಯಾಗಬೇಕಾದರೆ, ಸಾಕಷ್ಟು ವಿದ್ಯಾವಂತರಾದ ತರುಣರು ಮುಂದೆ ಬರಬೇಕು. ಮ್ಯಾಟ್ರಿಕ್ಯುಲೇಶನ್ ಬಿ.ಎ., ಬಿ.ಎಸ್‌ಸಿ. ಮಾಡುವುದಕ್ಕಿಂತ ಇಂಥ ಸ್ಕೂಲುಗಳನ್ನು ಮಾಡಿ, ಹೈಸ್ಕೂಲಿನಲ್ಲಿರುವಾಗಲೇ ಒಂದೆರಡು ವರ್ಷ ಜಾಸ್ತಿ ಮಾಡಿ, ಇದನ್ನು ಮಾಡಿದರೆ ಅನುಕೂಲವಾಗುತ್ತದೆ. ಒಂದು ದೃಷ್ಟಿಯಿಂದ ಇಂಥ ಸ್ಕೂಲುಗಳನ್ನು ಹೆಚ್ಚು ಮಾಡುವುದು ಬಹಳ ಆವಶ್ಯಕವೆಂದು ಕಾಣುತ್ತದೆ. ಅನೇಕ ವಿದ್ಯಾವಂತ ತರುಣರು ಕೆಲಸ ಮಾಡುತ್ತಿದ್ದಾರೆ. ಮೊದಲು ಪ್ರತಿಯೊಂದು ಜಿಲ್ಲೆಗೂ ಮಾಡಿ, ಅನಂತರ ತಾಲ್ಲೂಕಿಗೆ ಮಾಡುವುದು ಒಳ್ಳೆಯದು.

ಇನ್ನು ಫರ್ಟಿಲೈಸರ್ಸ್ ಸಾಕಷ್ಟು ಇಲ್ಲವೆಂದು ಹೇಳುತ್ತಿದ್ದಾರೆ. ಈ ಮುಂಗಾರು ಪೈರಿಗೆ ಏನೇನು ಬೇಕು, ಪೆಸ್ಟಿಸೈಡ್ಸ್, ಇನ್‌ಸೆಕ್ಟಿಸೈಡ್ಸ್ ಇದಕ್ಕೆ ಅಷ್ಟೊಂದು ತೊಂದರೆ ನಮ್ಮಲ್ಲಿ ಇಲ್ಲ. ಮತ್ತು ಕಡಿಮೆಯಾಗುತ್ತಿದೆ. ಕೇಂದ್ರ ಸರ್ಕಾರದವರು ಸಾಕಷ್ಟು ಪೂರೈಸುತ್ತೇವೆಂದು ಈಗಾಗಲೇ ಒಪ್ಪಿಕೊಂಡಿದ್ದಾರೆ. ಇನ್ನು ಬೆಲೆಯ ವಿಚಾರದಲ್ಲಿ ಈಗ ಸರ್ಕಾರದವರು ನಿಗದಿ ಮಾಡಿರತಕ್ಕಂಥದ್ದು ಸರಿಯಾಗಿದೆ. ವ್ಯವಸಾಯಗಾರರಿಗೆ ಕೊಡತಕ್ಕ ದುಡ್ಡು ಕಡಿಮೆ ಎಂದು ಹಲವರು ಹೇಳಿದರು. ಇನ್ನು ಎರಡು ಮೂರು ರೂಪಾಯಿ ಜಾಸ್ತಿ ಕೊಡಬಹುದೇ ವಿನಹ ಹೆಚ್ಚಾಗಿ ಜಾಸ್ತಿ ಮಾಡಿದರೆ, ತಿನ್ನುವವರಿಗೂ ತೊಂದರೆಯಾಗುತ್ತಿದೆ. ವ್ಯವಸಾಯಗಾರನು ಏನು ಬೆಳೆಯುತ್ತಾನೆ, ಅವನು ಸಾಕಷ್ಟು ಉತ್ತೇಜನ, ಅಭಿಮಾನದಿಂದ ಬೆಳೆಯಬೇಕೆಂದಿದ್ದರೆ, ಒಳ್ಳೆಯ ಧಾರಣೆಯೂ ಅವನಿಗೆ ಸಿಗಬೇಕು. 30-40 ಚೀಲದಲ್ಲಿ ಅವನಿಗೆ ಏನೂ ಗಿಟ್ಟುವುದಿಲ್ಲ. ಸರ್ಕಾರದವರು 47-50 ರೂಪಾಯಿ ಮಾಡಿದ್ದಾರೆ. ಅದು 50 ರೂಪಾಯಿಗೆ ಕಡಿಮೆ ಇರಬಾರದು. ನಾನು ಮೊನ್ನೆ ಹರಿಯಾಣಕ್ಕೆ ಹೋಗಿದ್ದೆ. ಅಲ್ಲಿ ಅವರು 120ಕ್ಕೆ ಮಾರುತ್ತಿದ್ದರಂತೆ, ಈಗ 60-50 ರೂಪಾಯಿಗೆ ಇಳಿದಿದೆ. ಜೋನ್ ಪದ್ಧತಿಯನ್ನು ತೆಗೆದುಬಿಟ್ಟರೆ, 70-80 ರೂಪಾಯಿಗೆ ಮಾರಬಹುದು ಎಂದು ಒತ್ತಾಯ ಮಾಡುತ್ತಿದ್ದಾರೆ. ಅಲ್ಲಿ ಸ್ವಲ್ಪಮಟ್ಟಿಗೆ ಜೋರ್ ಸಿಸ್ಟಂ ನಡೆಗೊಳಿಸಿದ್ದಾರೆ. ಈ ಬೆಲೆಯು ತೀರಾ ಕಡಿಮೆಯಾದಾಗ ಅದು ಕಡಿಮೆಯಾಗದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯವಾಗಿದೆ. ತೀರಾ ಕಡಿಮೆಯಾದಾಗ ಸರ್ಕಾರದವರು ಅದನ್ನು ಕೊಂಡುಕೊಳ್ಳುವುದಕ್ಕೆ ತಯಾರಾಗಿರಬೇಕು.

ಶ್ರೀ ಎಸ್. ಗೋಪಾಲಗೌಡ.—ಸಪೋರ್ಟ್ ಪ್ರೈಸ್ ಏನಿದೆ, ತಾವು 45 ಇದೆ, ಅದಕ್ಕಿಂತ ಕಡಿಮೆ ಹೋದಾಗ ಸರ್ಕಾರದವರು ಕೊಳ್ಳುವುದಾದರೆ ಅದು ರೈತರಿಗೆ ಹಿತವಾಗುತ್ತದೆ ಎಂದು ಹೇಳುತ್ತೀರಿ. ಮಾರ್ಕೆಟ್ಟಿನಲ್ಲಿ 30 ರೂಪಾಯಿ ಕ್ವಿಂಟಾಲಿಗೆ ಜಾಸ್ತಿ, ಇದ್ದಾಗ್ಯೂ ನೀವು ಕೊಡಲೇ ಬೇಕೆಂದು ಹೇಳುವುದು ತಪ್ಪಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಹೇಳತಕ್ಕದ್ದು ವಾಸ್ತವಾಂಶ. ಸುಮಾರು 25 ರೂಪಾಯಿ ವ್ಯತ್ಯಾಸ ಇರುತ್ತದೆ. ಸಪೋರ್ಟು ಪ್ರೈಸ್ 15-20 ರೂಪಾಯಿ ಕಡಿಮೆ ಇರುತ್ತದೆ. ವಿಪರೀತ ವ್ಯತ್ಯಾಸ ಇದ್ದ ಹಾಗೆ ಆ ರೀತಿ ಮಾಡಬಾರದು. ಈಗಾಗಲೇ ಅರ್ಧ ಲೆವಿಯನ್ನು ಕೊಟ್ಟಿದ್ದಾರೆ. ಇನ್ನರ್ಧದಷ್ಟು ಲೆವಿ ಕೊಡಬೇಕಾಗಿದೆ. ಇದನ್ನು ಮಾನ್ಯ ಸದಸ್ಯರೆಲ್ಲರೂ ರೈತರಿಗೆ ಕೊಡುವಂತೆ ಹೇಳಿ ಅವಷ್ಟು ಹೆಚ್ಚಾಗಿ ರಾಜ್ಯದಲ್ಲಿ ಬಫರ್ ಸ್ಟಾಕನ್ನು ಹೆಚ್ಚು ಮಾಡಬೇಕೆಂದು ಮಾಡುತ್ತಿದ್ದಾರೆ. ಕೇಂದ್ರ ಸರಕಾರದವರು ಕೂಡ ಬಫರ್ ಸ್ಟಾಕ್ ಹೆಚ್ಚು ಮಾಡಬೇಕೆಂದು ಮಾಡುತ್ತಿದ್ದಾರೆ. ಹೀಗೆ ಸ್ಟಾಕ್ ಮಾಡಿದರೆ ಇದು ಜನಕ್ಕೆ ಕಷ್ಟ ಕಾಲದಲ್ಲಿ ಸಹಾಯವಾಗುತ್ತದೆ. ಇವರಿಗೆ ಅನುಕೂಲ ಮಾಡಬೇಕೆಂದು ಈಗ ಲೆವಿಯನ್ನು ಎಲ್ಲ ಕಡೆಯಲ್ಲೂ ಒಂದು ರೀತಿಯಲ್ಲಿ ವಸೂಲು ಮಾಡಬೇಕೆಂದು ಪ್ರಯತ್ನ ಮಾಡಲಾಗಿದೆ ಅದರಂತೆ ವಸೂಲೂ ಆಗಿದೆ. ಆದುದರಿಂದ ಲೆವಿ ಕೊಡುವುದಕ್ಕೆ ಯಾವ ತರಾರುಗಳೂ ಆಗದಂತೆ ಮಾಡಬೇಕು ಎಂದು ಮಾನ್ಯ ಸದಸ್ಯರಲ್ಲಿ ನಾನು ಪುನಃ ಮನವಿ ಮಾಡಿಕೊಳ್ಳುತ್ತೇನೆ. ಇದಕ್ಕೆ ತಕ್ಕ ಹಾಗೆ ಬೆಲೆಗಳನ್ನು ಕೂಡ ನಿಗದಿ ಮಾಡಲಾಗಿದೆ.

ಇನ್ನು ಸೀಡ್ ಫಾರಂಸ್ ಬಗ್ಗೆ ಇಲ್ಲಿ ಹೇಳಿದರು. ಇದು ಸಾಕಷ್ಟು ಈಗ ಇಲ್ಲ. ಇದನ್ನು ಅಲ್ಲಲ್ಲಿ ಮಾಡಬೇಕು. ನಮ್ಮಲ್ಲಿ ಸುಮಾರು 87 ಸೀಡ್ ಫಾರಂಗಳಿವೆ ಮತ್ತು ಇನ್ನೂ 23 ಸೀಡ್ ಫಾರಂಗಳನ್ನು ಮಾಡಬೇಕೆಂದೂ ಇದ್ದೇವೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇಂತಹ ಸೀಡ್ ಫಾರಂಗಳನ್ನು ಮಾಡುವುದು ಅಷ್ಟು ಸರಿಯಾಗಿರುವುದಿಲ್ಲ. ಒಂದೆರಡು ತಾಲ್ಲೂಕುಗಳನ್ನು ಸೇರಿಸಿ ಅಲ್ಲಿನ ಬೇಡಿಕೆಗಳನ್ನು ನೋಡಿಕೊಂಡು ಸೀಡ್ ಫಾರಂಗಳನ್ನು ಮಾಡಬೇಕೆಂದು ಇದೆ. ಇಲ್ಲಿ ಒಂದು ಸಂತೋಷದ ಮಾತು ಹೇಳಬೇಕಾಗಿದೆ. ಮೈಸೂರು ರಾಜ್ಯದಲ್ಲಿ ಸೀಡ್ ಫಾರಂಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಮಾಡಿದ್ದಾರೆ. ಇದನ್ನು ಇನ್ನೂ ಜಾಸ್ತಿ ಮಾಡಿ ಬೀಜಗಳನ್ನು ಮಾಡಿದರೆ ಅದನ್ನು ಖರ್ಚು ಮಾಡುವುದೇ ಕಷ್ಟವಾಗುತ್ತದೆ. ಇದರ ಬಗ್ಗೆ ಸ್ವಲ್ಪ ಎಚ್ಚರಿಕೆಯಿಂದ ಇದ್ದು ಅವಶ್ಯಕತೆಗೆ ತಕ್ಕಂತೆ ಸೀಡ್ ಫಾರಂಗಳನ್ನು ಮಾಡಬೇಕು. ರೈತರಿಗೆ ಕಮರ್ಷಿಯಲ್ ಕ್ರಾಪ್‌ಗಳನ್ನು ಬೆಳೆಯುವುದಕ್ಕೆ ಬೇಕಾದ ಬೀಜಗಳನ್ನು ಒದಗಿಸಿಕೊಡಬೇಕು. ಆ ರೀತಿ ಈಗ ಒದಗಿಸುತ್ತಿದ್ದಾರೆ ಅದರಂತೆ ರೈತರು ಕೂಡ ಬಹಳ ಉತ್ಸಾಹದಿಂದ ಬೆಳೆಯನ್ನೂ ಮಾಡುತ್ತಿದ್ದಾರೆ. ಕೆಲವು ಕಡೆ ರೈತರು ಬಹಳ ಚೆನ್ನಾಗಿ ಬೆಳೆದಿದ್ದಾರೆ. ಬೀಜಗಳನ್ನು ಬಹಳ ಹೆಚ್ಚು ಮಾಡಿ ಕೆಲವು ಕಡೆ ಅವು ಖರ್ಚಾಗದೇ ಉಳಿಯುತ್ತಿವೆ. ಇದರ ಬಗ್ಗೆ ಒಂದು ಸರಿಯಾದ ಕಾನೂನು ಮಾಡಬೇಕು ಎಂದು ನನಗೆ ತೋರುತ್ತದೆ. ಕೆಲವು ವೇಳೆ ಸರಿಯಾದ ಬೀಜಗಳನ್ನು ಸಕಾಲದಲ್ಲಿ ಉಪಯೋಗಿಸದೇ ಇದ್ದರೆ ಅವು ಕೆಟ್ಟು ಹೋಗುತ್ತವೆ. ಆದುದರಿಂದ ಇದಕ್ಕೆ ತಕ್ಕಂತೆ ಸಾಕಷ್ಟು ಕಮರ್ಷಿಯಲ್ ಕ್ರಾಪ್‌ಗಳ ಬೀಜ ಕೆಟ್ಟು ಹೋಗುವುದನ್ನು ತಪ್ಪಿಸಲು ಸರಿಯಾದ ಒಂದು ಕಾನೂನು ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಹಾಗೇನೇ ಇಲ್ಲಿ ಮಾನ್ಯ ಸದಸ್ಯರು ವ್ಯವಸಾಯದ ಅಭಿವೃದ್ಧಿ ಬಗ್ಗೆ ಅನೇಕ ವಿಚಾರಗಳನ್ನು ಇಲ್ಲಿ ಹೇಳಿದ್ದಾರೆ. ಅದನ್ನೆಲ್ಲಾ ವಿಚಾರ ಮಾಡಿ ತಕ್ಕ ಕಾರ್ಯಕ್ರಮಗಳನ್ನು ಎಲ್ಲೆಲ್ಲಿ ತೆಗೆದುಕೊಳ್ಳಬೇಕೋ ಅಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವಂತೆ ಈಚಿನ ರೈತನಲ್ಲಿ ಉತ್ಸಾಹ ಹೆಚ್ಚಾಗುತ್ತಿದೆ ಮತ್ತು ಸಾಕಷ್ಟು ರೀತಿಯಲ್ಲಿ ಸಹಾಯ ಸಲಕರಣೆಗಳನ್ನು ರೈತರಿಗಾಗಿ ಒದಗಿಸುತ್ತಿರುವುದರಿಂದ ಅವರು ಹೆಚ್ಚು ಬೆಳೆ ಬೆಳೆಯಲು ಸಾಧ್ಯವಾಗಿದೆ. ಮೈಸೂರು ರಾಜ್ಯದಲ್ಲಿ ಇನ್ನು ಮುಂದೆ ದವಸದ ಕೊರತೆ ಇಲ್ಲದಂತೆ ಹೆಚ್ಚು ಬೆಳೆ ಬೆಳೆಯುತ್ತಿದ್ದಾರೆ ಮತ್ತು ದೊಡ್ಡ ದೊಡ್ಡ ನೀರಾವರಿ ಯೋಜನೆಗಳೂ ಕೂಡ ಆಗುತ್ತಿರುವುದರಿಂದ ಒಳ್ಳೆಯ ಬೆಳೆ ಮಾಡುತ್ತಿದ್ದಾರೆ. ಮೆಕ್ಕೆ ಜೋಳ, ಬಾಜ್ರಾ, ಸಜ್ಜೆ ಮುಂತಾದ ಬೆಳೆಯನ್ನು ರೈತರು ಹೆಚ್ಚು ಹೆಚ್ಚಾಗಿ ಬೆಳೆಯುತ್ತಿದ್ದಾರೆ ಮತ್ತು ಸಾಕಷ್ಟು ಉತ್ತಮವಾಗಿ ಬೆಳೆಯುತ್ತಿದ್ದಾರೆ. ಕೆಲವು ಕಡೆಯಂತೂ ರೈತರು ಮೆಚ್ಚತಕ್ಕಂತೆ ಒಳ್ಳೆಯ ಫಸಲನ್ನು ಬೆಳೆಯುತ್ತಿದ್ದಾರೆ. ಕೆಲವು ಕಡೆಗಳಲ್ಲಿ ನಾಲ್ಕು ಚೀಲ ದವಸ ಬೆಳೆಯುತ್ತಿದ್ದವರು ಇಂದು 20 ಚೀಲದಷ್ಟು ದವಸವನ್ನು ಬೆಳೆಯುತ್ತಿದ್ದಾರೆ. ರೈತರಲ್ಲಿ ಒಂದು ರೀತಿಯಾದ ಹೊಸ ಹುರುಪು ಬಂದಿದೆ ಮತ್ತು ಸಾಕಷ್ಟು ಉತ್ತೇಜನವೂ ಅವರಿಗೆ ಸಿಗುತ್ತಿದೆ. ಆದುದರಿಂದ ರೈತರ ಈ ಉತ್ಸಾಹ ಕಡಿಮೆಯಾಗದಂತೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುವುದು ಸಾಧ್ಯವಿದೆ. ಆದಾಗ್ಯೂ ಈ ವರ್ಷ ಸ್ವಲ್ಪ ಆಹಾರಕ್ಕಾಗಿ ತೊಂದರೆಯಾಗಿದೆ. ಈ ಸಾರಿ ಮುಂಗಾರು ಫಸಲು ಚೆನ್ನಾಗಿ ನಾವು ನಿರೀಕ್ಷಿಸಿದಂತೆ ಆಗಿದೆ. ಸುಮಾರು ೦.೦ ರೂಪಾಯಿಯಲ್ಲಿ ಹದಿನಾಲ್ಕಾಣೆಯಷ್ಟು ಬೆಳೆ ಬಂದಿದೆ. ಆದರೆ ನಮಗೆ ಅಕ್ಟೋಬರು ತಿಂಗಳಲ್ಲಿ ಹಿಂಗಾರು ಮಳೆ ಸರಿಯಾಗಿ ಬರದೇ ಹೋದುದರಿಂದ ಸ್ವಲ್ಪ ಕಷ್ಟವಾಯಿತು. ಈಗ ಅದಕ್ಕಾಗಿ ಅಲ್ಲಲ್ಲಿ ಕಷ್ಟ ನಿವಾರಣೆ ಕೆಲಸಗಳು ಹಾಗೂ ಕಾಮಗಾರಿಗಳನ್ನು ಅಲ್ಲಲ್ಲಿ ಮಾಡುತ್ತಿದ್ದಾರೆ ಮತ್ತು ಇದಕ್ಕೆ ಸುಮಾರು ಎರಡು ಕೋಟಿಯಷ್ಟು ಖರ್ಚು ಕೂಡ ಬರುತ್ತಿದೆ. ಮೈಸೂರು ರಾಜ್ಯಕ್ಕೆ ಹಿಂಗಾರು ಮಳೆ ಬಾರದೆ ಸ್ವಲ್ಪ ತೊಂದರೆಯಾಗಿತ್ತು. ಈಗ ನಮ್ಮ ಕಷ್ಟಗಳು

(ಶ್ರೀ ಎಸ್. ನಿಜಲಿಂಗಪ್ಪ)

ನಿವಾರಣೆಯಾಗುತ್ತ ಬರುತ್ತಿದೆ ಇದು ಒಂದು ಸಂತೋಷದ ವಿಚಾರ. ಸಾಕಷ್ಟು ಜನ ಇಂದು ಜಾಸ್ತಿ ಬೆಳೆಯುತ್ತಿದ್ದಾರೆ. ಫಸಲು ಕೂಡ ಈ ಸಾರಿ ಚೆನ್ನಾಗಿ ಬಂದಿದೆ. ಆದರೆ ಸಾಕಷ್ಟು ದವಸ ಜನಕ್ಕೆ ಸಿಗುತ್ತಿಲ್ಲ. ಉತ್ಪತ್ತಿಯೇನೋ ಆಗುತ್ತಿದೆ. ಒಂದಕ್ಕೆ ಒಂದೂವರೆಯಷ್ಟು ಅಥವಾ ಒಂದೂಮುಕ್ಕಾಲರಷ್ಟು ಉತ್ಪತ್ತಿ ಹೆಚ್ಚಾಗುತ್ತಿದ್ದರೂ ಅದಕ್ಕೆ ತಕ್ಕಂತೆ ದೇಶದಲ್ಲಿ ಇಂದು ಜನಸಂಖ್ಯೆ ಕೂಡ ಜಾಸ್ತಿಯಾಗಿ ಬೆಳೆಯುತ್ತಿದೆ. ಇದರ ಬಗ್ಗೆ ಹೇಳುವಾಗ ಇಲ್ಲಿ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ವಿಚಾರದಲ್ಲಿ ಸಾಕಷ್ಟು ಆಸೆಯನ್ನೇನೋ ವಹಿಸುತ್ತಿದ್ದೇನೆ. ಇದು ಯಾವ ಪಾರ್ಟಿಗೂ ಸಂಬಂಧಪಟ್ಟ ಪ್ರಶ್ನೆಯಲ್ಲ.

ಶ್ರೀ ಎಚ್. ಸಿದ್ದವೀರಪ್ಪ.--ನಾವು ಇದನ್ನು ಒಪ್ಪುವುದಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.--ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರಿಗೇನೋ ಒಬ್ಬರೇ ಒಬ್ಬರು ಗಂಡು ಮಕ್ಕಳಿದ್ದಾರೆ. ಅದರಿಂದ ಅವರು ಹೇಳಬಹುದು. ನಾನು ಇದರ ಬಗ್ಗೆ ಹೇಳಬೇಕಾದರೆ ಒಬ್ಬರಿಗೆ ಎರಡು ಹಾಗೂ ಮೂರು ಮಕ್ಕಳು ಇದ್ದರೆ ಸಾಕು. ಇದಕ್ಕೆ ಹೆಚ್ಚು ಇರಬಾರದು. ಆದುದರಿಂದ ಫ್ಯಾಮಿಲಿ ಪ್ಲಾನಿಂಗ್ ಯೋಜನೆಯನ್ನು ಎಲ್ಲರೂ ಒಪ್ಪಲೇ ಬೇಕು. ಎಲ್ಲ ಮುಂದುವರಿದ ರಾಜ್ಯಗಳಲ್ಲೂ ಇದರ ಬಗ್ಗೆ ಸಾಕಷ್ಟು ಪ್ರಚಾರಗಳು ನಡೆದಿವೆ, ಮಿತಸಂತಾನ ಯೋಜನೆಯನ್ನು ನಮ್ಮಲ್ಲೂ ಆಚರಣೆಗೆ ತಂದರೆ ಮಿತವ್ಯಯವನ್ನು ಸಾಧಿಸಲು ಅನುಕೂಲವಾಗುತ್ತದೆ ಮತ್ತು ನಾವು ಬೆಳೆಯುವ ಬೆಳೆ ಕೂಡ ಅದಕ್ಕೆ ಸಾಕಾಗುತ್ತದೆ. ಹೆಚ್ಚು ಉತ್ಪಾದನೆಯಾಗುವಂತೆ ಹೆಚ್ಚು ಮಕ್ಕಳು ಇರುತ್ತಿದ್ದರೆ ಅದರಿಂದ ಜನಕ್ಕೆ ಅನುಕೂಲಗಳು ಸಿಗುವುದಿಲ್ಲ. ಹೆಚ್ಚಿಗೆ ಮಕ್ಕಳಾಗ ಬಾರದು ಇದರಿಂದಾಗಿ ಇಂದು ಜನಸಂಖ್ಯೆ ಬಹಳ ಜಾಸ್ತಿಯಾಗುತ್ತ ಹೋಗುತ್ತಿದೆ ಅದಕ್ಕೆ ತಕ್ಕಂತೆ ಉತ್ಪನ್ನ ಕೂಡ ಇರಬೇಕು. ಇವೆರಡೂ ಒಂದಕ್ಕೊಂದು ಹೊಂದಿಕೊಂಡಂತೆ ಇರಬೇಕು. ಇದರ ಬಗ್ಗೆ ಸರಿಯಾದ ಕೆಲಸಗಳನ್ನು ಮಾಡುವುದು ಅವಶ್ಯಕ. ಇಷ್ಟನ್ನು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಸಿದ್ದವೀರಪ್ಪ.--ಮಾನ್ಯ ಮುಖ್ಯ ಮಂತ್ರಿಗಳನ್ನು ಒಂದೆರಡು ವಿಚಾರಗಳಲ್ಲಿ ಸ್ಪಷ್ಟವಾಗಿ ಹೇಳಬೇಕೆಂದು ಕೇಳುತ್ತಿದ್ದೇನೆ. ಈಗ ಇಲಾಖೆಯಲ್ಲಿ ಪೆಸ್ಟಿಸೈಡ್ಸ್‌ಗಳ ಬಗ್ಗೆ ಸಾಕಷ್ಟು ಹಣ ಖರ್ಚು ಮಾಡಿ ಸ್ಪ್ರೇ ಮಾಡುವುದು ಹಾಗೂ ಇನ್ನಿತರ ಪ್ರೋಗ್ರಾಂಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ. ಮುಖ್ಯವಾಗಿ ಭತ್ತ ಬೆಳೆಯುವ ಭದ್ರಾ ನಾಲಾ ಪ್ರದೇಶಗಳಲ್ಲಿ ಇಲಿಗಳ ಕಾಟ ಬಹಳ ಜಾಸ್ತಿಯಾಗುತ್ತಾ ಹೋಗುತ್ತಿದೆ. ಇಲ್ಲಿರುವ ಇಲಿಗಳನ್ನು ಹಿಡಿಯಲಿಕ್ಕೆ ಹೋದರೆ ಅವುಗಳು ಹಿಂತಿರುಗಿ ನಮ್ಮನ್ನೇ ಹೊಡೆಯುವಂತೆ ಬರುತ್ತವೆ. ಜನಗಳನ್ನು ಕಂಡರೆ ಇಲಿಗಳಿಗೆ ಇಲ್ಲಿ ಹೆದರಿಕೆಯೇ ಇಲ್ಲ. ಇದೊಂದು ಬಹು ದೊಡ್ಡ serious menace ಆಗಿ ಪರಿಣಮಿಸಿದೆ. ಇಂತಹ ಇಲಿಗಳ ಕಾಟದಿಂದಾಗಿ ಬರುವ ಫಸಲಿನಲ್ಲಿ ಅರ್ಧಕ್ಕರ್ಧ ಕಡಿಮೆಯಾಗುತ್ತಿದೆ. ಇಂತಹ ಇಲಿಗಳ ಕಾಟಗಳನ್ನು ತಪ್ಪಿಸಲು ಸರಿಯಾದ ಪಾಷಾಣವೇ ಸಿಗುತ್ತಿಲ್ಲ ಎಂದೂ ಕೇಳುತ್ತೇವೆ ಮತ್ತು ಬಜೆಟ್ಟಿನಲ್ಲಿ ಕ್ರಿಮಿನಿವಾರಣೆಗಾಗಿ ಕೇವಲ ಎರಡು ಲಕ್ಷ ರೂಪಾಯಿಗಳಷ್ಟು ಮಾತ್ರ ಒದಗಿಸಿದ್ದಾರೆ. ಇದು ಸಾಲದು. ಇದನ್ನೂ ಇನ್ನೂ ಹೆಚ್ಚು ಮಾಡಿ ನೀರಾವರಿ ಪ್ರದೇಶಗಳಲ್ಲಿ ಎಲ್ಲೆಲ್ಲಿ ಬೆಳೆಗಳು ಆಗುತ್ತಿವೆಯೋ ಅಲ್ಲಿ ರೋಗಗಳು ಬಂದರೆ ಅವನ್ನು ನಿವಾರಣೆ ಮಾಡಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಭದ್ರಾ ಏರಿಯಾದಲ್ಲಿ ಇಲಿಗಳ ಕಾಟದಿಂದ ಫಸಲುಗಳು ಹಾಳಾಗುತ್ತಲಿವೆ. ಇದನ್ನು ಬಗೆಹರಿಸಲು ಸರಕಾರ ತಕ್ಕಕ್ರಮವನ್ನು ತೆಗೆದುಕೊಳ್ಳಲು ಇಲಾಖಾಧಿಕಾರಿಗಳಿಗೆ ಸೂಕ್ತವಾದ ಸೂಚನೆಗಳನ್ನು ಕೊಟ್ಟು ಸಹಾಯ ಮಾಡಿದರೆ ಇಲ್ಲಿ ಬೆಳೆ ಇನ್ನೂ ಚೆನ್ನಾಗಿ ಮಾಡಬಹುದು ಎಂದು ನಾನು ತಿಳಿದು ಕೊಂಡಿದ್ದೇನೆ. ಇನ್ನು ಜಾಸ್ತಿಯಾಗಿ ಚೌಳು ಭೂಮಿ ಇರುವ ಕಡೆ ಅದನ್ನು ಹೇಗೆ ಸರಿಪಡಿಸಬಹುದು ಎನ್ನುವುದರ ಬಗ್ಗೆ ಕೂಡ ಅಧಿಕಾರಿಗಳು ಸಹಾಯ ಮಾಡಿ ಒಳ್ಳೆಯ ಬೆಳೆ ಮಾಡಲು ಸಹಾಯ ಮಾಡುವುದು ಅಗತ್ಯವಾಗಿದೆ. ಇದರಿಂದ ಎಷ್ಟೋ ಕಡೆ ಬೆಳೆಗಳೇ ಬರುತ್ತಿಲ್ಲ. ಇದರ ಕಡೆಗೆ ಸರಕಾರ ಹೆಚ್ಚು ಗಮನ ಕೊಡಬೇಕು.

ಶ್ರೀ ಎಸ್. ನಿಜಲಿಂಗಪ್ಪ.--ಮಾನ್ಯ ಸದಸ್ಯರು ಹೇಳಿದಂತೆ ಇಲಿಗಳ ಕಾಟ ಹಾಗೂ ಹೆಗ್ಗಣಗಳ ಕಾಟ ಬಹು ಹೆಚ್ಚಾಗಿದೆ. ಇದಕ್ಕೆ ಕೇಂದ್ರ ಸರಕಾರದವರು ಈಗಾಗಲೇ ಒಂದು ಸ್ಕೀಂ ಮಾಡಿ ಮಾಡಿದ್ದಾರೆ. ಅದರ ಪ್ರಕಾರ ಆರು ರೀತಿಯಾದ ಕಾರ್ಯಕ್ರಮಗಳಿವೆ ಅದನ್ನು ಇಲ್ಲೂ ಕೂಡ ಜಾರಿಗೆ ತರಬೇಕೆಂದು ಇದೆ, ಫ್ಯೂಮಿಗೇಷನ್ ಇತ್ಯಾದಿ ಕೆಲವು ಕ್ರಮಗಳು ಇದರಲ್ಲಿವೆ. ನಾನು ಕೂಡ ಹೇಗಾದರೂ ಮಾಡಿ ಇಲಿಗಳ ಕಾಟ ತಪ್ಪಿಸಬೇಕೆಂದು ಸಾಕಷ್ಟು ಪ್ರಯತ್ನ ಮಾಡಬೇಕೆಂದು

ಅಧಿಕಾರಿಗಳಿಗೂ ಹೇಳಿದೆ ಮತ್ತು ಇದಕ್ಕೆ ಎಷ್ಟು ಜಾಸ್ತಿ ಖರ್ಚಾದರೂ ಮಾಡಬೇಕಾಗುತ್ತದೆ. ಇದನ್ನು ಮಾಡಿದರೆ ಫಸಲೂ ಚೆನ್ನಾಗಿ ಬೆಳೆಯುತ್ತದೆ. ಇಂತಹ ಪೆಸ್ಟಿಸೈಡ್ಸ್‌ಗಾಗಿ ಜಾಸ್ತಿ ಖರ್ಚು ಮಾಡಬೇಕೆಂದು ಮತ್ತು ಇದಕ್ಕೆ ಬೇಕಾದ ಎಲ್ಲ ಔಷಧಿಗಳನ್ನೂ ಉಪಯೋಗಿಸಿ ಆದಷ್ಟು ಇಲಿಗಳ ಕಾಟವನ್ನು ಕಡಿಮೆ ಮಾಡಬೇಕೆಂದು ಇದ್ದೇವೆ. ಇನ್ನು ಚೌಳು ಭೂಮಿ ಬಗ್ಗೆ ಹೇಳಿದರು. ಎರೆಭೂಮಿ ಎಲ್ಲೆಲ್ಲಿ ಜಾಸ್ತಿ ಇದೆಯೋ ಅಲ್ಲಿ ಇವು ಇವೆ. ಹರಿಹರ ಹಾಗೂ ದಾವಣಗೆರೆಯ ಕೆಲವು ಭಾಗಗಳಲ್ಲಿ ಇಂತಹ ಭೂಮಿ ಇದೆ, ಪಂಜಾಬ್‌ನಲ್ಲಿ ಕೂಡ ಶೇಕಡ 60ರಷ್ಟು ಭೂಮಿ ಒಂದು ಕಡೆ ಚೌಳು ಆಗಿದೆ. ಇಲ್ಲಿ ಯಾವ ಬೆಳೆಯನ್ನೂ ಮಾಡಲು ಬರುವುದಿಲ್ಲ. ಇದರ ನೀರನ್ನು ತೆಗೆದು ಬೇರೆ ಕಡೆ ಸಾಗಿಸಿ ಹೇಗೆ ಮಾಡಬಹುದು ಎನ್ನುವುದರ ಬಗ್ಗೆ ತಜ್ಞರು ಯೋಚನೆ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಲು ತಕ್ಕ ಪ್ರಯತ್ನಗಳನ್ನು ಮಾಡಬೇಕು. ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಬ್ಲಾಕ್ ಕಾಟನ್ ಸಾಯಿಲ್ ಬಗ್ಗೆ ಕೂಡ ಸಾಕಷ್ಟು ಗಮನ ಕೊಡಬೇಕಾದ್ದು ಅಗತ್ಯವಿದೆ, ಅದರಂತೆ ಗಮನ ಕೊಡುತ್ತಾರೆ.

ಶ್ರೀ ಚೆನ್ನಬಸನಗೌಡ ಹನುಮಂತಗೌಡ (ಗುಲಬುರ್ಗ).—ರೈತರಿಗೆ ಪಂಪುಸೆಟ್ಟು ಕೊಳ್ಳುವುದಕ್ಕೆ ಸಾಲ ಕೊಡುತ್ತೀರಿ. ಆದರೆ ಕರೆಂಟ್ ಕೊಡುವುದಕ್ಕೆ ಒಂದು ಸಾವಿರ ರೂಪಾಯಿ ಡಿಪಾಸಿಟ್ ಮಾಡಬೇಕು ಎಂದು ಇರುವುದರಿಂದ ರೈತರಿಗೆ ತೊಂದರೆಯಾಗಿದೆ. ಈ ಡಿಪಾಸಿಟ್ ಹಣ ಕಡಿಮೆ ಮಾಡಿ ಕರೆಂಟ್ ಕೊಡುವುದಕ್ಕೆ ಏನು ವಿಚಾರ ಮಾಡಿದ್ದೀರಿ ಹೇಳಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಇದು ಸರಕಾರದ ಗಮನದಲ್ಲಿದೆ. ಕಡಿಮೆ ಮಾಡಬೇಕು ಎಂಬ ವಿಚಾರ ಇದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಕೆಲವು ಕಡೆ ಭೂಮಿ ಬರಡು ಆಗುತ್ತದೆ. ಕಾಂಟೂರ್ ಬಂಡಿಂಗ್ ಸ್ಕೀಂ ಮಾಡಬೇಕು ಎಂದು ಹೇಳುತ್ತೇನೆ. ಇದಲ್ಲದೆ ಟ್ರ್ಯಾಕ್ಟರ್ಸ್ ದೊರೆತರೂ ಅನೇಕ ಸಲ ಕೆಟ್ಟು ಹೋಗಿ ಉಪಯೋಗವಾಗುವುದಿಲ್ಲ. ರಿಪೇರ್ ಮಾಡಲು ಸ್ಪೇರ್ ಪಾರ್ಟ್ಸ್ ಬೆಲೆ ಜಾಸ್ತಿಯಾಗಿದೆ. ಸ್ಪೇರ್‌ಪಾರ್ಟ್ಸ್ ಇಲ್ಲದೆ ತೊಂದರೆಯಾಗಿದೆ. ಟ್ರ್ಯಾಕ್ಟರ್ಸ್ ಒದಗಿಸುವ ಹಾಗೆ ಸ್ಪೇರ್‌ಪಾರ್ಟ್ಸ್ ಸಹ ತರಿಸಿ ಕೊಡುವ ಏರ್ಪಾಡು ಮಾಡುವುದಕ್ಕೆ ಸರಕಾರ ಯೋಚನೆ ಮಾಡುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಎರಡೂ ವಿಚಾರ ಸರಕಾರದ ಗಮನದಲ್ಲಿ ಇವೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಬಾವಿ ತೆಗೆಸುವುದಕ್ಕೆ ಸಾಲ ತೆಗೆದುಕೊಂಡಿರುವುದನ್ನು ತೀರಿಸಲು ಜಾಸ್ತಿ ಕಾಲಾವಕಾಶ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಸಾಲ ತೆಗೆದುಕೊಂಡವರಿಗೆ ಜಾಸ್ತಿ ಕಾಲಾವಕಾಶ ಕೊಟ್ಟದ್ದಾದರೆ ವಸೂಲಿ ಕಡಿಮೆಯಾಗುತ್ತದೆ. ಐದು ವರ್ಷಕ್ಕಿಂತ ಹೆಚ್ಚಿಗೆ ಕಾಲ ಕೇಳುವುದಕ್ಕೆ ಹೋಗಬೇಡಿ. ಯಾಕಂದರೆ ಇದರಲ್ಲಿ ಕಷ್ಟ ಇದೆ. ವಾಪಸ್ಸು ಕೊಡತಕ್ಕಂಥಾದ್ದನ್ನು ಕೊಟ್ಟುಬಿಟ್ಟರೆ ಅನುಕೂಲವಾಗುತ್ತದೆ. ನೂರರ ಬದಲು ನೂರೈವತ್ತು ಬಾವಿಗಳನ್ನು ತೆಗೆಸುತ್ತೇವೆ. ಐದು ವರ್ಷದಲ್ಲಿ ಸಾಲ ತೀರುವಂತೆ ಮಾಡಿದರೆ ಅವರಿಗೂ ಸುಖವಾಗುತ್ತದೆ.

ಶ್ರೀ ಮಾಣಿಕರಾವ್ ಶ್ಯಾಮರಾವ್ (ಔರಾದ್).—ಇಲಿ ಹೆಗ್ಗಣಗಳ ಕಾಟ ಜಾಸ್ತಿಯಾಗಿದೆ ಅವುಗಳನ್ನು ಸಾಯಿಸುವುದಕ್ಕೆ ಹಾಗೂ ಅವುಗಳ ಕಾಟ ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ. ಮೊನ್ನೆ ಪೇಪರ್‌ನಲ್ಲಿ ಒಂದು ಸಮಾಚಾರ ನಾನು ಓದಿದ್ದೇನೆ. ಇಲಿ ಹೆಗ್ಗಣಗಳ ಚರ್ಮ ಉಪಯೋಗಿಸುವುದಕ್ಕೆ ಬರುತ್ತದೆ. ಇದರಿಂದ ಹಣ ಸಂಪಾದನೆ ಮಾಡುವುದಕ್ಕೆ ಬರುತ್ತದೆ ಎಂದು ತಿಳಿದು ಬಂದಿದೆ. ಈ ವಿಚಾರ ವೆಟೆರಿನರಿ ಡಿಪಾರ್ಟ್‌ಮೆಂಟಿನವರಿಗೆ ತಿಳಿಸಬೇಕು. ಈ ತೊಂದರೆ ತಪ್ಪಿಸುವುದಕ್ಕೆ ಹೆಚ್ಚು ಹಣ ಒದಗಿಸಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ಗೊತ್ತಿಲ್ಲ. ಇದರಿಂದ ದುಡ್ಡು ಬಂದರೆ ಖಂಡಿತ ಮಾಡುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ವ್ಯವಸಾಯದ ಬೆಳೆ ನಾಶ ಮಾಡುವ ಕ್ರಿಮಿ ಕೀಟಕಗಳನ್ನು ನಾಶ ಮಾಡುವ ಔಷಧಿಗಳನ್ನು ಮಾರಾಟ ಮಾಡುವ ಮತ್ತು ಕೊಂಡುಕೊಳ್ಳುವವರಲ್ಲಿ ವ್ಯತ್ಯಾಸ ಹೆಚ್ಚಾಗಿ ಕಂಡುಬರುತ್ತದೆ. ಇದರಲ್ಲಿ ಕಂಸ್ಯೂಮರ್ಸ್‌ಗೆ ಉಳಿತಾಯವಾಗಬೇಕು ರೈತನಿಗೆ ಹೆಚ್ಚು ಲಾಭ ಬರಬೇಕು. ಆದುದರಿಂದ ಹೆಚ್ಚಿನ ವ್ಯತ್ಯಾಸ ಇರುವುದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ನೀವು ಹೇಳಿದ್ದು ಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀ ಮಹದೇವ ಜಿ. ಬಣಕಾರ (ಬ್ಯಾಡಗಿ).—ರೈತನಿಗೆ ಕೊಡತಕ್ಕಂಥ ಸಾಲದ ವಿಷಯದಲ್ಲಿ ಒಂದು ಸಲಹೆ ಇಡಲು ಬಯುಸುತ್ತೇನೆ. ರೈತ ಅನೇಕ ರೀತಿಯಿಂದ ಸಾಲ ತೆಗೆದುಕೊಂಡಿದ್ದಾನೆ. ಪ್ರತಿಯೊಂದಕ್ಕೂ ಅವನಿಗೆ ಸಾಲ ಸಿಕ್ಕಿದೆ. ಆದುದರಿಂದ ರೈತನ ಅಸೆಟ್ಸ್ ಅಂಡ್ ಲೈಬಲೀಟೀಸ್ ಅಂದರೆ ಸರಕಾರದಲ್ಲಿ ಇರತಕ್ಕಂಥ ಸಾಲ ಎಷ್ಟು ಅವನ ಆಸ್ತಿ ಎಷ್ಟು ಇದನ್ನು ಲೆಕ್ಕ ಹಾಕಬೇಕು. ಅವನ ಆಸ್ತಿ ಎಷ್ಟೋ ಪಟ್ಟು ಹೆಚ್ಚಾಗಿದೆ. ಬ್ಯಾಂಕಿನಲ್ಲಿ ಇರುವ ಹಾಗೆ ಒಂದು ಪಾಸ್‌ಬುಕ್ ಮಾಡಬೇಕು. ಮತ್ತು ಈ ಪಾಸ್‌ಬುಕ್‌ನಲ್ಲಿ ಅಸೆಟ್ಸ್ ಅಂಡ್ ಲೈಬಲಿಟೀಸ್ ನಮೂದು ಮಾಡಬೇಕು. ಅಸೆಟ್ಸ್ ಅಂಡ್ ಲೈಬಲಿಟೀಸ್ ವೆರಿಫೈ ಮಾಡಿ ಸಾಲ ಕೊಡಬೇಕು. ಇಲ್ಲದಿದ್ದರೆ ರೈತ ಈ ಸಾಲಕ್ಕೆ ಬಡ್ಡಿ ತುಂಬುವುದರಲ್ಲಿಯೇ ತನ್ನ ಎಲ್ಲಾ ಆಸ್ತಿ ಮಾರಿಕೊಳ್ಳುತ್ತಾನೆ. ಪ್ರತಿಯೊಂದಕ್ಕೂ ಸಾಲ ತೆಗೆದುಕೊಳ್ಳುತ್ತಾನೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಜಮೀನು ಒತ್ತೆ ಹಾಕಿ ಸಾಲ ತೆಗೆದುಕೊಳ್ಳುತ್ತಾನೆ, ತಗಾಯಿ ಸಾಲ ತೆಗೆದುಕೊಂಡಿದ್ದಾನೆ. ಆದುದರಿಂದ ಒಟ್ಟು ಎಷ್ಟು ಸಾಲ ಇದೆ ಇದು ಗೊತ್ತಾಗುವುದಿಲ್ಲ. ಈ ರೀತಿ ಒಂದು ಪಾಸ್ ಬುಕ್ ವ್ಯವಸ್ಥೆ ಮಾಡಿದರೆ ರೈತ ಉಳಿಯುತ್ತಾನೆ; ಇಲ್ಲದಿದ್ದರೆ ಕಡ ಹುಟ್ಟಿ ಬಡವ ಕೆಟ್ಟ ಅನ್ನುವ ಹಾಗೆ ಆಗುತ್ತದೆ. ಈ ವ್ಯವಸ್ಥೆ ಮಾಡುತ್ತೀರಾ? ಸಾಲಕ್ಕೆ ಒಂದು ಮಿತಿ ಹಾಕುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ರೈತ ಸಾಲ ಬೇಡುತ್ತಾನೆ ಮತ್ತು ತೆಗೆದುಕೊಳ್ಳುತ್ತಾನೆ. ರೈತನಿಗೆ ಸಾಲ ಕೊಡದೇ ಇದ್ದರೆ ತೊಂದರೆಯಾಗುತ್ತದೆ. ಕಡ ಹುಟ್ಟಿ ಬಡವ ಕೆಟ್ಟ ಎಂದು ಅವರು ಹೇಳುವ ಹಾಗೆ ಆಗುವುದಿಲ್ಲ. ಸರಕಾರದ ದೃಷ್ಟಿಯಲ್ಲಿ ಮಿತಿ ಹಾಕುತ್ತಾ ಹೋದರೆ, ಲೆಕ್ಕ ಹಾಕಿದರೆ ರೈತನಿಗೆ ಸಾಲ ಸಿಕ್ಕುವುದಿಲ್ಲ. ಅವನ ಆಸ್ತಿ ಕಡಿಮೆ ಇದ್ದರೂ ಚಿಂತೆ ಇಲ್ಲ, ರೈತನಿಗೆ ದುಡಿಯತಕ್ಕಂಥ ಶಕ್ತಿ ಇದೆ, ಅವನು ಬೆಳೆಯುತ್ತಾನೆ ಎಂಬ ವಿಶ್ವಾಸ ನಂಬಿಕೆ ಇರುವಾಗ್ಗೆ ಅವನಿಗೆ ಹೆಚ್ಚಾಗಿ ಕೊಡಲು ಸರಕಾರ ಸಿದ್ಧವಾಗಬೇಕು.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಕಾಂಟೂರು ಬಂಡಿಂಗ್ ಇದೊಂದು ಅತ್ಯುತ್ತಮ ಸ್ಕೀಂ ಆಗಿದೆ. ಇದಕ್ಕೆ ಸಬ್‌ಸಿಡಿ ಕೊಡುತ್ತೀರಿ. ಆದರೆ ಇದು ಎಸ್ಟಾಬ್ಲಿಷ್‌ಮೆಂಟ್ ಚಾರ್ಜಿಗೆ ಖರ್ಚಾಗುತ್ತದೆ. ಮೊಳಕಾಲ್ಮೂರು ಬಳ್ಳಾರಿ ಭಾಗದಲ್ಲಿ ಕಾಂಟೂರು ಬಂಡಿಂಗ್‌ನಲ್ಲಿ ಖರ್ಚು ಮಾಡಿರುವುದನ್ನು ನೋಡಿದರೆ ಹೊಲದ ಬೆಲೆಗಿಂತ ಬಂಡಿಂಗ್ ಖರ್ಚು ಜಾಸ್ತಿಯಾಗಿದೆ. ಸಾಮೂಹಿಕವಾಗಿ 40-50 ರೂಪಾಯಿ ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ. ರಿಚ್ ಸಾಯಿಲ್ ಇದ್ದರೂ ಅಷ್ಟೇ ಹಾಕುತ್ತೀರಿ, ಸುಮಾರು ಸಾಯಿಲ್ ಇದ್ದರೂ ಅಷ್ಟೇ ಖರ್ಚು ಹಾಕುತ್ತೀರಿ. ಇದರಿಂದ ರೈತನಿಗೆ ಭಾರವಾಗುತ್ತದೆ. ಹೊಲ ಮಾರಿದರೂ ಈ ಖರ್ಚು ಮುಟ್ಟುವುದಿಲ್ಲ. ಆದುದರಿಂದ ಇದನ್ನು ಕಡಿಮೆ ಮಾಡಬೇಕು ಎಂದು ಸೂಚಿಸುತ್ತೇನೆ.

ಇನ್ನು ಹೈಬ್ರಿಡ್ ಜೋಳ ಬೆಳೆಯಿರಿ ಎಂದು ಹೇಳಿದ್ದೀರಿ. ಹೈಬ್ರಿಡ್ ಬೀಜ ತೆಗೆದುಕೊಂಡು ರೈತ ಬೆಳೆದಿದ್ದಾನೆ. ಅದನ್ನು ಸರಕಾರ ತೆಗೆದುಕೊಂಡಿಲ್ಲ. ಧಾರಣೆ ಕೂಡ ಕಡಿಮೆಯಾಗಿದೆ. ಬೆಳೆದದ್ದನ್ನು ತೆಗೆದುಕೊಂಡಿಲ್ಲ, ಇದರಿಂದ ರೈತನಿಗೆ ಹಾನಿಯಾಗಿದೆ. ಇದನ್ನು ವಿಚಾರ ಮಾಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ರೈತ ಇದನ್ನು ಜಾಸ್ತಿ ಬೆಳೆದಿದ್ದಾನೆ. ಸರಕಾರ ತೆಗೆದುಕೊಳ್ಳುತ್ತದೆ, ಅಂದರೆ ಸರಕಾರ ಎಲ್ಲವನ್ನೂ ತೆಗೆದುಕೊಳ್ಳುವುದಿಲ್ಲ. ಧಾರಣೆ ಕೂಡ ಕಡಿಮೆಯಾಗಿದೆ. ರೈತ ಕಷ್ಟದಲ್ಲಿದ್ದಾನೆ. ಆರೇಳು ರೂಪಾಯಿ ಕೊಡಬೇಕು ಎಂದು ಇದ್ದುದು ಮೂರು ಮೂರೂವರೆ ರೂಪಾಯಿಗೆ ಇಳಿದಿದೆ. ಇದು ಕಡಿಮೆಯಾಗಿದೆ. ಎಂಟಾಣೆ ಜಾಸ್ತಿ ಮಾಡಿ ತೆಗೆದುಕೊಳ್ಳಬೇಕು ಎಂದು ಆಜ್ಞೆ ಹೊರಡಿಸಿದೆ.

ಇನ್ನು ಕಾಂಟೂರು ಬಂಡಿಂಗ್ ವಿಚಾರದಲ್ಲಿ ಸ್ಟಾಫ್ ಖರ್ಚು ವಹಿಸಿಕೊಳ್ಳಬೇಕು ಅದನ್ನು ಕಡಿಮೆ ಮಾಡಬೇಕು ಎಂದರೆ ಕಷ್ಟವಾಗುತ್ತದೆ. ರೈತ ಇದನ್ನು ವಿಶ್ವಾಸದಿಂದ ಮಾಡಿಕೊಳ್ಳುತ್ತಾನೆ.

Sri DIGAMBARA RAO B. KALMANKAR (Aland).—The Hyderabad Karnatak Development Council has passed a resolution requesting Government to provide blasting machines since boring machines were not sufficient and there were rocky lands. Will the Government supply those blasting machines?

ಶ್ರೀ ಎಸ್. ನಿಜಲಿಂಗಪ್ಪ.—ಇಷ್ಟು ಅಷ್ಟು ಇದಕ್ಕೆ ಕೊಡುತ್ತೇವೆ. ಇದು ಜಾಸ್ತಿ ಬೇಕಾದರೆ ತರಿಸಿ ಕೊಡಬೇಕಾಗುತ್ತದೆ.

ಶ್ರೀ ಐ. ಸೋಮಶೇಖರಪ್ಪ (ಹೊಸನಗರ).—ವ್ಯವಸಾಯ ಇಲಾಖೆಯಲ್ಲಿ 50-60 ಬೋರಿಂಗ್ ಮೆಷಿನ್ಸ್ ಇವೆ. ಅವುಗಳನ್ನು ಕೊಡಿ ಅಂದರೆ ಸ್ಟ್ಯಾಫ್ ಇಲ್ಲ ಎಂದು ಹೇಳುತ್ತಾರೆ. ಜಿಯೋಲಾಜಿಕಲ್ ಡಿಪಾರ್ಟ್‌ಮೆಂಟ್‌ನಲ್ಲಿ ಸ್ಟ್ಯಾಫ್ ಇದೆ. ಆದುದರಿಂದ ವ್ಯವಸಾಯ ಇಲಾಖೆಯಲ್ಲಿ ಇರತಕ್ಕಂಥ ಈ ಬೋರಿಂಗ್ ಮೆಷಿನ್‌ಗಳನ್ನು ಜಿಯೋಲಾಜಿಕಲ್ ಡಿಪಾರ್ಟ್‌ಮೆಂಟಿಗೆ ವರ್ಗಾಯಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ನೋಡೋಣ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ರಾಯಚೂರಿನಲ್ಲಿ ಒಂದು ಅಗ್ರಿಕಲ್ಚರಲ್ ಕಾಲೇಜು ಪ್ರಾರಂಭ ಮಾಡಬೇಕು ಎಂದು ಹೇಳಿದ್ದೀರಿ. ಇದನ್ನು ಈ ಮನೆಯಲ್ಲಿ ಕೂಡ ತಿಳಿಸಿದ್ದೀರಿ. ಹಣ ಕೂಡ ಶೇಖರ ಮಾಡಿದ್ದಾರೆ. ಇದರ ಬಗ್ಗೆ ಯಾವ ನಿರ್ಧಾರ ತೆಗೆದುಕೊಂಡಿಲ್ಲ. ಅದನ್ನು ತಿಳಿಸಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಗುಲಬರ್ಗದಲ್ಲಿ ಕಾಲೇಜು ಆಗಿದೆ ಎಂದು ರಾಯಚೂರಿನಲ್ಲಿಯೂ ಬೇಕು ಎಂದು ಹೇಳಿದ್ದಾರೆ. ನೀರಾವರಿ ಜಾಸ್ತಿಯಾಗತಕ್ಕಂಥ ಕಾಲದಲ್ಲಿ ಅಗ್ರಿಕಲ್ಚರಲ್ ಎಂಜಿನಿಯರಿಂಗ್ ಕಾಲೇಜು ಮಾಡುತ್ತೇವೆ. ಇದರ ಅರ್ಧ ಖರ್ಚು ಕೊಡುತ್ತೇವೆ ಎಂದು ಹೇಳಿದ್ದಾರೆ. ಒಂದು ಕೋಟಿ ಅರವತ್ತು ಲಕ್ಷ ರೂಪಾಯಿಯಲ್ಲಿ ಸಾರ್ವಜನಿಕರು ಎಪ್ಪತ್ತು ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ವಸೂಲಿ ಕ್ರಮ ತೆಗೆದುಕೊಂಡಿದ್ದಾರೆ. ಅವರು ಇದನ್ನು ಮಾಡುತ್ತಾರೆ, ನಾವೂ ಮಾಡುತ್ತೇವೆ.

2-30 P.M.

Mr. CHAIRMAN.—I will now put the Demand No : 20 to the vote of the House.

The question is :

"That a sum not exceeding Rs. 7,08,05,00 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Agriculture.'"

The motion was adopted.

DEMAND Nos. 9, 10 and 11

Mr. CHAIRMAN.—Demands Nos. 9, 10 and 11 may be moved :

Sri S. R. KANTHI (Minister for Law and Parliamentary Affairs).—Sir, On the recommendation of the Governor I beg to move :

"That a sum not exceeding Rs. 41,05,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Parliament State/Union Territory Legislature".

Mr. CHAIRMAN.—Motion moved :

"That a sum not exceeding Rs. 41,05,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respeet of 'Parliament State/Union Territory Legislature."

Sri S. R. KANTHI —Sir, on the recommendatien of the Governor, I beg to move :

> "That a sum not exceeding Rs. 1,41,40,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969 in respect of 'Administration of Justice'."

Mr. CHAIRMAN.—Motion moved :

> "That a sum not exceeding Rs. 1,41,40,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969 in respect of 'Administration of Justice'."

Sri S. NIJALINGAPPA (Chief Minister).—On the recommendation of the Governor, I beg to move :

> "That a sum not exceeding Rs. 3,97,23,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'General Administration .'"

Mr. CHAIRMAN.—Motion moved :

> "That a sum not exceeding Rs. 3,97,23,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'General Administration.'"

All the three Demands are before the House for debate. The Hon'ble Members are free to offer their observations. Sri S. Sivappa will have to begin the debate.

Members' Representation.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಒಂದು ತುರ್ತಾದ ವಿಷಯವನ್ನು ತಮ್ಮ ಮೂಲಕ ಸಭೆಯ ಗಮನಕ್ಕೆ ತರಬೇಕೆಂದು ನಿಂತಿದ್ದೇನೆ. ಉಪವಾಸದ ಬಗ್ಗೆ ನಾನು ತಮ್ಮಲ್ಲಿ ಅನೇಕ ಸಲ ಹೇಳಿದೆ. ವಿಧಾನ ಸೌಧದ ಸುತ್ತಲೂ ಉಪವಾಸಗಳ ಸಂಖ್ಯೆ ಹೆಚ್ಚಾಗುತ್ತಿವೆ. ಅದು ಒಂದು ಅತೃಪ್ತಿಯ ಲಕ್ಷಣ. ಸರ್ಕಾರದವರು ಅಥವಾ ಇಲಾಖೆಯವರು ಯಾರೂ ಆ ಕಡೆ ಗಮನ ಕೊಟ್ಟಿರುವ ಹಾಗೆ ಕಾಣಿಸುವುದಿಲ್ಲ. ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳು ಉಪವಾಸ ಕೂತು ಬಹಳ ದಿವಸಗಳಾಗಿವೆ. ಸಂಬಂಧಪಟ್ಟ ಮಂತ್ರಿಗಳು ಏನು ಮಾಡುತ್ತಾರೋ ಏನೋ ಗೊತ್ತಾಗುತ್ತ ಇಲ್ಲ. ನೀರಿನ ಸಮಸ್ಯೆ ವಿಚಾರದಲ್ಲಿ ಕೆಲವರು ಉಪವಾಸ ಮಾಡುತ್ತಿದ್ದಾರೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ವಿಷಯ ಚರ್ಚೆ ಮಾಡುತ್ತೇನೆ, ನನಗೆ ಅವಕಾಶ ಕೊಟ್ಟಿಲ್ಲ, ಉಪವಾಸ ಕೂತಿದ್ದಾರೆ, ಎಂದು ಅದನ್ನು ಅಲ್ಲಿಗೇ ಬಿಟ್ಟರು. ಈಗ ಹೊಸದಾಗಿ ಕಮ್ಯುನಿಸ್ಟ್ ಪಾರ್ಟಿಯವರು ಉಪವಾಸ ಕುಳಿತುಕೊಂಡಿದ್ದಾರೆ. ಅವರು ಒಂದು ಬೇಡಿಕೆಯನ್ನೂ ಒಪ್ಪಿಸಿದ್ದಾರೆ. ಅದಕ್ಕೆ ಏನಾದರೂ ಸರ್ಕಾರದವರು ಸಮಾಧಾನ ಕೊಡುವುದಕ್ಕೆ ಸಾಧ್ಯವೇ ಅಥವಾ

ಹೀಗೆಯೇ ಎಲ್ಲರೂ, ಬೇಡಿಕೆಯನ್ನು ಇಟ್ಟವರೆಲ್ಲ, ದೇಶದಲ್ಲಿರುವವರೆಲ್ಲ ಉಪವಾಸ ಕುಳಿತು ಕೊಳ್ಳುವುದೇ? ಹೀಗೆಯೇ ಮುಂದುವರಿದರೆ ಇದಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ತಾವು ಸ್ವಲ್ಪ ಈ ವಿಷಯದ ಬಗ್ಗೆ ಸರ್ಕಾರದ್ದು ಧೋರಣೆ, ನೀತಿ, ಇದ್ದರೆ ತಿಳಿಸಬೇಕು.

Sri S. NIJALINGAPPA.—I do not know whether it will come at this stage. I do not know whether Hon'ble Members can take up this question at any time of the sitting of the House. But Sir, when you allowed the Member to put a question, I would like to answer it. I have already answered this point yesterday. I have said that it is unfortunate that for no reason at all, some friends, for political reasons, in order to bring pressure on the Government, undertake fasts without giving sufficient reasons. I do not know what exactly is the fast that is going on, to which my friend refers. There seem to be a plethora of fasts that are going on. One is by the Ayurveda people, another possibly by the allopathy people, another by HAL employees and yet another by the employees of the BEL. I do not know how many fasts are going on. Some friends came to me and told me about these Central Industries. I have written to the Ministers in the Centre and I have told their representatives that when I am in Delhi, I will take the opportunity of discussing the matter with the concerned Ministers and I have to go there. But even before I can go to Delhi and discuss these matters, if friends take up fasts, I do not know how anybody can help. Government cannot help. There are various other methods of solving their difficulties and it is better they take to other methods instead of undertaking fasts. I earnestly hope that friends here will advise them not to resort to fasts when there are methods open. I wish they will do it. I only appeal to the Members to advise them not to go on with their fasts.

Mr. CHAIRMAN.—When Sri Gopala Gowda rose to speak I thought he would speak on the Demands before the House. It is not correct to bring in matters that are not on the Agenda. There is a procedure for everything. This is not the way of agitating matters at any time.

I now call upon Sri Sivappa to open the Debate.

(Interruption by Sri V. N. Patil)

Sri S. S. SHETTAR (Hubli).—On a point of order, Sir. If the Chair is very particular about rules of procedure, I wish to state that it is not a call attention motion. All of a sudden a certain point is raised and once it has been allowed, I do not know under what procedure it has been allowed. But when other members raised Similar points, they are put down. Why only particular members are encouraged and others put down? Why should there be any discrimination?

Mr. CHAIRMAN.—It was not allowed. Let me make it clear that I never allowed Sri Gopal Gowda to raise this matter. When he rose to speak, I thought he was speaking on the Demand. The fact that he said

(MR. CHAIRMAN)

something does not mean that I permitted it. Therefore I request the Hon'ble Member to remove that idea from his mind. Only the Demands are before the House and if any of the Hon'ble Members have any grievances, let them come before the House in proper manner. I request the Hon'ble Members to follow the procedure strictly.

Sr. V. N. PATIL (Humnabad).—I want to make my point clear.

(Chairmnn on his legs)

Mr. CHAIRMAN.—It is not fair on the part of the Member to rise and speak when I am on my legs. Is there no limit for this? Let him please sit down. Mr. Patil is unnecessarily obstructing the proceedings of the House. Let him please take his seat......

(Sri V. N. Patil was still on his legs)

I am not going to allow a single minute for this purpose. What the member is speaking need not be recorded. It won't go to records. Please resume.

(Sri V. N. Patil persisted to speak)

****

Need not to be recorded. The hon. Member is creating unnecessary obstruction. Let him please resume his seat. I am on my legs.

(Srt V. N. Patil continued to be on his legs)

I am on my legs. I shall bring to the notice of the hon. Member Sri V. N. Patil Rule 308 which says:

> "The Speaker may direct any member whose conduct is, in his opinion, grossly disorderly to withdraw immediately from the Assembly, and any member so ordered to withdraw shall do so forthwith and shall absent himself during the remainder of the day's sitting."

Please do not compel me to use this provision by continuing such obstruction.........

Under the authority conferred on me under Rule 308 of the Rules of Procedure and Conduct of Business in the Mysore Legislative Assembly, I direct Mr. V. N. Patil to withdraw from the House......

Sri Patil should withdraw from the House.

**** Matter not recorded as ordered by the Chair

Sri V. N. PATIL.—Definitely, I will withdraw.

Mr. CHAIRMAN. – Let him please withdraw.

Sri V. N. PATIL.—In protest, I am withdrawing.

Mr. CHAIRMAN. —To withdraw immediately .....Please withdraw immediately.........Please withdraw immediately.

(*The hon'ble Member Sri V. N. Patil withdrew from the House.*)

Sri AZEEZ SAIT (Narasimharaja).—Mr. Speaker, Sir,......

Mr. CHAIRMAN. – The member will please resume his seat. I am on may begs.

ಶ್ರೀ ಅಜೀಜ್ ಸೇಟ್.—ಸ್ವಾಮಿ, ಸ್ವಾಮಿ.

ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. ಶ್ರೀ ಪಾಟೀಲರಿಗೆ ಮಾತನಾಡಲು ಅವಕಾಶ ಕೊಡಲಿಲ್ಲ. ಆದರೆ ಶ್ರೀ ಅಜೀಜ್ ಸೇಟರಿಗೆ ಅವಕಾಶ ಕೊಟ್ಟಿರಿ. ಇದು ಡಿಸ್‌ಕ್ರಿಮಿನೇಷನ್ ಅಲ್ಲವೇ ?

ಶ್ರೀ ಅಜೀಜ್ ಸೇಟ್.—ಶ್ರೀ ಬಸವರಾಜುರವರು ಶ್ರೀ ಪಾಟೀಲರಿಗೆ ಅವಕಾಶ ಕೊಡಲಿಲ್ಲ, ಅಜೀಜ್ ಸೇಟರಿಗೆ ಮಾತ್ರ ಅವಕಾಶ ಕೊಟ್ಟರು ಎಂದು ಹೇಳುತ್ತಿದ್ದಾರೆ.

Mr. CHAIRMAN. – Is the member raising a point of order ?

Sri AZEEZ SAIT.— You have permitted me to raise a point of order.

Mr. CHAIRMAN.—Let him please resume his seat.

Sri AZEEZ SAIT.—Please go into the records. You have permitted me to raise a point of order.

Mr. CHAIRMAN.—Nothing doing.

Sri S. S. SHETTAR. – I rise to a point of order, Sir. When a certain point was raised by an hon'ble, member the Minister was permitted to reply. I do not know whether it was calling attention motion or whether it is any Short Notice Question. How was it permitted at this juncture ? Why this anomalous position ? One Member was asked to put the question and another was asked to retire from the House. On account of this, a point of order has arisen. Under what authority or rule, all of a sudden a question is permitted to be raised even though it was not on the agenda. If it were there, when was it inserted in to-day's list of business ?

Mr. CHAIRMAN.—I have already said that nothing was permitted. When Sri Gopala Gowda stood up, I thought he wanted to raise something according to Rules. Merely because he said something, it does not mean that it had my permission. I had not permitted any motion to be taken. Now, everything should go according to the procedure. That point, I have already dealt. That point should not be raked up again.

Sri AZEEZ SAIT.—Mr. Speaker Sir, my humble submission is, I am on a point of order. The hon'ble Speaker himself who is the custodian of this House, permitted me to speak. So, I do not know under what provision, the permission given by the same Speaker has been withdrawn. I have been called upon to raise the point of order. I want a ruling on the point, whether once having been permitted, that permission could be withdrawn.

Mr. CHAIRMAN.—I understand.

Sri AZEEZ SAIT.—Let me finish my point of order. Please hear me patiently. I am sorry to say that you may not be in a position to give a ruling and do justice without hearing me sufficiently. So, permit me to speak. Please find out from the official records : you were good enough to permit me to speak. When I started speaking, another hon'ble Member intervened.

Mr. CHAIRMAN.—Let him please say what he wants to say, within a minute.

ಶ್ರೀ ಅಜೀಜ್ ಸೇಟ್.—ಅವಕಾಶ ಕೊಟ್ಟಮೇಲೆ ಪೂರ್ಣವಾಗಿ ಹೇಳಲು ಅನುಮತಿ ನೀಡಬೇಕು. ನನಗೆ ಮಾತನಾಡಲು ಅವಕಾಶ ಕೊಟ್ಟಿರಿ, ನಾನು ಮಾತನಾಡಲು ಎದ್ದಾಗ ಶ್ರೀ ಬಸವರಾಜುರವರು ಕ್ರಿಯಾಲೋಪವನ್ನು ಸೂಚಿಸಿದರು, ಅಜೀಜ್‌ಸೇಟರಿಗೆ ಅವಕಾಶ ಕೊಟ್ಟಿರಿ, ಉಳಿದವರಿಗೇಕೆ ಅವಕಾಶ ಕೊಡಲಿಲ್ಲ ಎಂದು ಕೇಳಿದರು. ಪುನಃ ನನಗೆ ಮಾತನಾಡಲು ಅವಕಾಶ ಕೊಟ್ಟಿರಿ.

Mr. CHAIRMAN.—A point of order is raised by the hon'ble Member Mr. Azeez Sait that having called upon to speak, he was not allowed to speak. The Chair was under the impression that Mr. Azeez Sait wanted to raise a point of order. It was only under that impression that he was allowed to rise in his seat and address this House. But no point of order was sought to be raised. He resumed his seat. In the circumstances, no point of order has arisen. Mr. Sivappa to speak.

Sri B. P. GANGADHAR (Tumku).—I have sent a letter...

Mr. CHAIRMAN.—I shall just find out what your letter is about !

Sri B. P. GANGADHAR.—I do not want to take much time.

Mr. CHAIRMAN.—An honourable and intelligent Member like Sri Gangadhar must hear me. If I permit him there are a number of other hon'ble Members desiring to rise and address. Why do the members embarrass me ? Whatever letter the member has sent, I will look into ; he need not worry about it.

† **Sri B. P. GANGADHAR.**—My difficulty is, when once the debate is initiated, I will not be in a position.........

Mr. CHAIRMAN.—I am not going to allow anything to be said which does not pertain to the subject.

Sri B. P. GANGADHAR.—I am not going to say much, Sir. Only a word about my letter. My difficulty is, when once the debate is started ....

Mr. CHAIRMAN.—I am not allowing ; I cannot allow. Now, Sri Sivappa may speak.

Sri B. P. GANGADHAR.—If you could kindly bear with me for one minute, I will explain.

Mr. CHAIRMAN.—No, Sri Sivappa may commence his speech.

Sri DIGAMBARA RAO B. KALMANKAR.—On a point of order, Sir. Sri Gangadhar is putting a proposition before this House that the matter which he has referred to in his letter is very important and that requires immediate attention. He must be given an opportunity to say what he has got to say before this House. This kind of not allowing the hon'ble member is actually obstructing the freedom of the member. Before the regular work is taken up, the hon'ble member may be permitted to explain. He is rising to say something, and he has been denied the opportunity to say what he has got to say.

Mr. CHAIRMAN.—Hon'ble Member Sri Digambara Rao has raised a point of order and probably by raising a point of order, he wants to advocate Sri Gangadhar who is himself a very able advocate. He wants to say that Sri Gangadhar wanted to move a very urgent matter before the House. For this, provision is prescribed and a procedure is prescribed and when that procedure is not followed, nothing in the nature of urgency can be brought before the House in the manner it is sought to be brought. Therefore, there is no point of order.

Sri B. P. GANGADHAR.—The Sepaker has got every liberty to give some latitude.

Mr. CHAIRMAN.—Let him leave it to the Speaker.

Sri B. P. GANGADHAR.—At least at the end of the day you may please consider.

Mr. CHAIRMAN.—I will consider if it is left to me.

DEMAND Nos. 9, 10, AND 11

(Debate Continued)

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಈ ದಿನ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಪಾರ್ಲಿಮೆಂಟರಿ ಸಚಿವರು ಕೂಡ ಮಂಡನೆ ಮಾಡಿರತಕ್ಕ ಬೇಡಿಕೆಗಳು ಈ ಶಾಸನ ಸಭೆಯಲ್ಲಿ ಮಂಡನೆ ಮಾಡಿರತಕ್ಕ ಬೇಡಿಕೆಗಳೆಲ್ಲಕ್ಕಿಂತಲೂ ಕೂಡ ಅತಿ ಪ್ರಾಮುಖ್ಯತೆಯನ್ನು ಹೊಂದಿವೆ. ಇವತ್ತು ಕೇಳಿರತಕ್ಕ ಹಣ ಕಡಿಮೆ ಇರಬಹುದು ಸುಮಾರು 4 ಕೋಟಿ ರೂಪಾಯಿಗಳನ್ನು ಸಾಮಾನ್ಯ ಆಡಳಿತಕ್ಕೆ ಮುಖ್ಯ ಮಂತ್ರಿಗಳು ಬೇಡಿಕೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಅದೇ ರೀತಿ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳೂ ಕೂಡ ಅವರ ಬಾಬು ನ್ಯಾಯಖಾತೆಗೆ ಸಂಬಂಧಪಟ್ಟ ವಿಚಾರಕ್ಕೆ ಇಟ್ಟಿದ್ದಾರೆ. ಇವತ್ತು ಮೈಸೂರು ದೇಶದ ಆಡಳಿತ ನಡೆಸತಕ್ಕ ಜವಾಬ್ದಾರಿಯನ್ನು ಹೊಂದಿರತಕ್ಕ ಇಲಾಖೆಗೆ ಸಂಬಂಧಪಟ್ಟ ವಿಚಾರವನ್ನು ನಾವು ಈ ಬೇಡಿಕೆಗಳ ಮುಖಾಂತರವಾಗಿ ಚರ್ಚೆಮಾಡಬೇಕಾಗಿದೆ. ಮಂತ್ರಿಮಂಡಲಕ್ಕೆ ಸಂಬಂಧಪಟ್ಟ ವಿಚಾರ ಮತ್ತು ಅವರ ಕೈಕೆಳಗೆ ಇರತಕ್ಕ ಸೆಕ್ರೆಟೇರಿಯಟ್ ಮತ್ತು ಅದಕ್ಕೆ ಒತ್ತಾಸೆಯಾಗಿ ನಿಂತಿರತಕ್ಕ ಜಿಲ್ಲಾ ಮತ್ತು ತಾಲ್ಲೂಕು ಆಡಳಿತಕ್ಕೆ ಸಂಬಂಧಪಟ್ಟ ಸಿಬ್ಬಂದಿ ವರ್ಗಕ್ಕೆ ಸೇರಿದಂತಹ ಆಡಳಿತ ಇದು ಎಷ್ಟೊಂದು ಬಿಗಿಯಾಗಿ ನಡೆದುಕೊಂಡು ಹೋಗುತ್ತಾ ಇದೆ ಎಂಬ ವಿಚಾರಕ್ಕೆ ನೇರವಾಗಿ ಸಂಬಂಧಪಟ್ಟ ಈ ಬೇಡಿಕೆ ಏಸಿದೆ ಇದನ್ನು ವಿಚಾರಮಾಡುವಾಗ ನಾನು ಒಂದೆರಡು ವಾಸ್ತವಾಂಶಗಳನ್ನು ಈ ಸಭೆಯ ಗಮನಕ್ಕೆ ತಮ್ಮ ಮುಖಾಂತರ ತರಲಿಚ್ಛಿಸುತ್ತೇನೆ. ಆಡಳಿತ ಸುಧರಣೆ ಮಾಡಬೇಕೆಂದು ಸರ್ಕಾರದವರು ಒಂದೆರಡು ಸಾರಿ ಆಯೋಗಗಳನ್ನು ರಚನೆ ಮಾಡಿದರು, ಮೊದಲನೆಯ ಸಾರಿ ಗೋರ್‌ವಾಲಾರವರ ನೇತೃತ್ವದಲ್ಲಿ ಈ ದೇಶದ ಆಡಳಿತವನ್ನು ಸುಧಾರಣೆ ಮಾಡುವುದಕ್ಕೆ ಸಲಹೆಯನ್ನು ಕೊಡಲು ಒಂದು ಕಮಿಟಿಯನ್ನು ಮಾಡಿದರು. ಅನಂತರ

(ಶ್ರೀ ಎಸ್. ಶಿವಪ್ಪ)

ಶ್ರೀಮಾನ್ ಜತ್ತಿಯವರ ಮಂತ್ರಿ ಮಂಡಲ ಇದ್ದಾಗ ಶ್ರೀಮಾನ್ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿ ಅವರೂ ಕೂಡ ದೇಶದ ಆಡಳಿತೆಯಲ್ಲಿ ಏನು ಸುಧಾರಣೆ ಮಾಡಬೇಕೆಂಬ ಅಂಶವನ್ನು ಒಳಗೊಂಡಿರತಕ್ಕ ದೊಡ್ಡ ದೊಡ್ಡ ಪುಸ್ತಕಗಳನ್ನು ಬರೆದು ಸರಕಾರಕ್ಕೆ ಕೊಟ್ಟಿದ್ದಾರೆ. ಇವತ್ತು ಸಭಾಪತಿಗಳೇ ತಮ್ಮ ಮುಖಾಂತರ ಕೇಳುತ್ತೇನೆ, ಯಾವ ಉದ್ದೇಶದಿಂದ ಈ ಕಮಿಟಿಗಳನ್ನು ನೇಮಕ ಮಾಡಿದರೋ—ಅವರು ಮಾಡಿದಂತಹ ಸಿಫಾರಸುಗಳನ್ನು ಇವರು ಕಾಯಾ ವಾಚಾ ಮನಸಾ ಈ ದೇಶದಲ್ಲಿ ಕಾರ್ಯಗತಮಾಡತಕ್ಕ ಮನಸ್ಸನ್ನು ಈ ಸರ್ಕಾರ ಮಾಡಿದೆಯೋ ? ಇಲ್ಲಿ ಕೇವಲ ನೆಪಮಾತ್ರಕ್ಕೆ ಈ ಆಯೋಗಗಳನ್ನು ರಚನೆ ಮಾಡಬೇಕು, ಅವುಗಳಿಂದ ತಮಗೆ ಸರಿಹೋದರೆ ಆಯಿತು ಅನ್ನಬೇಕು ಇಲ್ಲದೇ ಹೋದರೆ ಬೇಡ ಎಂಬ ಮನೋಭಾವ ಇವತ್ತು ಈ ಸರ್ಕಾರದಲ್ಲಿ ನಡೆಯುಕೊಂಡು ಬಂದಿದೆ. ಇದರಿಂದಲೇ ಇವತ್ತು ಈ ದೇಶದಲ್ಲಿ ಆಡಳಿತ ಇಷ್ಟೊಂದು ಹದಗೆಟ್ಟಿದೆ ಎಂಬುದನ್ನು ನಾವು ನೋಡಬಹುದಾಗಿದೆ. ಶ್ರೀಮಾನ್ ಗೋರ್‌ವಾಲಾರವರು ಅವರ ರಿಪೋರ್ಟಿನಲ್ಲಿ ಮೊದಲನೆಯ ಒಂದು ವಾಕ್ಯದಲ್ಲಿ ಏನು ಹೇಳಿದ್ದಾರೆ ಎಂಬುದನ್ನು ಓದಿದರೆ ಸಾಕು. ಅವರು ಏನು ಹೇಳುತ್ತಾರೆ :

> "Government and administrative efficiency is, as you know, even more a matter of morale than of technique, and the morale of an administration cannot be sustained if a dark cloud of suspicion is allowed to continue to overhang it. For morale to improve, the cloud must be dissipated. This can only be done by full and proper investigation and by proper action following on the investigation".

ಈ ಒಂದು ವಿಚಾರವನ್ನು ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಇವತ್ತು ಈ ದೇಶದ ಆಡಳಿತವನ್ನು ನಡೆಸತಕ್ಕ ಯಾವುದೇ ಅಧಿಕಾರ ಇರಲಿ ಆ ಅಧಿಕಾರ ತನ್ನ ಮೇಲಿನ ಒಂದು ಸಂಶಯದಿಂದ ಪಾರಾಗದ ಹೊರತು ಅಧಿಕಾರ ಸರಿಯಾಗಿ ಕೆಲಸ ಮಾಡುವ ಒಂದು ನೈತಿಕ ಹಕ್ಕನ್ನು ಕಳೆದುಕೊಳ್ಳುತ್ತದೆ ಎಂಬ ಒಂದು ವಿಷಯವನ್ನು ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ವಿಚಾರವನ್ನು ಸಾಧನೆ ಮಾಡುವುದಕ್ಕಾಗಿಯೇ ಅವರು ಹೇಳಿದ್ದಾರೆ. ಈ ದೇಶದಲ್ಲಿ ಅತ್ಯುನ್ನತಮಟ್ಟದ ಅಧಿಕಾರದ ಸ್ಥಾನದಲ್ಲಿ ಇರತಕ್ಕ ಮಂತ್ರಿಮಂಡಲ ಎಷ್ಟುಮಟ್ಟಿಗೆ ಕೆಲಸ ಮಾಡುತ್ತದೆಯೋ ಅಷ್ಟೆ ಈ ದೇಶದ ಅಧಿಕಾರ ಕೂಡ ಸರಿಯಾಗಿ ಕಾರ್ಯಗತ ವಾಗುತ್ತದೆ ಎಂಬ ಮಾತನ್ನು ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅದೇ ಮಾತನ್ನು ಎ. ಜಿ. ರಾಮಚಂದ್ರರಾವ್ ಕಮಿಟಿಯವರೂ ಕೂಡ ಮಂತ್ರಿ ಮಂಡಲ ಎಷ್ಟು ಬಿಗಿಯಾಗಿ ಕೆಲಸ ಮಾಡಬೇಕು ರಾಜ್ಯಭಾರ ಮಾಡಬೇಕು ಎಂಬುದನ್ನು ಹೇಳಿದ್ದಾರೆ.

ಮಂತ್ರಿಮಂಡಲದ ವಿಸ್ತರಣೆಯಿಂದ ಮಂತ್ರಿಮಂಡಲದ ಗಾತ್ರ ಜಾಸ್ತಿಯಾಗುತ್ತಾ ಇದೆಯೇ ಹೊರತು ಎಷ್ಟುಮಟ್ಟಿಗೆ ಕೆಲಸಕಾರ್ಯಗಳು ಕಾರ್ಯಗತವಾಗಬೇಕೋ ಅಷ್ಟುಮಟ್ಟಿಗೆ ಆಗುತ್ತಿಲ್ಲ, ನಿಮ್ಮ ಬಿಗಿಯಾದ ಹಿಡಿತವನ್ನು ಹಿಡಿದುಕೊಳ್ಳುವುದು ಜಾಸ್ತಿಯಾಗಿದೆ ಇದರಿಂದಾಗಿ ಅಧಿಕಾರ ಶಿಥಿಲವಾಗಿದೆ ಎಂದು ಬಹಳ ಚೆನ್ನಾಗಿ ಹೇಳಿದ್ದಾರೆ. ಅಲ್ಲದೇ ಮಂತ್ರಿಮಂಡಲದ ಮೇಲೆ ಏನೊಂದು ಖರ್ಚಾಗುತ್ತಾ ಇದೆ ಎಂಬ ಅಂಕಿಸಂಖ್ಯೆಗಳನ್ನು ಅವರು ಕೊಟ್ಟಿದ್ದಾರೆ. ಅವರು ಇದನ್ನು ಕೊಟ್ಟಂಥ ಸಮಯದಲ್ಲಿ ಮಂತ್ರಿಮಂಡಲ ಇಷ್ಟೊಂದು ದೊಡ್ಡದಾಗಿರಲಿಲ್ಲ, ಚಿಕ್ಕದೇ ಇತ್ತು. ನಮ್ಮ ದೇಶಕ್ಕೆ ಕೇವಲ 8 ಜನ ಮಂತ್ರಿಗಳು ಸಾಕಾಗುತ್ತದೆ ಎಂದು ಆಗಲೇ ಹೇಳಿದ್ದಾರೆ ಡೆಪ್ಯೂಟಿ ಮಂತ್ರಿಗಳೂ ಕೂಡ ಬೇಡ ಎಂದು ಹೇಳಿದ್ದಾರೆ. ಇಷ್ಟೊಂದು ಸೊಗಸಾದ ಒಂದು ರಿಪೋರ್ಟನ್ನು ಕೊಟ್ಟಿರುವಾಗ ಅವರ ಶಿಫಾರಸನ್ನು ಸರ್ಕಾರ ಏನು ಮಾಡಿದೆ ಎಂದು ಕೇಳುತ್ತೇನೆ ? ಬೇರೆ ಇಲಾಖೆಗಳ ಬಗ್ಗೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಎಕಾನಮಿ ಮೆಷರ್ ಅಂತ ಹೇಳಿ ಜವಾನನನ್ನು ಕಿತ್ತುಹಾಕುವುದು ಅಥವಾ ಕಸ ಗುಡಿಸುವವನನ್ನು ಕಿತ್ತು ಹಾಕುವುದು ಎನ್ನುವ ಅನ್ನತಕ್ಕ ಶಿಫಾರಸುಗಳನ್ನು ಅಂಗೀಕರಿಸುತ್ತಾರೆ. ಇವತ್ತು ಮಂತ್ರಿಮಂಡಲದ ಗಾತ್ರ ಎಷ್ಟಿರಬೇಕೆಂಬುದರ ವಿಷಯದಲ್ಲಿ ಮಾನ್ಯ ರಾಮಚಂದ್ರರಾಯರ ಕಮಿಟಿಯವರ ವರದಿ ಏನಿದೆ ಅದರ ಬಗ್ಗೆ ಅದನ್ನು ಕಾರ್ಯಗತ ಮಾಡತಕ್ಕ ಸಾಹಸವನ್ನು ಈ ಸರ್ಕಾರ ಏಕೆ ಮಾಡಲಿಲ್ಲ ಎಂದು ಪ್ರಶ್ನೆ ಮಾಡುತ್ತಾ ಇದ್ದೇನೆ.

3-00 P.M.

ಇವತ್ತು ಮಂತ್ರಿಮಂಡಲ ರಚನೆಯಾಗಿರತಕ್ಕದ್ದು, ಹೇಗಿದೆಯೆಂದರೆ, ನಿಮ್ಮೊಳಗೆ ಇರತಕ್ಕವರನ್ನು ಸಮಾಧಾನಪಡಿಸುವುದಕ್ಕೆಂದು ಕಾಣುತ್ತದೆ. ನಿಮ್ಮ ಹಿಂಬಾಲಕರು ಏನಿದ್ದಾರೆಯೋ ಅವರನ್ನು ಮೆಚ್ಚಿಸಿ, ನಿಮ್ಮ ಅಧಿಕಾರವನ್ನು ಇನ್ನೂ ಕೆಲವು ವರ್ಷಗಳವರೆಗೆ ಮುಂದುವರಿಸಬೇಕು, ಯಾರ್ಯಾರಿಗೆ ಮಂತ್ರಿಸ್ಥಾನ ಕೊಟ್ಟರೆ ಅವರು ನಿಮ್ಮನ್ನು ಹಿಂಬಾಲಿಸುತ್ತಾರೆ ಎಂಬುದಾಗಿ ತಿಳಿದು ಮಂತ್ರಿಮಂಡಲವನ್ನು ಇನ್ನಷ್ಟು ಸಂಖ್ಯೆಯಲ್ಲಿ ಏರಿಸುತ್ತಿರುವುದನ್ನು ನೋಡಿದರೆ, ಅದು ಹನುಮಂತನ ಬಾಲ ಬೆಳೆದ ಹಾಗೆ ಬೆಳೆದುಕೊಂಡು ಹೋಗುತ್ತಾ ಇದೆ. ಆದರೂ ಇದರಿಂದ ಈ ದೇಶದಲ್ಲಿ ಗಟ್ಟಿಮುಟ್ಟಾದ ಸರ್ಕಾರವಂತೂ ಇಲ್ಲ. ಇದರಿಂದ ಮುಂದೆ ಬಹಳ ಅಡಚಣೆ ಬರುತ್ತದೆ. ನಿಮ್ಮನ್ನು ಯಾರೂ ನಂಬುವುದಿಲ್ಲ. ನೀವು ಮಾಡಿರುವ ಅಡ್ಮಿನಿಸ್ಟ್ರೇಟೀವ್ ರಿಫಾರ್ಮ್ಸ್ ಕಮಿಟಿಯವರು ಏನು ಹೇಳಿದ್ದಾರೆಂಬುದನ್ನು ನೋಡಬೇಕು. ಅವರು ಮಂತ್ರಿಮಂಡಲದ ಖರ್ಚಿನ ಬಗ್ಗೆ ಏನು ಹೇಳಿದ್ದಾರೆ ಎಂಬುದನ್ನು ನೋಡಿ. ಯಾರೇ ಆಗಲಿ ಬೇರೆಯವರಿಗೆ ಉಪದೇಶ ಹೇಳುವಾಗ ನಾವು ನಮ್ಮ ಮೇಲೆ ಕಟ್ಟುನಿಟ್ಟಾದ ಆಜ್ಞೆಯನ್ನು ಜಾರಿಮಾಡಿಕೊಂಡಿದ್ದೇವೆಯೇ ಎಂಬುದನ್ನು ನೋಡಬೇಕು. ಇದೆಲ್ಲವೂ ಅದರ ಮೇಲೆ ನಿಂತಿದೆ. ಮಂತ್ರಿಗಳಿಗೆ 2 ಸಾವಿರ ಲೆಕ್ಕ, 3 ಸಾವಿರ ಕೊಡುತ್ತೀರಿ, ಏಕೆಂದರೆ ನಿಮ್ಮ ಕಾರು, ನಿಮ್ಮ ದುಡ್ಡು. ಏನು ಬೇಕಾದರೂ ಮಾಡುತ್ತೀರಿ, ಇವರಿಗೆ ಖರ್ಚು ಎಷ್ಟು, ಅವರ ಸಿಬ್ಬಂದಿಗೆ, ಅವರ ಕಾರಿಗೆ, ಅವರ ಬಂಗಲೆಗೆ ಎಂಬುದನ್ನೂ ಸಹ ನೋಡಬೇಕು. ಮುಖ್ಯ ಮಂತ್ರಿಗಳಿಗೆ 10 ಸಾವಿರ ರೂಪಾಯಿಗಳ ಮೇಲೆಯೇ ಖರ್ಚಾಗುತ್ತದೆ. ಮಾನ್ಯ ಶ್ರೀ ಕಂಠಿಯವರ ಪೋರ್ಟ್‌ಫೋಲಿಯೋಗೆ ಸುಮಾರು 6—7 ಸಾವಿರ ರೂಪಾಯಿಗಳವರೆಗೆ ಖರ್ಚಾಗುತ್ತದೆ.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಅದನ್ನು ಒಂದು ವರ್ಷಕ್ಕೆ ಎಷ್ಟು ಎಂದು ಹೇಳುತ್ತೀರಾ ?

ಶ್ರೀ ಎಸ್. ಶಿವಪ್ಪ.—ಒಂದು ತಿಂಗಳಿಗೆ 6—7 ಸಾವಿರ ರೂಪಾಯಿಗಳು ಒಬ್ಬೊಬ್ಬ ಮಂತ್ರಿಗೆ ಖರ್ಚಾಗುತ್ತದೆ. ಅದರಲ್ಲಿಯೂ ನೀವು ಕೇವಲ ಸಂಬಳ ಮಾತ್ರ ತೋರಿಸಿದ್ದೀರಿ ನಿಮ್ಮ ಸಿಬ್ಬಂದಿ ಖರ್ಚು, ನಿಮ್ಮ ಕಾರಿನ ಖರ್ಚು ನಿಮ್ಮ ಕಾರಿನ ರಿಪೇರಿ ಖರ್ಚು, ಇವೆಲ್ಲವನ್ನೂ ತೋರಿಸಿಯೇ ಇಲ್ಲ. ಏಕೆಂದರೆ ನಿಮಗೆ ಕಾರುಗಳನ್ನು ಉಪಯೋಗಿಸುವುದರಲ್ಲಿ ಒಂದು ಹಿಡಿತವಿಲ್ಲ. ಇನ್ನೂ ನಿಮ್ಮ ಕಾರುಗಳು ಎಲ್ಲೆಲ್ಲೋ ಇರುತ್ತವೆ. ಸ್ಟೇಟ್ ಕಾರ್ ಎಂಬುದಾಗಿ ಒಂದು ಬೋರ್ಡ್ ಇದ್ದೇ ಇರುತ್ತದೆ. ಅವು ಯಾವ್ಯಾವ ಬೀದಿಗಳಲ್ಲಿಯೋ ಹೋಗುತ್ತಿರುತ್ತವೆ ನಿಮ್ಮ ಸ್ಟೇಟ್ ಕಾರುಗಳು ಎಲ್ಲೆಲ್ಲಿ ಹೋಗುತ್ತವೆ, ಎಲ್ಲೆಲ್ಲಿ ನಿಂತಿರುತ್ತವೆ ಅಂದರೆ ನಾವು ನಿಜವಾಗಿ ತಲೆತಗ್ಗಿಸಿ ಹೇಳಬೇಕಾದ ವಿಚಾರ. ಸರ್ಕಾರಿ ಕಾರುಗಳನ್ನು ನೀವು ಅಧಿಕಾರಮಾಡುವಾಗ ಮಾತ್ರ ಉಪಯೋಗಿಸಬೇಕು. ಅದನ್ನು ಬಿಟ್ಟು ಸ್ವೇಚ್ಛೆಯಾಗಿ ಮಂತ್ರಿಗಳಿಗೆ ಕೊಟ್ಟಿರುವ ಕಾರುಗಳನ್ನು ಉಪಯೋಗಿಸಿದರೆ ಕೇವಲ 2—3 ವರ್ಷಗಳಲ್ಲಿಯೇ ಅದು ಹಾಳಾಗಿ ಹೋಗುತ್ತದೆ. ಅದು ಒಂದು ಮಿಷಿನ್. ನಮ್ಮ ಸ್ವಂತ ಕಾರುಗಳಿಗಿಂತಲೂ ಹೆಚ್ಚು ಜೋಪಾನವಾಗಿ ಉಪಯೋಗಿಸಬೇಕಾಗುತ್ತದೆ. ಏಕೆಂದರೆ ಆ ಕಾರುಗಳನ್ನು ಕೊಳ್ಳುವುದಕ್ಕೆ ಒಂದೊಂದು ಸಾರಿ 2—3 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಾರೆ. ಇವತ್ತು ಮಿತಿ ವಿಚಾರ ಹಾಗೂ ಇಕಾನಮಿ ಮೆಷರ್ಸ್ ಬಗ್ಗೆ ಯಾವ ಒಂದು ನೈತಿಕ ಮಟ್ಟದಲ್ಲಿ ಇವರು ಹೋಗುತ್ತಿದ್ದಾರೆಂಬುದೇ ಗೊತ್ತಾಗುವುದಿಲ್ಲ.

ಇನ್ನೊಂದು ವಿಚಾರ. ಮಾನ್ಯ ಮುಖ್ಯ ಮಂತ್ರಿಗಳ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಶ್ರೀ ಸಿದ್ಧವೀರಪ್ಪನವರ ಪ್ರಶ್ನೆಗೆ ಉತ್ತರ ಕೊಡುತ್ತಾ ನಾನು ಮುಂದೆ ಎರಡು ಜಾಗಗಳಲ್ಲಿಯೂ ಇರುವುದಿಲ್ಲ, ಕಾಂಗ್ರೆಸ್ ಅಧ್ಯಕ್ಷನಾಗಿ ಹಾಗೂ ಮುಖ್ಯ ಮಂತ್ರಿಯಾಗಿ ಎರಡು ಜಾಗಗಳಲ್ಲಿಯೂ ಮುಂದುವರಿಸುವುದಕ್ಕೆ ಇಷ್ಟಪಡುವುದಿಲ್ಲ, ಆದಷ್ಟು ಜಾಗ್ರತೆ ಯಾವುದಾದರೂ ಒಂದನ್ನು ಖಾಲಿ ಮಾಡುತ್ತೇನೆ ಆದರೂ ಕಾಂಗ್ರೆಸ್ ಅಧ್ಯಕ್ಷನಾಗಿಯೇ ಹೋಗುತ್ತೇನೆಂದು ಹೇಳಿದ್ದಾರೆ. ಅದು ಅವರಿಗೆ ಸೇರಿದ ವಿಚಾರ. ಇವತ್ತು ಈ ದೇಶದ ಆಡಳಿತದ ಹಿತದೃಷ್ಟಿಯಿಂದ ನಾನು ಮುಖ್ಯ ಮಂತ್ರಿಯವರನ್ನು ಆ ರೀತಿ ಪ್ರಶ್ನೆ ಮಾಡುವುದು ನನ್ನ ಕರ್ತವ್ಯ. ಈ ವಿಚಾರದಲ್ಲಿ ನಾನು ಹೇಳುವುದಾದರೆ, ಕಳೆದ 2—3 ತಿಂಗಳುಗಳಿಂದಲೂ ಇವರು ಕಾಂಗ್ರೆಸ್ ಅಧ್ಯಕ್ಷರಾಗಿ ಹಾಗೂ ಈ ದೇಶದ ಮುಖ್ಯ ಮಂತ್ರಿಯಾಗಿರುವುದರಿಂದಲೇ ಈ ದೇಶದ ಅಧಿಕಾರ ಇಷ್ಟು ಹದಗೆಡುವುದಕ್ಕೆ ಕಾರಣವಾಗಿದೆಯೆಂದು ನಾನು ಬಹಳ ವ್ಯಸನದಿಂದ ಹೇಳುತ್ತಿದ್ದೇನೆ. ನಿಮ್ಮಲ್ಲಿ ಎಷ್ಟೇ ಶಕ್ತಿ ಇರಲಿ, ನೀವು ಎಷ್ಟೇ ದಕ್ಷರಾಗಿರಲಿ, ದೆಹಲಿಯಲ್ಲಿ ಮತ್ತು ಬೆಂಗಳೂರಿನಲ್ಲಿ ರಾಜ್ಯಭಾರ ಮಾಡುವುದಕ್ಕೆ ಇನ್ನೆಂದಿಗೂ ಸಾಧ್ಯವಿಲ್ಲವೆಂಬುದನ್ನು ನಾನು

(ಶ್ರೀ ಎಸ್. ಶಿವಪ್ಪ)

ಇವತ್ತು ಸ್ಪಷ್ಟವಾಗಿ ಹೇಳುತ್ತೇನೆ, ಇವತ್ತು ಮುಖ್ಯ ಮಂತ್ರಿಗಳಾಗಿ 24 ಗಂಟೆಗಳ ಕಾಲ ಮಾಡುವ ಕೆಲಸ, ಅಂದಮೇಲೆ ಮುಖ್ಯ ಮಂತ್ರಿಗಳ ಕೆಲಸ ಪಾರ್ಟ್ ಟೈಂ ಕೆಲಸವೇ! ಅಥವಾ ಕಾಂಗ್ರೆಸ್ ಅಧ್ಯಕ್ಷರ ಕೆಲಸ ಪಾರ್ಟ್ ಟೈಂ ಕೆಲಸವೇ? ಅದು ಏನೆಂಬುದನ್ನು ತಾವು ಹೇಳಬೇಕು. ಅವರು ಎರಡು ಕಡೆ ಇದ್ದರೂ ಕೆಲಸ ಮಾಡುತ್ತೇನೆಂದು ಹೇಳಿದ್ದಾರೆ. ಅವರ ಹಿಂದುಗಡೆ ಮಾನ್ಯ ಶ್ರೀ ನಿಜಲಿಂಗಪ್ಪನವರು ಈ ದೇಶದ ಸಾರ್ವಭೌಮರು, ಅವರಿಗೆ ಈ ದೇಶದಲ್ಲಿ ನಾಲ್ಕು ಕೆಲಸಗಳನ್ನು ಕೊಟ್ಟರೂ ಮಾಡುತ್ತಾರೆಂದು ಹೇಳುವ ಜನರೂ ಇದ್ದಾರೆ. ಆ ರೀತಿ ಹೊಗಳುವವರೂ ಇದ್ದಾರೆ. ಈ ಮಾತನ್ನು ನಾನು ಹೇಳುವುದು ಎಷ್ಟೇ ಕಹಿಯಾದರೂ ಈ ಸಂದರ್ಭದಲ್ಲಿ ಹೇಳಬೇಕಾಗಿದೆ ಮಂತ್ರಿಮಂಡಲದ ಬಗ್ಗೆ ಮತ್ತು ಸೆಕ್ರೆಟೇರಿಯಟ್ ಬಗ್ಗೆ ಅಲ್ಲಿ ಕೆಲಸಕಾರ್ಯಗಳು ಯಾವ ರೀತಿಯಲ್ಲಿ ನಡೆಯುತ್ತಿವೆ, ಅಲ್ಲಿ ಯಾವ ರೀತಿಯಲ್ಲಿ ಮಾಹಿತಿ ದೊರಕುತ್ತದೆ, ಎಷ್ಟರಮಟ್ಟಿಗೆ ಸೆಕ್ರೆಟೇರಿಯಟ್ಟಿನಲ್ಲಿ ಎಲ್ಲಾ ಇಲಾಖೆಗಳಲ್ಲಿಯೂ ಸಾಕಷ್ಟು ಪ್ರತಿಭಾಪೂರ್ವಕವಾಗಿ ಕೆಲಸಕಾರ್ಯಗಳು ನಡೆಯುತ್ತಾ ಇವೆಯೆಂಬುದನ್ನು ನಾವು ನೋಡುತ್ತಿದ್ದೇವೆ. ಈ ಸೆಕ್ರೆಟೇರಿಯಟ್ ವಿಷಯವಾಗಿ ರಾಮಚಂದ್ರರಾವ್ ಕಮಿಟಿ ವರದಿಯಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಸಾಮಾನ್ಯವಾಗಿ ಒಂದು ಉದಾಹರಣೆಯನ್ನು ಕೊಡುವುದಾದರೆ, ಸೆಕ್ರೆಟರಿಯಟ್ಟಿಗೆ ಒಂದು ಕಾಗದ ಬಂದರೆ, ಆ ಕಾಗದ ರಿಜಿಸ್ಟರ್ ಆಗಿ, ಪಾರ್ಟಿಗೆ ಉತ್ತರ ಹೋಗಬೇಕಾದರೆ ಎಷ್ಟೋ ನಿಧಾನವಾಗುತ್ತದೆ. ಅಂದರೆ ಆ ಕಾಗದ ಎಷ್ಟೆಷ್ಟು ದಿವಸಗಳು ಒಂದೊಂದು ಹಂತದಲ್ಲಿ ನಿಲ್ಲುತ್ತದೆಂಬುದನ್ನು ನೋಡಬೇಕು. ಅವರು ಕೆಲವಾರು ಇಲಾಖೆಗಳನ್ನು ಆರಿಸಿ ಈ ಸೆಕ್ರೆಟೇರಿಯಟ್‌ನಲ್ಲಿ ಎಷ್ಟರಮಟ್ಟಿಗೆ ಸಿಬ್ಬಂದಿ ಕೆಲಸಮಾಡುತ್ತಾರೆಂಬುದನ್ನು ಹೇಳಿದ್ದಾರೆ. ಈ ವಿಚಾರದಲ್ಲಿ ನಾವು ಹೆಚ್ಚು ಯೋಚನೆಮಾಡಬೇಕಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ (ಯೋಜನೆ ಮತ್ತು ಹಣಕಾಸು ಶಾಖೆಯ ಮಂತ್ರಿಗಳು).—ಅದು ಬಹಳ ಹಳೆಯದು.

ಶ್ರೀ ಎಸ್. ಶಿವಪ್ಪ.—ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟಮೆಂಟ್ ವಿಷಯ ನಾನು ಹೇಳಿದ್ದು. ಅದು ಈ ಕಟ್ಟಡದೊಳಗೇ ಇರತಕ್ಕದ್ದು. ಈಗ ಅದು ಬಹಳ ಹಳೆಯದು ಎಂದು ತಾವು ಹೇಳುತ್ತೀರಿ. ಹೊಸದು ಏನೇನು ಆಗುತ್ತಿದೆಯೋ ಹೇಳಿ. ತಾವು ಹೇಳಿರುವ ರೀತಿಯಲ್ಲಿ ಒಂದು ಕಾಗದ ನಿಮ್ಮ ಆಫೀಸಿನಲ್ಲಿಯೇ ರಿಜಿಸ್ಟರ್ ಆಗಿ ಕೇಸ್ ವರ್ಕರ್ ಹತ್ತಿರ 86 ದಿವಸಗಳು ಇತ್ತು. ಡೆಪ್ಯುಟಿ ಸೆಕ್ರೆಟರಿಗಳ ಹತ್ತಿರ 7 ದಿವಸಗಳು, ಅಂಡರ್ ಸೆಕ್ರೆಟರಿಗಳ ಹತ್ತಿರ 15 ದಿವಸಗಳು, ಮಂತ್ರಿಗಳ ಹತ್ತಿರ 91 ದಿವಸಗಳು ಇದ್ದು ಕೊನೆಗೆ ಆ ಕಾಗದ ಅವರ ಹತ್ತಿರ ಇವರ ಹತ್ತಿರವೆಂದು ಸುಮಾರು 199 ದಿವಸಗಳವರೆಗೂ ಅಲ್ಲಿಯೇ ಇರುತ್ತದೆ. ಹೀಗೆ ಒಂದೊಂದು ಕಾಗದಕ್ಕೆ 339 ದಿವಸಗಳೂ ಕೂಡ ತಡವಾಗಿ ತೀರ್ಮಾನವಾಗುವುದಾಗಿದೆ. 194 ದಿವಸಗಳೂ ಸಹ ಸೆಕ್ರೆಟೇರಿಯಟ್‌ನಲ್ಲಿ ಅನೇಕ ಕಾಗದಗಳು ಮಂತ್ರಿಗಳ ಉಳಿದಿವೆ. ಅಂದಮೇಲೆ ಇದು ಹಳೆಯದು ಹೇಗಾಗುತ್ತದೆ? ಆದ್ದರಿಂದ ಎ. ಜಿ. ರಾಮಚಂದ್ರರಾಯರ ವರದಿಯನ್ನು ತೆಗೆದು ನೋಡಿ ಎಂದು ನಾನು ಹೇಳುತ್ತೇನೆ. ಆ ವರದಿ ಇಲ್ಲಿಗೆ 1962ನೇ ಇಸವಿಯಲ್ಲಿ ಬಂತು. ಈಗಾಗಲೇ ಅದು ಬಂದು 6 ವರ್ಷಗಳು ಆಗಿವೆ. ಎಲ್ಲಾ ಕಾಗದಗಳ ವಿಲೇವಾರಿಯಾಗುವ ಜವಾಬ್ದಾರಿ ಇವರ ಮೇಲೆ ಹೆಚ್ಚಾಗಿದೆ. ಅದಕ್ಕೆ ಬೇಕಾದ ಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕು. ಆದಕ್ಕಿಂತಲೂ ಹೆಚ್ಚಿನ ಕರ್ತವ್ಯ ಇವರಿಗೆ ಇನ್ನೇನು ಇದೆಯೋ ಗೊತ್ತಿಲ್ಲ. ಬೇಕಾದರೆ ತಮಗೆ ಅಂಕಿ ಅಂಶಗಳನ್ನೂ ಸಹ ಕೊಡಬಲ್ಲೆ. ದಿನಚರಿಯ ಕಾರ್ಯದಲ್ಲಿ ನಾವು ನೋಡತಕ್ಕ ಪರಿಸ್ಥಿತಿಯನ್ನು ಇಲ್ಲಿ ಹೇಳಬೇಕೆಂದರೆ, ಈ ಸರ್ಕಾರಕ್ಕೆ ಯಾರಾದರೂ ಕಾಗದ ಬರೆದರೆ, ತನ್ನ ಕೆಲಸಕ್ಕಾಗಿ ಆಫೀಸಿಗೇನಾದರೂ ಹೋದರೆ ಅಲ್ಲಿ ಹೋಗಿ ನೋಡಿ, ಈ ರಾಜ್ಯದಲ್ಲಿ ಸರ್ಕಾರ ನಿಜವಾಗಿ ಇದೆಯೇ ಎಂಬುದಾಗಿ ಜನತೆಯೇ ಪ್ರಶ್ನೆಮಾಡುತ್ತಾರೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಯಾವುದು ಸರ್ಕಾರ ಎಂಬುದಾಗಿ ಜನತೆಯೇ ಪ್ರಶ್ನೆಮಾಡುತ್ತಾರೆ. ತಾಲ್ಲೂಕು ಆಫೀಸು ಮೊದಲ್ಗೊಂಡು ಸೆಕ್ರೆಟೇರಿಯಟ್‌ವರೆಗೆ ಯಾವುದಾದರೂ ಕೆಲಸವಾಗಬೇಕಾದರೆ ದೊಡ್ಡದಾಗಿ ಬಿಳೀ ಟೋಪಿ ಹಾಕಿರುವವರ ಶಿಫಾರ್ಸು ಬೇಕು. ಅದು ದೊರಕಿದರೆ ಆಗ ಆ ಕಾಗದ ಜಂಪ್ ಎಂದು ಮೇಲಕ್ಕೆ ಎದ್ದುಬಿಡುತ್ತದೆ. ಸೀದಾ ಆರ್ಡರ್ ಆಗಿ ಬಿಡುತ್ತದೆ. ಮಂತ್ರಿಗಳೂ ಸಹ ಸೀದಾ ಆರ್ಡರ್ ಮಾಡುತ್ತಾರೆ. ಇಂತಹ ಕೆಲಸಗಳು ನಮ್ಮ ದೇಶದಲ್ಲಿ ನಡೆಯುತ್ತಿವೆ. ಒಬ್ಬ ಬಡ ರೈತ ತನ್ನ ಕೆಲಸಕ್ಕಾಗಿ ನೂರಾರು ಹಾಗೂ ಸಾವಿರಾರು ರೂಪಾಯಿಗಳನ್ನು ಕೊಡುವುದು ಹೇಗೆ? ಇದರಿಂದ ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ

ಬೆಣ್ಣೆ ಇಟ್ಟಂತಾಗುವುದಿಲ್ಲವೇ ? ಇದರಿಂದ ನಮ್ಮ ಸರ್ಕಾರ ಖಂಡಿತವಾಗಿ ಸರಿಯಾಗಿ ಆಡಳಿತವನ್ನು ಮಾಡುವುದಕ್ಕಾಗುವುದಿಲ್ಲ. ಇವತ್ತಿನ ದಿವಸ ಈ ಸರ್ಕಾರ ಆಡಳಿತದಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ತೋರಿಸುತ್ತಿರುವುದರಿಂ ಈ ದೇಶದಲ್ಲಿ ಆಡಳಿತ ಎಷ್ಟೊಂದು ಚೆನ್ನಾಗಿ ನಡೆಯ ಬೇಕಾಗಿತ್ತೋ ಆ ರೀತಿಯಲ್ಲಿ ನಡೆಯುತ್ತಾ ಇಲ್ಲ. ಆದ್ದರಿಂದಾಗಿ ಈಗ ಸರ್ಕಾರದ ಆಡಳಿತ ಕುಸಿದು ಬಿದ್ದಿದೆ. ಅದಕ್ಕೆ ಕಾರಣ ಈ ದಿವಸ ನಮ್ಮಲ್ಲಿ ಹಲವಾರು ಹಂತಗಳು ಇರುವುದೇ ಆಗಿದೆ. ತಾಲ್ಲೂಕ್ ಅಮಲ್ದಾರ ಅಲ್ಲಿಂದ ಬಿಟ್ಟರೆ ಡೆಪ್ಯುಟಿ ಕಮಿಷನರ್ ಅಲ್ಲಿಂದ ಬಿಟ್ಟರೆ ಡಿವಿಜನಲ್ ಕಮಿಷನರ್ ಅಲ್ಲಿಂದ ಬಿಟ್ಟರೆ ಸೆಕ್ರೆಟೇರಿಯೆಟ್ ಅಲ್ಲಿಂದ ಮುಂದಕ್ಕೆ ಮಂತ್ರಿಗಳು. ಹೀಗೆ ಹಲವಾರು ಹಂತಗಳನ್ನು ನಿರ್ಮಿಸಿಕೊಂಡು ಕೆಲಸ ಮಾಡುತ್ತಿರುವುದರಿಂದಲೇ ಯಾವ ಒಂದು ಕೆಲಸವೂ ಕಾಲಕ್ಕೆ ಸರಿಯಾಗಿ ಆಗುತ್ತಿಲ್ಲ. ಹೀಗೆ ಆಡಳಿತದಲ್ಲಿ ಕೆಲಸಗಳು ಕಾಲಕ್ಕೆ ಸರಿಯಾಗಿ ನಡೆಯದೆ ಇರುವುದನ್ನು ಸರಿಪಡಿಸಬೇಕೆಂದು ಸರ್ಕಾರದವರು ಎಷ್ಟು ಸಾರ್ತಿ ಎಷ್ಟು ಕಮಿಟಿಗಳನ್ನು ಮಾಡಿದರು ? ಅದೆಷ್ಟು ವರದಿಗಳನ್ನು ತರಿಸಿಕೊಂಡರು ? ಅಷ್ಟೆಲ್ಲಾ ಆದಾಗ್ಯೂ ನಮ್ಮ ಆಡಳಿತದಲ್ಲಿ ಒಂದು ಸುಧಾರಣೆಯನ್ನು ತರುವುದಕ್ಕೆ ಇವರಿಗೆ ಇನ್ನೂ ಮನಸ್ಸು ಬಂದಿಲ್ಲ. ಆ ವರದಿಗಳಲ್ಲಿ ಹೇಳಿರತಕ್ಕ ವಿಷಯಗಳಲ್ಲಿ ಒಂದನ್ನೂ ಕಾರ್ಯಗತ ಮಾಡಿಲ್ಲ. ಈ ದಿವಸ ಒಂದು ತಾಲ್ಲೂಕ್ ಮಟ್ಟದಲ್ಲೇ ತೆಗೆದುಕೊಳ್ಳಿ—ಅಲ್ಲಿ ಒಬ್ಬ ಅಮಲ್ದಾರ ಒಬ್ಬ ಡೆಪ್ಯುಟಿ ಅಮಲ್ದಾರ, ಇನ್ನೊಬ್ಬ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು, ಒಬ್ಬ ರೈತನಿಗೆ ಸಾಲ ಬೇಕಾಗಿದ್ದರೆ ಅವನು ಈ ನಾಲ್ಕಾರು ಅಧಿಕಾರಿಗಳ ಹತ್ತಿರ ಅಲೆದಾಡಬೇಕಾಗಿದೆ. ಸಾಲಕ್ಕೆ ಇನ್ನೊಬ್ಬ ಲ್ಯಾಂಡ್ ಡೆವಲಪ್‌ಮೆಂಟ್ ಅಧಿಕಾರಿ ಹತ್ತಿರ ಹೋಗಬೇಕು. ಹೀಗೆ ಈ ದಿವಸ ತಮ್ಮ ಕಡೆಯ ಜನರಿಗಾಗಿ ಅಧಿಕಾರ ಸ್ಥಾನಗಳನ್ನು ಮಾಡುವುದಕ್ಕೆ ಹೊರಟಿದ್ದರಿಂದ ಈ ಅಧಿಕಾರಿಗಳ ಕೆಲಸ ಒಂದೊಕ್ಕೊಂದು ಓವರ್ ಲ್ಯಾಪಾಗಿವೆ. ನಮ್ಮ ದೇಶಕ್ಕೆ ಎಷ್ಟು ಹುದ್ದೆಗಳು ಇರಬೇಕು, ಆ ಹುದ್ದೆಗಳಿಗೆ ಜನರೆಷ್ಟು ಬೇಕು. ಅಲ್ಲಿಗೆ ನಮ್ಮ ನೌಕರರ ಸಿಬ್ಬಂದಿ ಎಷ್ಟಾಯಿತು ಎನ್ನುವ ಒಂದು ನೇಮದ ಪ್ರಕಾರ ಇವರು ಇವನ್ನು ಮಾಡಬೇಕೆಂಬ ಮನಸ್ಸೂ ಕೂಡ ಇವರಿಗಿದ್ದಂತೆ ಕಂಡುಬರುವುದಿಲ್ಲ. ನಮ್ಮ ಸರ್ಕಾರದವರು ಹುದ್ದೆಗಾಗಿ ಜನರನ್ನು ನೇಮಕ ಮಾಡುವುದಿಲ್ಲ ಜನರಿಗಾಗಿ ಹುದ್ದೆಗಳನ್ನು ನಿರ್ಮಾಣ ಮಾಡುವುದು ಇವರ ಕಾರ್ಯವಾಗಿದ್ದಂತೆ ಕಾಣುತ್ತಿದೆ. ಈ ದಿವಸ ಇವರು ಏನು ಈ ಹುದ್ದೆಗಳನ್ನು ಅಸಂಖ್ಯಾತವಾಗಿ ನಿರ್ಮಾಣ ಮಾಡಿದ್ದಾರೆ ಆ ಹುದ್ದೆಗಳಿಂದ ಏನು ಕೆಲಸಗಳು ಆಗಬೇಕಾಗಿತ್ತೋ ಆ ಕೆಲಸಗಳು ಅವುಗಳಿಂದಾಗುತ್ತಿಲ್ಲ. ಹೀಗೆ ಈ ಹುದ್ದೆಗಳ ಒಂದು ಗೊಂದಲವುಂಟಾಗಿ ನಮ್ಮಲ್ಲಿ ಆಡಳಿತದ ವೆಚ್ಚ ಹೆಚ್ಚಾಗಿದೆ. ಇದನ್ನು ತಡೆಗಟ್ಟತಕ್ಕ ಮನಸ್ಸೂ ಸರ್ಕಾರಕಿಲ್ಲ ಮತ್ತು ಅವರಿಗೆ ಆ ಚೈತನ್ಯವೂ ಇಲ್ಲ ಎಂದು ನಾನು ನಂಬಿದ್ದೇನೆ. ಇನ್ನು ನಮ್ಮಲ್ಲಿ ಕೆಲಸ ಮಾಡತಕ್ಕ ಡೆಪ್ಯುಟಿ ಕಮಿಷನರ್ ಮತ್ತು ಡಿವಿಜನಲ್ ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರುಗಳೇನಿದ್ದಾರೆ ಅವರೆಲ್ಲರೂ ಈ ಮಂತ್ರಿಗಳ ಮನಸು ಯಾವ ಕಡೆಗಿದೆ, ಯಾವ ರೀತಿ ತಾವು ಕೆಲಸ ಮಾಡಿದರೆ ಇವರ ಕೃಪಾದೃಷ್ಟಿಗೆ ಬೀಳುತ್ತೇವೆ ಎಂಬುದನ್ನು ಅರಿತು ಕೆಲಸ ಮಾಡಬೇಕಾಗಿದೆ. ಆದರೆ ದನ್ನು ಕೈಬಿಟ್ಟು ಒಬ್ಬ ಅಧಿಕಾರಿ ಏನಾದರೂ ತನ್ನ ಒಂದು ಸ್ವಂತ ಬುದ್ಧಿಯಿಂದ ನ್ಯಾಯವಾಗಿ ದಕ್ಷತೆಯಿಂದ ಕೆಲಸ ಮಾಡಿದ್ದೇ ಆದರೆ ಅಂಥವರಿಗೆ ಮುಹಬ್ಬಾನಿ ಮಾಡತಕ್ಕ ಅಧಿಕಾರಿಗಳು ಇಲ್ಲಿಲ್ಲ. ಅಂಥ ಅಧಿಕಾರಿಗಳಿಗೆ ಇಲ್ಲಿ ಮಂತ್ರಿಗಳಿಂದ ಶಹಭಾಸ್‌ಗಿರಿ ಇಲ್ಲ. ಆ ಅಧಿಕಾರಿಗಳು ಮಂತ್ರಿಗಳಿಗೆ ಸಂಬಂಧಪಟ್ಟವರ ಆಜ್ಞೆಯನ್ನು ಸರಿಯಾಗಿ ಪರಿಪಾಲನೆ ಮಾಡದಿದ್ದರೆ ಬಂತು ಅವರಿಗೆ ಗ್ರಹಚಾರ; ಹಾಗೂ ಇಲ್ಲದ ತೊಂದರೆಗಳು. ಆ ಅಧಿಕಾರಿಗಳು ಈ ಮಂತ್ರಿಗಳ ಸಂಬಂಧೀಕರಿಗೆ ಅವರ ಆಜ್ಞೆ ಪ್ರಕಾರ ಅವರ ಕೆಲಸಗಳನ್ನು ಮಾಡಿ ಕೊಡದಿದ್ದರೆ—ನೋಡು ನಿನಗೆ ಇನ್ನು 24 ಗಂಟೆಗಳಲ್ಲೇ ಇಲ್ಲಿಂದ ವರ್ಗವಾಗುವಂತೆ ಮಾಡುತ್ತೇನೆಂದು ಹೇಳಿ, ಇಲ್ಲಿಗೆ ಬಂದು ಆ ಅಧಿಕಾರಿಗಳ ಬಗ್ಗೆ ಇಲ್ಲಸಲ್ಲದ ದೂರುಗಳನ್ನು ಹೇಳುತ್ತಿರುತ್ತಾರೆ. ಇಲ್ಲಿರತಕ್ಕ ಮಂತ್ರಿಗಳಾದರೂ ಅವರು ಹೇಳುತ್ತಿರುವುದು ಸರಿಯೋ—ಅಲ್ಲವೇ ಎಂಬುದನ್ನು ಪರಿಶೀಲಿಸದೆ ಅವರ ಹೇಳಿಕೆ ಪ್ರಕಾರ ನಿಷ್ಠಾವಂತ ಅಧಿಕಾರಿಗಳನ್ನು ವರ್ಗಾಯಿಸುವುದರಿಂದ ಆಡಳಿತ ಈ ದಿವಸ ಇಷ್ಟು ಸಿಥಿಲವಾಗಿದೆ. ಇನ್ನಾದರೂ ನಮ್ಮ ಸರ್ಕಾರದವರು ಒಳ್ಳೆಯ ನಿಷ್ಠೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಒಂದು ಮನ್ನಣೆಯನ್ನು ಕೊಡದೆ ಹೋದರೆ ದೇಶದಲ್ಲಿ ಆಡಳಿತ ಸರ್ವನಾಶವಾಗುತ್ತದೆಂದು ಹೇಳುತ್ತೇನೆ. ಇಲ್ಲಿ ಸರ್ಕಾರ ಇರುವುದು ಕೇವಲ ತಮ್ಮ ಇಷ್ಟರಿಗೂ, ಮಿತ್ರರಿಗೂ ಮತ್ತು ಸಂಬಂಧೀಕರಿಗೂ ಎಂದು ಭಾವಿಸುವುದಾದರೆ ದೇಶ ಸರ್ವನಾಶವಾದಂತೆಯೇ ಸರಿ. ಇದೇ ವಿಚಾರದಲ್ಲಿ ನನಗೆ ಒಬ್ಬರು ಒಂದು ಕಾಗದವನ್ನು ಬರೆದಿದ್ದಾರೆ. ಅದನ್ನು ಮಾನ್ಯ ಮಂತ್ರಿಗಳ ಕಡೆಗೆ ಅಧ್ಯಕ್ಷರ ಮೂಲಕ ಕೊಡುತ್ತೇನೆ. ಆದರೆ ಅದನ್ನು ಯಾರು ಬರೆದಿದ್ದಾರೆಂಬುದನ್ನು ಅವರ ಹೆಸರನ್ನು ಇಲ್ಲಿ ಹೇಳಬಾರದು ಎಂಬ ಒಂದು ಸಂಪ್ರದಾಯ ಇರುವುದರಿಂಧ ನಾನು ಅವರ ಹೆಸರನ್ನು ಹೇಳು

(ಶ್ರೀ ಎಸ್. ಶಿವಪ್ಪ)

ವುದಕ್ಕೆ ಇಷ್ಟಪಡುವುದಿಲ್ಲ. ಅಲ್ಲದೆ ಅವರು ತಮ್ಮ ಬಗ್ಗೆ ಇಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕೂ ಕೂಡ ಒಂದು ಅವಕಾಶವಿರುವುದಿಲ್ಲ. ಆದುದರಿಂದ ಸರ್ಕಾರದವರು ನಾನು ಕೊಡತಕ್ಕ ಕಾಗದದ ಬಗ್ಗೆ ಒಂದು ವಿಚಾರಣೆಯನ್ನು ನಡೆಸಿ ಅದರ ಬಗ್ಗೆ ಒಂದು ಹೇಳಿಕೆಯನ್ನು ಈ ಅಧಿವೇಶನ ಮುಗಿಯುವುದರೊಳಗಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಾನು ಪಾರ್ಲಿಮೆಂಟ್ ಕಾರ್ಯದರ್ಶಿಗಳ ಆಡಳಿತ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದಿದ್ದೆ, ಕಾಲಾವಕಾಶವಿಲ್ಲ. ಆದುದರಿಂದ ಅದನ್ನು ನನ್ನ ಮಿತ್ರರಾದ ಶ್ರೀಮಾನ್ ಸಿದ್ಧವೀರಪ್ಪನವರಿಗೇ ಬಿಡುತ್ತೇನೆ. ನಾವು ಈ ದಿವಸ ಖರ್ಚುಮಾಡತಕ್ಕ ಹಣಕ್ಕೆ ಸರಿಯಾದ ಒಂದು ಪ್ರತಿಫಲ ದೊರೆಯಬೇಕಾಗಿದ್ದರೆ ಇಲ್ಲಿ ಮಂತ್ರಿಗಳು ಬಹಳ ಎಚ್ಚರಿಕೆಯಿಂದ ದಕ್ಷತೆಯಿಂದ ನಿಷ್ಠೆಯಿಂದ ಕೆಲಸ ಮಾಡಬೇಕು. ಇಲ್ಲದಿದ್ದರೆ ಇವೆಲ್ಲಾ ಒಂದು ಗಾಳಿಪಟ ಆಗುವುದು. ಇನ್ನು ಶ್ರೀಮಾನ್ ನಿಜಲಿಂಗಪ್ಪನವರು ಸಧ್ಯದಲ್ಲಿಯೇ ಅವರು ಇಲ್ಲಿನ ಮುಖ್ಯ ಮಂತ್ರಿಯ ಕೆಲಸವನ್ನು ಬಿಟ್ಟು ದೆಹಲಿಗೆ ಹೊರಡುವುದಾಗಿ ತಿಳಿಸಿದ್ದಾರೆ. ನಾಳೆ ಇಲ್ಲಿ ಯಾವ ಒಂದು ಹೊಸ ಮಂತ್ರಿಮಂಡಲವೇ ಬರಲಿ ಅದನ್ನು ಒಂದು ಚಿಕ್ಕ ಮಂತ್ರಿಮಂಡಲವಾಗಿರುವಂತೆ ಮಾಡತಕ್ಕ ಧೈರ್ಯ ಮಾಡಬೇಕು, ಇಲ್ಲವಾದರೆ ಅದೊಂದು ಹನುಮಂತನ ಬಾಲ ಆಗುತ್ತದೆ. ಹಾಗೆ ಮಾಡಬಾರದೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ನನಗೆ ತಾವು ಕೊಟ್ಟಿರತಕ್ಕ ಅವಕಾಶ ಕೇವಲ ಹತ್ತು ನಿಮಿಷಗಳು ಮಾತ್ರ. ಆದುದರಿಂದ ನಾನು ಮಾತನಾಡತಕ್ಕ ಕಾಲದಲ್ಲಿ ಯಾರೂ ಮಧ್ಯೆ ನನಗೆ ಅಡಚಣೆಯನ್ನು ಒಡ್ಡದಂತೆ ತಾವು ನೋಡಿಕೊಳ್ಳಬೇಕು. ಹಾಗೆ ಏನಾದರೂ ಅತಂಕ ಆದರೆ ಆ ವೇಳೆಯನ್ನು ನನಗೆ ಕೂಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರೇ, ಈ ಜನರಲ್ ಅಡ್ಮಿನಿಸ್ಟ್ರೇಷನ್ ಎಂಬ ಬಾಬು ಇದೆ ಇದು ಒಂದು ದೊಡ್ಡ ಸಮುದ್ರವಿದ್ದ ಹಾಗೆ. ಇಷ್ಟೊಂದು ಇಲಾಖೆಗಳಲ್ಲಿ ಯಾವುದರ ಮೇಲೆ ಮಾತನಾಡುವುದು ಯಾವುದನ್ನು ಕೈ ಬಿಡುವುದು ಎನ್ನುವುದೊಂದೂ ಗೊತ್ತಾಗುತ್ತಿಲ್ಲ. ಇದರಲ್ಲಿ ಎಲ್ಲಾ ಇಲಾಖೆಗಳೂ ಅಡಗಿರುತ್ತವೆ. ಆದರೆ ಅವುಗಳ ಬಗ್ಗೆ ಮಾತನಾಡಲು ಈಗ ಸಾಕಷ್ಟು ಕಾಲಾವಕಾಶವಿಲ್ಲ; ಆದುದರಿಂದ ಅವುಗಳ ಬಗ್ಗೆ ಇನ್ನಾವುದಾದರೂ ಕಾಲದಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದುದರಿಂದ ನಾನು ಈ ದಿವಸ ಕೇವಲ ಎರಡು ಇಲಾಖೆಗಳ ವಿಚಾರವಾಗಿ ಮಾತ್ರ ಮಾತನಾಡಲು ನಿಂತಿದ್ದೇನೆ.

ಸರಕಾರ ಅನುಸರಿಸುವ ನೀತಿಯ ವಿಚಾರದಲ್ಲಿ ಆಗಾಗ್ಗೆ ಅವಕ್ಕೆ ಸಂಬಂಧಪಟ್ಟ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳೂ ಆಗಿಂದಾಗ್ಗೆ ತಮ್ಮ ಕಾರ್ಯ-ನೀತಿಗಳನ್ನು ತಿಳಿಸುವಾಗಲೆಲ್ಲಾ ಅದು ಪತ್ರಿಕೆಗಳಲ್ಲಿ ಬರುತ್ತದೆ. ಅಂಥಾ ಕೆಲವು ಘೋಷಣೆಗಳನ್ನು ನಾನು ನೋಡಿದ್ದೇನೆ. ಆದರೆ ಹಾಗೆ ನಾವು ಒಂದಾವರ್ತಿ ನಮ್ಮ ನೀತಿ ಹೀಗಿದೆ ಎಂಬುದಾಗಿ ಘೋಷಣೆ ಮಾಡಿ ಅದನ್ನು ಅನುಸರಿಸದೆ ಇದ್ದರೆ ನಾಳೆ ನಾವುಗಳ್ಯಾರೂ ಹೊರಗಡೆ ತಲೆ ಎತ್ತಿ ತಿರುಗಾಡುವುದಕ್ಕಾಗುದಿಲ್ಲ, ತಲೆಯನ್ನು ನಾವು ತಗ್ಗಿಸಬೇಕಾಗಿ ಬರುತ್ತದೆ. ನಾನು ಮೊನ್ನೆ ಪೇಟೆಯಿಂದ ಬರುತ್ತಿದ್ದಾಗ ದಾರಿಯಲ್ಲಿ ಒಬ್ಬ ಮಿಲಿಟರಿ ಕರ್ನಲ್ ಸಿಕ್ಕಿದ್ದರು. ಆಗ ಅವರು ಏನು—ನಿಮ್ಮ ಗೌರ್ನಮೆಂಟಿನವರು ಬೇಕಾದಷ್ಟು ಬಾಯಿನಲ್ಲಿ ಹೇಳಿಬಿಡುತ್ತಾರೆ. ಆದರೆ ಕಾರ್ಯದಲ್ಲಿ ಮಾತ್ರ ಒಂದನ್ನೂ ಮಾಡುತ್ತಿಲ್ಲ ಎಂದು ಕೇಳಿದರು. ಅವರು ನೆಫಾ ಬಾರ್ಡರಿನಿಂದ ಬರುತ್ತಿದ್ದರು. ಅವರು ಕೇಳಿದರು ಆರ್ಮಿಯಿಂದ ನಿವೃತ್ತಿಹೊಂದಿ ಬರತಕ್ಕ ಜನರಿಗೆ ಭೂಮಿಯನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ; ಪ್ರಾಮಿಸ್ ಮಾಡುತ್ತಿದ್ದಾರೆ ಆದರೆ ಒಬ್ಬರಿಗೂ ಹಾಗೆ ಕೊಟ್ಟಿದ್ದನ್ನು ಕಾಣಲಿಲ್ಲ ಎಂದು ಹೇಳಿದರು. ಅಷ್ಟೇ ಅಲ್ಲದೆ ಅವರು ಇನ್ನೂ ಏನು ಹೇಳಿದರು ಎಂದರೆ ಅವರೇ ಸ್ವತಃ ನಮ್ಮ ಮುಖ್ಯ ಮಂತ್ರಿಗಳಿಗೆ ಒಂದಲ್ಲಾ—ಎರಡಲ್ಲ—ಸಾವಿರಾರು ಕಾಗದಗಳನ್ನು ಬರೆದ, ಅವುಗಳಲ್ಲಿ ಒಂದಕ್ಕೂ ಉತ್ತರ ಸಹಾ ಬರಲಿಲ್ಲ ಎಂಬುದಾಗಿ ಹೇಳಿದರು. ನಾವು ಬರೆಯುತಕ್ಕ ಕಾಗದಗಳಿಗೆ ಇಲ್ಲಿಂದ ಒಂದು ಪುರಾವೆ ಕೂಡ ಸಿಕ್ಕುವುದಿಲ್ಲ ಎಂದು ಕೇಳುತ್ತಿದ್ದರು. ಆದರೆ ನಾವೇನೋ ಅಲ್ಲಿ ನಮ್ಮ ಆಡಳಿತವನ್ನು ಡಿಫೆಂಡ್ ಮಾಡಿಕೊಂಡಾಗ್ಯೂ ನಮಗಾಗಿ ಪ್ರಾಣ ಕೊಡತಕ್ಕ ಜನರ ಬಗ್ಗೆ ನಾವು ಈ ರೀತಿ ನಡೆಯುತ್ತಿರುವುದು ಸರಿಯಲ್ಲ ಎಂದು ಹೇಳುತ್ತೇನೆ. ಇಲ್ಲಿ ಇಷ್ಟು ಜನರು ನೌಕರರಿದ್ದಾರಲ್ಲ ಅವರಿಗೆ ಬರೆದ ಕಾಗದಕ್ಕೆ ಒಂದು ಜವಾಬನ್ನು ಕೊಡುವುದಕ್ಕಾಗಲಿಲ್ಲ ಎಂದರೆ

ಇದೆಂಥ ಅಕ್ಷಮ್ಯವಾದದ್ದು? ಇದಕ್ಕೆ ಯಾರು ಕಾರಣರು ಎಂಬುದನ್ನು ಕಂಡುಹಿಡಿದು ಅವರಿಗೆ ಉಗ್ರ ಶಿಕ್ಷೆ ಮಾಡಬೇಕೆಂದು ಹೇಳುತ್ತೇನೆ. ಆ ಮಿಲಿಟರಿ ಸರ್ವೀಸಿನಿಂದ ಬಂದ ಅನೇಕ ಜನ ಇಂಜಿನಿಯರೂ ಮತ್ತು ಡಾಕ್ಟರುಗಳು ಇಲ್ಲಿ ಕೆಲಸವಿಲ್ಲದೆ ಅಲೆಯುತ್ತಿದ್ದಾರೆ. ಅವರಿಗೆ ನಾವು ಹಿಂದೆ ಮಾತು ಕೊಟ್ಟ ಪ್ರಕಾರ ಅದನ್ನು ಉಳಿಸಿಕೊಳ್ಳಬೇಕು. ಅದನ್ನು ಈ ದಿವಸ ನಾವು ಉಳಿಸಿಕೊಂಡಿಲ್ಲ. ಇತ್ತ ಕಡೆಗೆ ಸರ್ಕಾರದವರು ಕೂಡಲೆ ಗಮನ ಕೊಟ್ಟು ಅವರಿಗೆ ಅನುಕೂಲ ಗಳನ್ನು ನಾವು ಆಡಿದ್ದ ಪ್ರಕಾರ ಮಾಡಬೇಕೆಂದು ನಾನು ಆಗ್ರಹ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಅಧಿಕಾರಿಗಳಿಗೆ ಒಂದು ಚಾಳಿ ಆಗಿಹೋಗಿದೆ. ಕೆಳಗಿನಿಂದ ಮೇಲಿನವರೆಗೆ ಫೈಲು ಗಳನ್ನು ತಳ್ಳಿಹಾಕಿಕೊಂಡು ಹೋಗುವ ದುರಭ್ಯಾಸ. ಅದಕ್ಕಾಗಿ ಅವರಿಗೆ ಒಂದು ಜವಾಬ್ದಾರಿ ಯನ್ನು ಗೊತ್ತು ಮಾಡಬೇಕು. ನಾವು ಸರ್ಕಾರಕ್ಕೆ ಒಳಪಟ್ಟಿರುತ್ತೇವೆಂದು ಹೇಳಿ ಮೇಲಿನ ಆಫೀಸರಿಗೆ ಫೈಲು ಹೋಗಿದೆ ಎಂದು ಸುಮ್ಮಸುಮ್ಮನೆ ಅದನ್ನು ತಮಲ್ಲಿ ಇಟ್ಟುಕೊಂಡು ಕೆಲವು ಅಧಿಕಾರಿಗಳು ಹೇಳುವುದರಲ್ಲಿ ಅರ್ಥವಿಲ್ಲ. ಅವರಿಗೆ ಅಲ್ಲಿ ಒಂದು ಚಿಟಿಕೆ ಮುಟ್ಟಿಸಬೇಕು. ಇಲ್ಲದೇ ಹೋದರೆ ಅಂತಹ ಅಧಿಕಾರಿಗಳಿಗೆ ಇಂತಹ ಶಿಕ್ಷೆಯಾಗುತ್ತದೆಂದಾದರೂ ನಿಗದಿಯಾಗಿ ಹೇಳಬೇಕು.

ಇನ್ನು ನನಗೆ ನಿನ್ನೆಯದಿನ ವ್ಯವಸಾಯ ಬೇಡಿಕೆಯ ಬಗ್ಗೆ ಮಾತನಾಡುವುದಕ್ಕೆ ಕಾಲಾವಕಾಶ ಸಿಗಲಿಲ್ಲ. ಫರ್ಟಿಲೈಜರ್ಸ್ ಕೊಡುವ ನೀತಿಯನ್ನು ಏಕ'ದಂ ನಿಲ್ಲಿಸಿ ಸಬ್ಸಿಡಿ ಕೊಡುತ್ತೇವೆಂದು ಅವರು ಈಗ ಹೇಳುತ್ತಿದ್ದಾರೆ. ಯಾರಿಗೂ ಹೇಳಲಿಲ್ಲ, ಕೇಳಲಿಲ್ಲ, ನಿಲ್ಲಿಸಿದರು. ಇದನ್ನು ಏಕೆ ನಿಲ್ಲಿಸಿದರೆಂಬುದು ಒಬ್ಬರಿಗೂ ಗೊತ್ತಿಲ್ಲ. ರೈತರಿಗೆ ಕೊಡುವ ಸೌಲಭ್ಯಗಳಿಗೋಸ್ಕರ ನೀವು ಬೇಕಾದಷ್ಟು ಧಾನ್ಯಗಳನ್ನು ತರಿಸುವುದಕ್ಕೆ ಬೇಕಾದಷ್ಟು ಹಣವನ್ನು ಖರ್ಚುಮಾಡುತ್ತೀರಿ. ಭೂಮಿಯಿಂದ ಸಾರ ಉತ್ಪತ್ತಿ ಮಾಡುವ ವಸ್ತುಗಳನ್ನು ರೈತರಿಗೆ ವಿಶೇಷವಾಗಿ ಕೊಡಬೇಕು. ಫರ್ಟಿಲೈಜರುಗಳನ್ನು ಮುಖ್ಯವಾಗಿ ಕೊಡಬೇಕು. 'ತುತ್ತು ತೂಕ ಕೆಡಿಸಿತು' ಎನ್ನುವ ಹಾಗೆ ನೀವು ಪರದೇಶಗಳಲ್ಲಿ ಹೋಗಿ ಭಿಕ್ಷೆ ಬೇಡಿ ಬೇಡಿ ಆಹಾರಪದಾರ್ಥಗಳನ್ನು ತಂದರೂ ಈ ಆಹಾರ ಸಮಸ್ಯೆ ಬಗೆಹರಿದಿಲ್ಲ. ಆಹಾರ ಸಾಕಷ್ಟು ಇಲ್ಲ. ಅಂದಮೇಲೆ ಇಂತಹ ಪಾಲಿಸಿಯನ್ನು ಏಕ'ದಂ ಬದಲಾವಣೆ ಮಾಡುವುದು ಸರಿಯಲ್ಲ.

ಇನ್ನು ವ್ಯವಸಾಯೋಪಕರಣಗಳ ಬಗ್ಗೆ, ಟ್ರಾಕ್ಟರುಗಳನ್ನು ಏನಾದರೂ ಅಂಗಡಿಗೆ ಹೋಗಿ ಕೇಳಿದರೆ ನಿಮ್ಮ ಸರ್ಕಾರವನ್ನು ಕೇಳಿ ಎಂಬುದಾಗಿ ಹೇಳುತ್ತಾರೆ. ನಿಮ್ಮ ಸರ್ಕಾರ ಏನು ಮಾಡುತ್ತಿದೆಯೆಂದೂ ಕೇಳುತ್ತಾರೆ. ಇದರಿಂದ ನಮಗೆ ಹೀಗೆ ವಾಪಸ್ಸಾಗಿ ಬರುವುದಕ್ಕೆ ನಾಚಿಕೆ ಯಾಗುತ್ತದೆ. ವ್ಯವಸಾಯೋಪಕರಣಗಳನ್ನು ಕೇಳುವ ಸಂದರ್ಭದಲ್ಲಿ ಕೆಲವು ಕಡೆ ಟ್ರಾಕ್ಟರು ಗಳನ್ನು ಕೊಟ್ಟಿದ್ದರೂ ಅವಕ್ಕೆ ಬೇಕಾದ ಉಪಕರಣಗಳಿಲ್ಲ, ಟೈರುಗಳಿಲ್ಲ, ಇತರ ಯಾವ ಸಾಮಾನುಗಳೂ ಇಲ್ಲವೆಂದು ಅಲ್ಲಿ ಹೇಳುತ್ತಾರೆ. ಆದ್ದರಿಂದ ಬರೀ ಟ್ರಾಕ್ಟರುಗಳನ್ನು ರೈತರು ಇಟ್ಟುಕೊಂಡು ಏನು ಮಾಡಬೇಕು! ಸರ್ಕಾರದವರು ಈ ಬಗ್ಗೆ ಹೆಚ್ಚಿನ ಗಮನಕೊಡಬೇಕು.

ಇನ್ನು ಬೋರಿಂಗ್ ಮೆಷಿನ್ ವಿಚಾರ. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತ ನಾಡಿದ್ದಾರೆ. ಕೊಯಮತ್ತೂರಿನಲ್ಲಿ ಒಬ್ಬ ರೈತ 300-400 ಅಡಿಗಳಷ್ಟು ಒಂದೇ ದಿವಸದಲ್ಲಿ ಡ್ರಿಲ್ ಮಾಡಿಸಿ ಬಾವಿ ತೆಗೆಯುತ್ತಿದ್ದಾರೆ. ಎಲ್ಲಿ ಅರಿಡ್ ಜೋನ್, ಇದೆ ಎಲ್ಲಿ ಕ್ಷಾಮ ಪರಿಸ್ಥಿತಿ ಇದೆ, ಅಂತಹ ಅರಿಡ್ ಏರಿಯಾಗಳಿಗೆ ಪ್ರಿಫರೆನ್ಸ್ ಕೊಟ್ಟು ಅಂತಹ ಮೆಷಿನ್ನುಗಳನ್ನು ಕೊಡಬೇಕು. ಸರ್ಕಾರದವರು ಹೇಗೆ ರೈತರಿಗೆ ಟ್ರಾಕ್ಟರುಗಳನ್ನು ಕೊಡುತ್ತಾರೋ ಅದೇ ರೀತಿಯಲ್ಲಿ ನಮ್ಮ ದೇಶದ ರೈತರಿಗೂ ಅಂತಹ ಮೆಷಿನ್ನುಗಳನ್ನು ಕೊಟ್ಟು ಸಹಾಯಮಾಡಬೇಕು. ಮೊನ್ನೆ ದಿವಸ ನಾನು ಕುರಿಕೊಪ್ಪಕ್ಕೆ ಹೋಗಿದ್ದೆ ಅಲ್ಲಿನ ಒಂದು ಆಫೀಸಿನಲ್ಲಿ ಒಂದು ಟ್ರಾಕ್ಟರ್ ಕಂಡಮ್ ಆಗಿ ಮೂರುವರ್ಷಗಳಾಗಿವೆ. ಅಲ್ಲದೆ ಇನ್ನೊಂದು ಆಫೀಸಿನಲ್ಲಿ ಒಂದು ವ್ಯಾನ್ ಕಂಡಮ್ ಆಗಿದೆ. ಸುಮಾರು ನಾಲ್ಕೈದು ವರ್ಷಗಳಿಂದಲೂ ಅವುಗಳು ಯಾವ ಇಲಾಖೆಗೆ ಸೇರಿದೆಯೇ ಗೊತ್ತಾಗ ಲಿಲ್ಲ. ಅವುಗಳಿಂದ ಏನೂ ಕೆಲಸವಾಗುತ್ತಾ ಇಲ್ಲ. ಹೀಗೆ ಸರ್ಕಾರದಲ್ಲಿ ಹೇಳುವವರೂ, ಕೇಳುವವರೂ ಇಲ್ಲವೇ ಎನ್ನುವ ಹಾಗೆ ಬೇಕಾದಷ್ಟು ಇಂತಹ ವೆಹಿಕಲ್ಸ್ ಕಂಡಮ್ ಆಗಿ ನಿಂತಿವೆ. ಆ ಮಾತನ್ನು ಎಲ್ಲಾ ಮಂತ್ರಿಗಳೂ ಒಪ್ಪಿಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಯಾವುದಾ ದರೂ ವೆಹಿಕಲ್ ಕಂಡಮ್ ಆಗಿದೆ ಎಂದು ವರದಿ ಬಂದಕೂಡಲೇ ಅದನ್ನು ಹರಾಜು ಹಾಕಬೇಕು, ಇಲ್ಲದಿದ್ದರೆ ತುಕ್ಕ ಹಿಡಿದು ಹೋಗುತ್ತದೆ. ನಂತರ ಅದು ಏನು ಪ್ರಯೋಜನಕ್ಕೂ ಬರುವುದಿಲ್ಲ. ಹೆಚ್ಚಿನ ಲುಕ್ಸಾನು ಆಗುತ್ತದೆ. ಸರ್ಕಾರಕ್ಕೆ ಅದರಿಂದೇನೂ ಅನುಕೂಲವಿಲ್ಲ. ಅವನ್ನು ಹರಾಜು ಹಾಕಿದರೆ, ಸಾಕಷ್ಟು ದುಡ್ಡಾದರೂ ಸರ್ಕಾರಕ್ಕೆ ಬರುತ್ತದೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಇನ್ನು ಮೆಡಿಕಲ್ ಡಿಪಾರ್ಟ್‌ಮೆಂಟ್ ಬಗ್ಗೆ ಕೆಲವು ವಿಚಾರಗಳನ್ನು ಹೇಳುತ್ತೇನೆ. ಇಲ್ಲಿಯೂ ಒಬ್ಬ ಅಧಿಕಾರಿಯ ಮೇಲೆ ಇನ್ನೊಬ್ಬ ಅಧಿಕಾರಿ ದೂರು ಹೇಳುವುದು ಜಾಸ್ತಿಯಾಗಿದೆ. ಯಾರಾದರೂ ಟೆಕ್ನಿಕಲ್ ಕ್ವಾಲಿಫೈ ಆಗದೆ ಇದ್ದರೂ ಅವರನ್ನು ನೇಮಕ ಮಾಡಿ ಎಂದು ಹೇಳುವುದಲ್ಲದೆ ಅಡ್ಮಿನಿಸ್ಟ್ರೇಷನ್ ವರ್ಕ್ ಮಾಡುವವರ ಮೇಲೆ ಸಾಕಷ್ಟು ರೀತಿಯಲ್ಲಿ ಪ್ರಭಾವ ಬೀರಿ ಕೆಲಸಮಾಡಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ಯಾರಾದರೂ ಐ. ಎ. ಎಸ್. ಅಧಿಕಾರಿಗಳನ್ನು ಅಲ್ಲಿಗೆ ಅಡ್ಮಿನಿಸ್ಟ್ರೇಟರ್ ಆಗಿ ಹಾಕಿದರೆ ಆಗ ಅವರು ಕಳುಹಿಸುವ ಶಿಫಾರ್ಸಿಗೆ ಉತ್ತಮಮಟ್ಟದಲ್ಲಿ ಬೆಲೆ ಬರಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಬೆಂಗಳೂರು, ಮೈಸೂರು ಮುಂತಾದ ದೊಡ್ಡ ಪಟ್ಟಣಗಳಲ್ಲಿರುವ ಆಸ್ಪತ್ರೆಗಳ ಆಡಳಿತವನ್ನು ಸರ್ಕಾರೀ ಡಾಕ್ಟರುಗಳಿಗೆ ಕೊಡುವುದಕ್ಕಿಂತ ಆನರರಿ ಸರ್ಜನ್ಸ್ ಕೈಲಿ ಕೊಡುವುದು ಒಳ್ಳೆಯದು. ಏಕೆಂದರೆ, ಬೊಂಬಾಯಿನಲ್ಲಿ ಜಿ. ಎಸ್. ಮೆಡಿಕಲ್ ಕಾಲೇಜು, ಜೆ. ಟಿ. ಗ್ರೂಪ್ ಆಸ್ಪತ್ರೆ, ಕೆ. ಇ. ಎಂ. ಆಸ್ಪತ್ರೆ, ಸಾಯಾನ್ ಆಸ್ಪತ್ರೆ ಮತ್ತು ನಾಯರ್ ಆಸ್ಪತ್ರೆ—ಇವು ಸ್ಯಾಂಪಲ್‌ಗೆ ಒಂದೊಂದು ಯೂನಿಟ್ ಇದೆಯೇ ಹೊರತು, ಹೆಚ್ಚಿಗೆ ಹೆಡ್ ಡಾಕ್ಟರ್ಸ್ ಇಲ್ಲ. ಅಲ್ಲಿರತಕ್ಕ ಪ್ರತಿಯೊಂದು ಆಸ್ಪತ್ರೆಯೂ ಆನರರಿ ಸರ್ಜನ್ಸ್‌ಗಳಿಂದಲೇ ನಡೆಯುತ್ತಿವೆ. ಮದ್ರಾಸ್, ಗುಜರಾತ್, ಆಂಧ್ರ ಮತ್ತು ದೆಹಲಿ ಮುಂತಾದ ಕಡೆಗಳಲ್ಲಿ ಆನರರಿ ಸರ್ಜನ್ಸ್ ಅಲ್ಲಿನ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕೇವಲ 100–150 ರೂಪಾಯಿಗಳನ್ನು ಆನರರಿಯಾಗಿ ಕೊಡುತ್ತಾರೆ. ಆದರೆ ಇಲ್ಲಿರತಕ್ಕ ಆಸ್ಪತ್ರೆಗಳಲ್ಲಿರುವವರು ತಮ್ಮ ಒಂದು ಸ್ವಪ್ರತಿಷ್ಠೆಗೋಸ್ಕರ ಕೆಲಸಮಾಡುತ್ತಿದ್ದಾರೆ. ಇವರಿಗೆ ಇಲ್ಲಿ ಸಾವಿರಾರು ರೂಪಾಯಿಗಳ ಸಂಬಳವನ್ನು ಕೊಟ್ಟರೂ ಬಡವರನ್ನು ನೋಡುವುದಕ್ಕೆ ಸಾಧ್ಯವಿಲ್ಲ. ಅಂತಹವರನ್ನು ಇಲ್ಲಿ ನೇಮಿಸಿದರೆ ಅವರ ಸರ್ವೀಸ್ ಇಲ್ಲಿ ಫ್ರೀಯಾಗಿ ಸಿಗುತ್ತದೆ. ಆಗ ಬಡವರಿಗೆ ಬೇಕಾದಷ್ಟು ಸಹಾಯವಾಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ವಿಚಾರಮಾಡಿ ಇಲ್ಲಿಯೂ ಆ ತರಹ ವ್ಯವಸ್ಥೆ ಅಡಾಪ್ಟ್ ಮಾಡಿಕೊಳ್ಳುವುದು ಬಹಳ ಒಳ್ಳೆಯದು ಎಂಬುದಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೌರಿಂಗ್ ಆಸ್ಪತ್ರೆಯಲ್ಲಿ ಒಂದು ಟೀಚಿಂಗ್ ಇನ್‌ಸ್ಟಿಟ್ಯೂಷನ್ ಇದೆ. ಅಲ್ಲಿನ ಡಾಕ್ಟರಿಗೆ ಏನು ಅದೃಷ್ಟ ಖುಲಾಯಿಸಿದೆಯೋ ಗೊತ್ತಿಲ್ಲ. ಅವರು ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೇ ಹೆಚ್ಚಿನ ಕಾಲ ತೆಗೆದುಕೊಳ್ಳುತ್ತಿದ್ದಾರೆ. ಪ್ರೈವೇಟ್ ನರ್ಸಿಂಗ್‌ಹೋಂಗಳನ್ನು ಅಲ್ಲಿಯೇ ಪಕ್ಕದಲ್ಲಿ ಮಾಡಿಕೊಂಡಿದ್ದಾರೆ. ಅನೇಕ ಡಾಕ್ಟರ್‌ಗಳು ಸೆಂಟ್ ಫಿಲೋಮಿನಾ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಾರೆ. ಸೆಂಟ್ ಮಾರ್ಥಾ ಆಸ್ಪತ್ರೆಯಲ್ಲಿ ಕೆಲಸಮಾಡುತ್ತಾರೆ. ಇವರಿಗೆ ಒಂದು ವರ್ಕಿಂಗ್ ಅವರ್ಸ್ ಇಲ್ಲ. ಅದನ್ನು ನೋಡುವವರೂ ಇಲ್ಲ, ಕೇಳುವವರೂ ಇಲ್ಲ. ಹೀಗಾಗಿದೆ. ನಾನು ಅದಕ್ಕೆ ಏನು ಸಲಹೆಮಾಡುತ್ತೇನೆಂದರೆ, ಅಲ್ಲಿ ಸರ್‌ಪ್ರೈಜ್ ಚೆಕ್ ಇರಬೇಕು. ಇಲ್ಲದಿದ್ದರೆ ಅಲ್ಲಿ ಹೇಳುವವರು, ಕೇಳುವವರು ಇಲ್ಲದೆ ಇಂತಹ ಆಸ್ಪತ್ರೆಗಳಲ್ಲಿ ಕೆಲಸಗಳು ಚೆನ್ನಾಗಿ ನಡೆಯುವುದಿಲ್ಲ. ಇವರಿಗೆ ಸಂಬಳದ ಜೊತೆಗೆ ನಾನ್ ಪ್ರಾಕ್ಟೀಸಿಂಗ್ ಅಲೋಯನ್ಸ್ ಬೇರೆ ಕೊಡುತ್ತಿದ್ದಾರೆ. ದಯವಿಟ್ಟು ಸರ್ಕಾರದವರು ಇದನ್ನು ವಿಚಾರಮಾಡಬೇಕು.

ಇನ್ನು ಅಕ್ವಿಸಿಷನ್ ಆಫೀಸರುಗಳ ವಿಷಯವಾಗಿ ಒಂದು ಮಾತನ್ನು ಹೇಳುತ್ತೇನೆ. ಆ ಹುದ್ದೆಗಳಿಗೆ ಕೆಲಸಕ್ಕೆ ಬಾರದೇ ಇರತಕ್ಕ ಅಧಿಕಾರಿಗಳನ್ನು ಹಾಕಿದ್ದಾರೆ. ಅವರು ಕೇಸಸ್ ಬೇಗನೇ ಇತ್ಯರ್ಥಮಾಡಿ ಕಾಂಪನ್‌ಸೇಷನ್ ಕೊಡುವುದಿಲ್ಲ. ಹೀಗಾಗಬಾರದು. ಅಂತಹ ಹುದ್ದೆಗಳಿಗೆ ಚಿಕ್ಕವಯಸ್ಸಿನ ಉತ್ಸಾಹಶಾಲಿಗಳಾದ ಅಧಿಕಾರಿಗಳನ್ನು ಹಾಕಬೇಕು ಎಂಬುದಾಗಿ ನನ್ನ ಸಲಹೆ.

ಇನ್ನು ನ್ಯಾಯವಾಗಿ ಲೆವಿ ಕೊಟ್ಟಿರುವ ರೈತರಿಗೆ ಕೆಲವು ಅನುಕೂಲತೆಗಳನ್ನು ಮಾಡಿಕೊಡಬೇಕು. ಇತ್ತೀಚೆಗೆ ಕೆಲವು ಜನ ವಕೀಲರು, ಡಾಕ್ಟರುಗಳು ಆಗಿ ವ್ಯವಸಾಯವನ್ನು ಉಪಕಸಬಾಗಿ ಇಟ್ಟುಕೊಂಡಿದ್ದಾರೆ. ಬರೀ ವ್ಯವಸಾಯವನ್ನೇ ತಮ್ಮ ಜೀವನವನ್ನಾಗಿ ಇಟ್ಟುಕೊಂಡಿರುವ ರೈತರಿಂದ ಲೆವಿಯನ್ನು ವಸೂಲುಮಾಡಿದ್ದಾರೆ. ಅಂಥ ರೈತರಿಗೆ ಕಂತುಗಳ ಮೇಲೆ ಟ್ರಾಕ್ಟರ್‌ಗಳನ್ನು ಕೊಟ್ಟು, ಫರ್ಟಿಲೈಜರ್ಸ್, ಡೀಸೆಲ್ ಸ್ಪೇರ್ ಪಾರ್ಟ್ಸ್ ಇವುಗಳಿಗೆ ಸರ್ಕಾರದವರು ಸಬ್ಸಿಡಿ ಕೊಟ್ಟು ಹೆಚ್ಚಿನ ರೀತಿಯಲ್ಲಿ ಅನುಕೂಲಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

ಕೊನೆಯದಾಗಿ ನಮ್ಮ ದೇಶದಲ್ಲಿ ಹೆಣ್ಣುಮಕ್ಕಳು ಸಾಕಷ್ಟು ಜನ ವಿದ್ಯಾವಂತರಿದ್ದಾರೆ. ಅವರಿಗೆ ಉಪಾಧ್ಯಾಯರ, ಲಾಯರುಗಳ, ಡಾಕ್ಟರುಗಳ ಹುದ್ದೆಗಳನ್ನು ಹೆಚ್ಚು ಹೆಚ್ಚಿಗೆ ಕೊಡಲು

ಸಾಕಷ್ಟು ಕೋಟಾ ಇಟ್ಟಿರಬೇಕೆಂದು ಹೇಳುತ್ತೇನೆ. ಇಷ್ಟು ಹೊತ್ತು ನನಗೆ ಇಲ್ಲಿ ಮಾತನಾಡಲು ಕಾಲಾವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3-30 P. M.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಇರತಕ್ಕಂಥ ಮೂರು ಬೇಡಿಕೆಗಳಾದ Parliament, State—Union Territory Legislature, Administration of Justice and General Administration, ಈ ಮೂರು ಬೇಡಿಕೆಗಳ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ನ್ಯಾಯಾಂಗ ಇಲಾಖೆಗೆ ಸಂಬಂಧಪಟ್ಟಂತೆ ಇರುವ ಬೇಡಿಕೆಯ ಮೇಲೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಈಗ ನಮ್ಮ ರಾಜ್ಯಸರ್ಕಾರದವರು ಮೈಸೂರು ರಾಜ್ಯದಲ್ಲಿರತಕ್ಕಂಥ ಎಲ್ಲಾ ಕೋರ್ಟ್‌ಗಳಲ್ಲಿಯೂ ವ್ಯವಹಾರಗಳು ಕನ್ನಡದಲ್ಲಿ ಆಗುವಂತೆ ಜಾರಿಗೆ ತರಬೇಕು. ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ, ಕೋರ್ಟುಗಳಿಗೆ ಬರತಕ್ಕವರು ಹೆಚ್ಚಿಗೆ ಹಳ್ಳಿಯ ಜನರು. ಇವರಿಗೆ ಇಂಗ್ಲೀಷ್‌ನ ವ್ಯವಹಾರ ಜ್ಞಾನ ಇರುವುದಿಲ್ಲ. ಎಲ್ಲಾ ಕೋರ್ಟುಗಳಲ್ಲಿಯೂ ಈಗ ಇಂಗ್ಲೀಷ್‌ನಲ್ಲಿ ವ್ಯವಹಾರ ನಡೆಯುತ್ತಿರುವುದನ್ನು ನಾವು ನೋಡುತ್ತಿರುತ್ತೇವೆ. ಸಾಕ್ಷಿಯನ್ನು ಹೇಳುವುದಕ್ಕೆ ಬರುವ ಅಧಿಕಾರಿಗಳಿಂದ ಹಿಡಿದು ಲಾಯರ್‌ಗಳು, ಜಡ್ಜ್‌ಗಳು ಎಲ್ಲರೂ ಸಹ ಇಂಗ್ಲೀಷ್‌ನಲ್ಲಿಯೇ ಮಾತನಾಡುತ್ತಾರೆ. ಇದರಿಂದ ಯಾವ ರೈತರು ಅಥವಾ ಹಳ್ಳಿಯ ಜನರು ನ್ಯಾಯ ದೊರಕಿಸಿಕೊಳ್ಳಬೇಕೆಂದು ಕೋರ್ಟಿಗೆ ಬರುತ್ತಾರೋ, ಅವರಿಗೆ ನ್ಯಾಯಾಲಯದಲ್ಲಿ ಏನು ನಡೆಯುತ್ತಿದೆ ಎಂಬುದು ತಿಳಿಯುವುದಕ್ಕೆ ಅವಕಾಶವಾಗುತ್ತಿಲ್ಲ. ಈ ಕಾರಣದಿಂದ ಅವರು ಬಹಳ ನೊಂದುಕೊಳ್ಳುತಿದ್ದಾರೆ. ಈ ಕಾರಣದಿಂದ ಹೈಕೋರ್ಟು, ಡಿಸ್ಟ್ರಿಕ್ಟ್ ಜಡ್ಜ್ ಕೋರ್ಟು, ಮ್ಯಾಜಿಸ್ಟ್ರೇಟ್ ಕೋರ್ಟು ಮುಂತಾದ ಎಲ್ಲಾ ಕೋರ್ಟುಗಳಲ್ಲಿಯೂ ಕನ್ನಡವನ್ನೇ ವ್ಯವಹಾರ ಭಾಷೆಯನ್ನಾಗಿ ಉಪಯೋಗಿಸಬೇಕೆಂದು ಸರ್ಕಾರದವರು ತಿಳಿಸಬೇಕು. ಕೇಸ್‌ಗಳನ್ನು ತೆಗೆದುಕೊಂಡು ಬರತಕ್ಕವರಿಗೆ, ಕೋರ್ಟ್‌ಗಳಲ್ಲಿ ಏನು ನಡೆಯುತ್ತದೆ ಎಂಬುದು ತಿಳಿಯುವಂತಿರಬೇಕು. ಇದರ ಬಗ್ಗೆ ಸರ್ಕಾರದವರು ತೀವ್ರವಾದಂಥ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಭೆಯ ಮುಂದೆ ನನ್ನ ಸಲಹೆಯನ್ನು ಇಡುತ್ತಿದ್ದೇನೆ.

ಇನ್ನು ಕೋರ್ಟುಗಳಲ್ಲಿ ನ್ಯಾಯ ವಿತರಣೆಯು ಬಹಳ ನಿಧಾನವಾಗುತ್ತಿದೆ. ಸುಮಾರಾಗಿ ನಾನು ಹೈಕೋರ್ಟಿನ ವಿಷಯವನ್ನು ತಿಳಿದುಕೊಂಡಿದ್ದೇನೆ. 1950-51 ರಿಂದ ಕೆಲವು ಅಪೀಲ್ ಕೇಸ್‌ಗಳು ಬಾಕಿ ಇವೆಯೆಂದು ಕೇಳಿದ್ದೇನೆ. ಈ ರೀತಿಯಾಗಿ ಅದರಲ್ಲೂ ಹೈಕೋರ್ಟಿನಲ್ಲಿ ನೂರಾರು ಕೇಸ್‌ಗಳು ಅನೇಕ ವರ್ಷಗಳವರೆಗೆ ಬಾಕಿ ನಿಂತರೆ, ಕೇಸ್‌ಗಳನ್ನು ತಂದಿರುವವರಿಗೆ ನ್ಯಾಯ ಸಿಗುತ್ತದೆ ಎನ್ನುವ ನಂಬಿಕೆ ಇದ್ದರೂ ಸಹ ಅನುಮಾನಕ್ಕೆ ಆಸ್ಪದ ಕೊಟ್ಟಂತಾಗುತ್ತದೆ. ನ್ಯಾಯಾಲಯದಲ್ಲಿ ಜಾಗ್ರತೆ ನ್ಯಾಯ ಸಿಗಬೇಕು. ಇಂಗ್ಲೀಷ್‌ನಲ್ಲಿ "Justice delayed is justice denied" ಎಂದು ಹೇಳುತ್ತಾರೆ. ಆದ್ದರಿಂದ ಈಗ ತಡವಾಗಿ ಇತ್ಯರ್ಥ ಮಾಡುವ ಪದ್ಧತಿ ಏನಿದೆ ಅದನ್ನು ನಿಲ್ಲಿಸುವುದಕ್ಕೆ ರಾಜ್ಯ ಸರ್ಕಾರದವರು ಏರ್ಪಾಡು ಮಾಡಬೇಕು. ಇದಕ್ಕೆ ಬೇಕಾದರೆ ಒಂದು ಸಮಿತಿಯನ್ನು ನೇಮಕ ಮಾಡಿ. ತಿಳಿವಳಿಕೆ ಇರುವಂಥ ಅಧಿಕಾರಿಗಳಿಂದ ಕೂಡಿದ ಒಂದು ಕಮಿಟಿಯನ್ನು ನೇಮಕ ಮಾಡಿದರೆ ಅವರು ಈ ಬಗ್ಗೆ ಇರುವ ದೋಷಗಳನ್ನು ಕಂಡು ಹಿಡಿದು ಏನಾದರೂ ಒಂದು ಸಲಹೆಯನ್ನು ಕೊಡುತ್ತಾರೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ತ್ವರಿತವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಭೆಯ ಮುಂದೆ ನನ್ನ ಸಲಹೆಯನ್ನು ಇಡುತ್ತಿದ್ದೇನೆ.

ಇನ್ನು ಸಂಸತ್ ಮತ್ತು ರಾಜ್ಯದಲ್ಲಿರತಕ್ಕಂಥ ಶಾಸನಸಭೆಗೆ ಸಂಬಂಧಪಟ್ಟಂತೆ ಏನು ಒಂದು ಬೇಡಿಕೆ ಇದೆ, ಇದರ ಬಗ್ಗೆ ಕೆಲವು ವಿಚಾರಗಳನ್ನು ಈಗಾಗಲೇ ಹೇಳಿದ್ದೇನೆ. ಭಾರತ ದೇಶದಲ್ಲಿರತಕ್ಕಂಥ ಅನೇಕ ರಾಜ್ಯಗಳಲ್ಲಿ ಇವತ್ತಿನದಿವಸ ಮೇಲ್ಮನೆ ಅಥವಾ ಲೆಜಿಸ್ಲೇಟಿವ್ ಕೌನ್ಸಿಲ್ ಎಂಬುದು ಇಲ್ಲ. ಆಂಧ್ರ ರಾಜ್ಯದಲ್ಲೂ ಸಹ ಮೇಲ್ಮನೆ ಎಂಬುದು ಇಲ್ಲ. ನುರಿತ ತಜ್ಞರನ್ನು, ನಾನಾ ಕ್ಷೇತ್ರಗಳ ಪ್ರತಿನಿಧಿಗಳನ್ನು ಈ ಸಭೆಗೆ ಚುನಾಯಿಸಿ ಕಾರ್ಯಕಲಾಪ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ರಾಜ್ಯಾಂಗದಲ್ಲಿ ಹೇಳಿರಬಹುದು. ಸಾರ್ವತ್ರಿಕ ಚುನಾವಣೆಗಳಲ್ಲಿ ಜನರಿಗೆ ಬೇಡದ ಪ್ರತಿನಿಧಿಗಳು ಈ ಮೇಲ್ಮನೆಗೆ ಹಿಂಬಾಗಿಲಿನಿಂದ ಬರುವುದಕ್ಕೆ ಒಂದು ಅವಕಾಶ ಮಾಡಿಕೊಟ್ಟಂತಾಗಿದೆ. ಈ ಮೇಲ್ಮನೆಯಿಂದ ದೇಶದ ಬೊಕ್ಕಸಕ್ಕೆ ವ್ಯರ್ಥವಾಗಿ ಹಣ ಖರ್ಚಾಗುತ್ತಿದೆಯೇ ಹೊರತು ಬೇರೆ ಯಾವ ಉಪಯೋಗವು ಆಗುತ್ತಿಲ್ಲ. ಯಾವ ಜನರು ನಮಗೆ ಬೇಡ ಎಂದು ಹೇಳತಕ್ಕ ಪ್ರತಿನಿಧಿಗಳು ಇವತ್ತಿನದಿವಸ ಹಿಂಬಾಗಿಲಿನಿಂದ ಈ ಮನೆಗೆ ಬರುತ್ತಿರುವುದು ಜಾಸ್ತಿ

(ಶ್ರೀ ಎಸ್. ಬಂಗಾರಪ್ಪ)

ಯಾಗಿದೆ. ಈ ಮನೆ ಇರುವುದು ಬೇಡ, ಅನಾವಶ್ಯಕ ಎಂದು ದೊಡ್ಡ ದೊಡ್ಡ ರಾಜಕೀಯ ತಜ್ಞರುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಡಾ|| ಲೋಹಿಯಾ ಅವರು ಸಹ ಈ ಮನೆ ಇರುವುದು ಬೇಡ ಎಂದು ಅನೇಕ ಸಲ ಹೇಳಿದ್ದಾರೆ. ಈ ಒಂದು ದೃಷ್ಟಿಯಿಂದ ಈ ಮೇಲ್ಮನೆಯನ್ನು ರದ್ದು ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಡಿ. ಪರಮೇಶ್ವರಪ್ಪ (ಹೊನ್ನಾಳಿ).—ಮಾನ್ಯ ಸದಸ್ಯರು ತಮ್ಮ ಪಕ್ಷದಿಂದಲೇ ಒಬ್ಬರು ಸದಸ್ಯರನ್ನು ಮೇಲ್ಮನೆಯ ಚುನಾವಣೆಗೆ ನಿಲ್ಲಿಸಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಾನು ಬೇಕಾದರೆ ಚಾಲೆಂಜ್ ಮಾಡುತ್ತೇನೆ, ಸರ್ಕಾರದವರು ಮೇಲ್ಮನೆಯನ್ನು ರದ್ದು ಮಾಡುವುದಾದರೆ ನಮ್ಮ ಪಕ್ಷದಿಂದ ಈಗ ನಿಲ್ಲಿಸಿರುವ ಅಭ್ಯರ್ಥಿಯ ಹೆಸರನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಈ ಒಂದು ಕಾಯಿದೆಯನ್ನೇ ತೆಗೆದುಬಿಡಿ ಎಂದು ನಾನು ಹೇಳುತ್ತಿರುವುದು. ಏಕೆಂದರೆ ಪ್ರಜಾ ರಾಜ್ಯದಲ್ಲಿ ಜನರು ತಮಗೆ ಬೇಡ ಎಂದು ಹೇಳಿದ ಜನರು ಹಿಂಬಾಗಿಲಿನಿಂದ ಈ ಮನೆಗೆ ಬರುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದು ಸರಿಯಲ್ಲ. ಈ ಬಗ್ಗೆ ಇರುವಂಥ ಒಂದು ಕೆಟ್ಟ ಕಾನೂನನ್ನು ರದ್ದು ಮಾಡಿ ಎಂದು ಹೇಳುತ್ತಿದ್ದೇನೆ. ಇವತ್ತಿನ ದಿವಸ ಆಂಧ್ರ ರಾಜ್ಯದಲ್ಲಿ ಮೇಲ್ಮನೆ ಎನ್ನುವುದು ಇಲ್ಲ. ಅಲ್ಲಿ ಏನು ಸರ್ಕಾರಿ ಕಾರ್ಯಕಲಾಪಗಳು ನಡೆಯುತ್ತಿಲ್ಲವೇನು ? ಈ ಮನೆಯಿರುವುದರಿಂದ ಆಡಳಿತ ಪಕ್ಷದವರು ತಮಗೆ ಬೇಕಾದವರನ್ನು ಅದರಲ್ಲೂ ಜಾತಿಯ ಆಧಾರದ ಮೇಲೆ ನಾಮಕರಣ ಮಾಡುವುದಕ್ಕೆ ಅವಕಾಶವಾಗಿದೆ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ಈ ಒಂದು ಕೆಟ್ಟ ಪ್ರವೃತ್ತಿಯನ್ನು, ಕೆಟ್ಟ ಹವ್ಯಾಸವನ್ನು ನಿಲ್ಲಿಸಬೇಕು ಎಂದು. ಜನರಿಗೆ ಬೇಡವಾದಂಥವರನ್ನು ನಾಮಕರಣದ ಮೂಲಕ ಈ ಮೇಲ್ಮನೆಗೆ ಆರಿಸುವುದು ಪ್ರಜಾರಾಜ್ಯಕ್ಕೆ ವಿರುದ್ಧವಾಗಿರುವುದರಿಂದ ಈ ಕೂಡಲೇ ಈ ಲೆಜಿಸ್ಲೇಟಿವ್ ಕೌನ್ಸಿಲ್‌ನ್ನು ರದ್ದು ಮಾಡಬೇಕೆಂದು ಈ ಸಭೆಯ ಮೂಲಕ ಒತ್ತಾಯ ಮಾಡುತ್ತೇನೆ.

ಇನ್ನು ಸಾಮಾನ್ಯ ಆಡಳಿತದ ಬಗ್ಗೆ ಹೇಳುವುದಾದರೆ, ಇದು ಒಂದು ದೊಡ್ಡ ಆಡಳಿತ. ಇದರಲ್ಲಿ ಹೆಚ್ಚು ಕಡಿಮೆ ಎಲ್ಲಾ ಇಲಾಖೆಗಳೂ ಬರುತ್ತವೆ. ಈ ಸಭೆಯ ಮುಂದೆ ಈಗಾಗಲೇ ಅನೇಕ ಬೇಡಿಕೆಗಳ ಬಗ್ಗೆ ಚರ್ಚೆಯಾಗಿದೆ. ಆ ಬೇಡಿಕೆಗಳಿಗೆ ಸಂಬಂಧಪಟ್ಟಂತ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಈ ಮಂತ್ರಿಮಂಡಲದ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನೀವು ನಿಜವಾಗಿಯೂ ಗಾಂಧೀಜಿಯ ತತ್ವವನ್ನು ಅವರ ಶಿಷ್ಯರಾಗಿದ್ದರೆ ಅನುಸರಿಸಬೇಕು. ನಮ್ಮ ದೇಶದಲ್ಲಿರತಕ್ಕಂಥ ಶ್ರೀಸಾಮಾನ್ಯ ಅಥವಾ ಬಡಬೋರೇಗೌಡ ಏನು ಒಂದು ಜೀವನ ನಡೆಸುತ್ತಿದ್ದಾನೆ ಅದಕ್ಕಿಂತ ಭೋಗದ ಜೀವನವನ್ನು ಯಾರೂ ನಡೆಸಬಾರದು ಎಂದು ಗಾಂಧೀಜಿಯವರು ಹೇಳಿದ್ದರು. ಅದರಂತೆ ನೀವು ನಡೆಯುತ್ತಿದ್ದೀರಾ ಎಂದು ಕೇಳುತ್ತೇನೆ. ಈ ಒಂದು ತತ್ವವನ್ನು ಅನುಸರಿಸುತ್ತೇವೆಂದು ಸ್ವಾತಂತ್ರ ಬರುವುದಕ್ಕೆ ಮುಂಚೆ ನೀವೆಲ್ಲಾ ಸಾಮಾನ್ಯ ಜನರಿಗೆ ಭರವಸೆ ಕೊಟ್ಟು ಅಧಿಕಾರಕ್ಕೆ ಬಂದಮೇಲೆ ರಾಜರು ನಡೆಸುತ್ತಿದ್ದ ಭೋಗದ ಜೀವನವನ್ನು ನಡೆಸುವುದಕ್ಕೆ ಪ್ರಾರಂಭ ಮಾಡಿದಿರಿ. ಕಳೆದ 20 ವರ್ಷಗಳಿಂದಲೂ ಸಹ ಈ ರೀತಿಯ ಜೀವನವನ್ನು ಮಾಡಿಕೊಂಡು ಬಂದು ಜನರಿಗೆ ಮೋಸ ಮಾಡಿದ್ದೀರಿ. ಏಕೆಂದರೆ ನೀವುಗಳು ರಾಜರು ಯಾವ ರೀತಿ ಭೋಗದ ಜೀವನ ನಡೆಸುತ್ತಿದ್ದರು ಎಂಬುದನ್ನು ನೋಡಿದ್ದೀರಿ. ನಮಗೆ ಅದರ ಪರಿಚಯವಿಲ್ಲ. ಆ ಒಂದು ರುಚಿಯನ್ನು ನೀವುಗಳು ಕಂಡಿರುವವರಾಗಿದ್ದೀರಿ. ನಿಜವಾಗಿಯೂ ನೀವುಗಳು ಗಾಂಧಿಯ ತತ್ವಗಳನ್ನು ಪಾಲನೆ ಮಾಡಿಕೊಂಡು ಬಂದಿದ್ದರೆ ನಿಮ್ಮ ಮಂತ್ರಿಮಂಡಲದ ಚೆಲುವನ್ನು, ನಿಮ್ಮ ಆಡಳಿತ ಪದ್ಧತಿಯನ್ನು ಒಪ್ಪಬಹುದಾಗಿತ್ತು. ಸ್ವಾತಂತ್ರ್ಯ ಬಂದಾಗ ಜನರು ನಿಮ್ಮ ಕೈಗೆ ಆಡಳಿತವನ್ನು ಕೊಟ್ಟು ತಪ್ಪು ಮಾಡಿದ್ದಾರೆ. ಆಗ ನಿಮಗೆ ಆಡಳಿತ ನಡೆಸುವುದಕ್ಕೆ ಯಾವ ಒಂದು ಅನುಭವವೂ ಇರಲಿಲ್ಲವೆಂದು ಹೇಳಬಹುದು. ಆ ಒಂದು ಕೆಟ್ಟ ಪರಿಸ್ಥಿತಿಯಲ್ಲಿ ನಿಮ್ಮ ಕೈಗೆ ದೇಶದ ಆಡಳಿತ ಕೊಟ್ಟಿದ್ದರಿಂದ ಇವತ್ತಿನ ದಿವಸ ಜನರನ್ನು ಈ ಮಟ್ಟಕ್ಕೆ ತಂದು ಇಟ್ಟಿದ್ದೀರಿ. ನಿಮ್ಮ ಆಡಳಿತದಿಂದ ಸುಖ ಸಿಗಬಹುದೆಂದು ಜನರು ಕಳೆದ 20 ವರ್ಷಗಳಿಂದಲೂ ಕಾದಿದ್ದಾರೆ. ಮಂತ್ರಿಗಳು ಬಂದಿರತಕ್ಕ ಕ್ಷೇತ್ರಗಳಲ್ಲೂ ಸಹ ಅನೇಕರು ಬಡವರಿದ್ದಾರೆ. ಹರಿಜನರು ಇದ್ದಾರೆ, ಲಂಬಾಣಿಗಳು ಇದ್ದಾರೆ, ನಿಮ್ಮವರ್ಗದ ಬೇರೆ ಜನರು ಇದ್ದಾರೆ. ಬಡತನ ಎಂದರೆ ಎಲ್ಲರಿಗೂ ಒಂದೇ. ಕೊನೆಯ ಪಕ್ಷ ಸರ್ಕಾರದ ವಶದಲ್ಲಿರತಕ್ಕ ಜಮೀನುಗಳನ್ನು ವ್ಯವಸಾಯ ಮಾಡತಕ್ಕ ಜನರು ಇರುವಾಗ ಅವರಿಗೆ ಹಂಚಿಕೆ ಮಾಡುತ್ತಾ ಇಲ್ಲ. ತಾಲ್ಲೂಕು ಆಫೀಸಿನಲ್ಲಿ ಅರ್ಜಿ ಹಾಕಿ, ಅದನ್ನು ನೋಡುವುದಕ್ಕೆ ಅಲ್ಲಿ ಲಂಚ ಕೊಡಬೇಕಾಗುತ್ತದೆ. ಕಾಂಗ್ರೆಸ್ಸಿನವರು ಮುಂದಿನ ಚುನಾವಣೆಯಲ್ಲಿ ಹೋದ ಮೇಲೆ ಕೂಡ,

ನೀವು ಮಾಡಿರತಕ್ಕ ಕೆಟ್ಟ ಆಡಳಿತದ ಪರಿಣಾಮ ನಮಗೂ ತಾಗುತ್ತದೆ ಎಂಬ ಒಂದು ಅಭಿಪ್ರಾಯ ನನಗಾಗಲೇ ಬೇರೂರಿ ಹೋಗಿದೆ. ಸಾಮಾನ್ಯ ಜನರ ಯಾವುದೇ ವಿಚಾರವನ್ನು ಕೂಡ ನೀವು ತುಚ್ಛೀಕಾರ ಮಾಡಿ ಅವನ ಹೆಸರಿನಲ್ಲಿ ಲಂಚ ತಿನ್ನುವುದರ ಮೂಲಕ, ಮತ್ತು ದರ್ಬಾರು ಮಾಡುವುದರ ಮೂಲಕ ಆಡಳಿತವನ್ನು ಹಾಳು ಮಾಡುತ್ತಿದ್ದೀರಿ. ಇವತ್ತು ಅಧಿಕಾರಿಗಳ ಕಾರುಗಳನ್ನು ನೋಡಿ. ಅದರಲ್ಲಿರತಕ್ಕ ಎಲ್ಲಾ ಸಾಮಗ್ರಿಗಳು, ಪೆನ್ನು- ಪೇಪರು ಎಲ್ಲವೂ ನಮ್ಮದು. ಅದೇ ರೀತಿ ಅವನಿಗೆ ಕೊಡತಕ್ಕ ಸಂಬಳ ನೋಡಿ. ದೊಡ್ಡ ದೊಡ್ಡ ಅಧಿಕಾರಿಯು ಸಣ್ಣ ಮಟ್ಟದಲ್ಲಿ ಲಂಚ ನಡೆಯದ ಹಾಗೆ ನೋಡಿಕೊಂಡು ಇರಬೇಕು. ಆದರೆ ಇವತ್ತು ನಡೆಯುವುದಾದರೂ ಏನು ? ಆದ್ದರಿಂದ ದೊಡ್ಡ ದೊಡ್ಡ ಅಧಿಕಾರಿಗಳ ಬಗ್ಗೆ ನಮ್ಮ ಇಡೀ ಸದನವೇ ಗಮನ ಕೊಡದಿದ್ದರೆ, ಸಾಮಾನ್ಯ ಮನುಷ್ಯನನ್ನು ಕೇಳತಕ್ಕವರು ಯಾರೂ ಇರುವುದಿಲ್ಲ. ಸಾಮಾನ್ಯ ಜನರ ಹೆಸರಿನಲ್ಲಿ, ಗಾಂಧಿಯ ಹೆಸರಿನಲ್ಲಿ, ದೇಶದ ಹೆಸರಿನಲ್ಲಿ ಇಂಥ ಅನ್ಯಾಯಗಳನ್ನು ಮಾಡಿದರೆ, ಅದು ದೇಶವನ್ನೇ ನೀರು ಕುಡಿಸಿದ ಹಾಗೆ ಆಗುತ್ತದೆ. ಈ ದೆಸೆಯಲ್ಲಿ ಸರ್ಕಾರ ಎಚ್ಚೆತ್ತುಕೊಳ್ಳಲಿ, ಒಂದು ಕ್ರಾಂತಿಯಾಗತಕ್ಕ ಕಾಲ ಬರುತ್ತದೆ ಎಂದು ತಿಳಿದುಕೊಳ್ಳಲಿ ಮತ್ತು ಈ ರೀತಿ ಆಗುವುದನು ತಪ್ಪಿಸಬೇಕು, ಇದರಿಂದ ದೇಶ ಕಲ್ಯಾಣವಾದೀತು ಎಂದು ಸರ್ಕಾರ ತಿಳಿಯಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಶ್ರೀನಿವಾಸ ನಾಯಕ್ (ಮಂಗಳೂರು-1).—ಮಾನ್ಯ ಸಭಾಪತಿಯವರೇ, ನನ್ನ ಮಿತ್ರರಾದ ಮಾನ್ಯ ಶ್ರೀ ಬಂಗಾರಪ್ಪನವರು ಮಾತನಾಡಿದ ಶೈಲಿ, ಅವರು ಹೇಳುವ ವಾದ ಸರಣಿಯನ್ನು ನಾನು ಕಿವಿಗೊಟ್ಟು ಕೇಳಿದೆ. ಮಂತ್ರಿಮಂಡಲದ ಮಂತ್ರಿಯವರು ಯಾವ ರೀತಿಯ ಜೀವನ ನಡೆಸುತ್ತಿದ್ದಾರೆ, ಅದು ಹೇಗೆ ಸರಳವಾಗಿದೆ ಎಂಬುದನ್ನು ಅವರು ನೋಡದೆ, ಅದರ ಅರಿವು ಇಲ್ಲದೆ, ಮಾತನಾಡಿದ್ದಾರೆ ಎಂದು ಹೇಳಬೇಕಾಗಿದೆ. ಮಂತ್ರಿಗಳ ಮನೆಗೆ ಬಹುಶಃ ಅವರು ಹೋಗಿ ನೋಡಿದ್ದರೆ ಅವರಿಗೆ ತಿಳಿಯುತ್ತಿತ್ತು. ಅವರ ಕಾರು; ಅವರ ಇತರ ಸೌಕರ್ಯ ಅದು ಮಂತ್ರಿಯ ಒಂದು ಸ್ಥಾನಕ್ಕೆ ಇದೆಯಲ್ಲದೆ, ಅದು ಅವರಿಗಾಗಿ ಖಂಡಿತವಾಗಿ ಇಲ್ಲ. ನಾವು ಸ್ವಾತಂತ್ರ್ಯ ಪಡೆದನಂತರವೂ, ಅದಕ್ಕೆ ಮುಂಚಿನಿಂದಲೂ ನಡೆದು ಬಂದ ರೀತಿಯಾಗಿದೆ. ಆದ್ದರಿಂದ ಮಾನ್ಯ ಮಂತ್ರಿಯವರು ಯಾವ ರೀತಿ ಹಿಂದೆ ಇದ್ದರು ಅದೇ ರೀತಿಯಲ್ಲಿರಬೇಕಾಗುತ್ತದೆ. ಗಾಂಧೀಜೀಯವರು ಸರಳವಾದ ಜೀವನವನ್ನು ನಡೆಸಬೇಕೆಂದು ಹೇಳಿದ್ದಾರಲ್ಲದೆ, ಇದನ್ನೆಲ್ಲಾ ಹೇಳಲಿಲ್ಲ. ಇದರ ಅರಿವನ್ನು ಸ್ವಲ್ಪ ಮಟ್ಟಿಗೆ ಅವರು ತಿಳಿದಿದ್ದರೆ, ಇಂಥ ವಾದಸರಣಿಯಾಗುತ್ತಿರಲಿಲ್ಲ. ಅದೂ ಕೂಡ ಇದಕ್ಕೆ ಸಂಬಂಧಪಟ್ಟಿದ್ದಲ್ಲವೆಂದು ಹೇಳಬೇಕಾಗಿದೆ.

ಇನ್ನು ಜನರಲ್ ಆಡ್ಮಿನಿಸ್ಟ್ರೇಶನ್ ಮತ್ತು ನ್ಯಾಯಾಂಗದ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಇವತ್ತು ಮಂಗಳೂರಿನಲ್ಲಿರುವ ಕೋರ್ಟು ಕಟ್ಟಡವು ಬೆಂಗಳೂರಿನಲ್ಲಿರುವ ಹೈ ಕೋರ್ಟಿಗಿಂತ ಚೆನ್ನಾಗಿದೆ. ಅಲ್ಲಿ ವ್ಯಾಜ್ಯಕ್ಕೋಸ್ಕರ ಯೋಗ್ಯವಾದ ಸ್ಥಳದ ಏರ್ಪಾಟು ಇದೆ. ಆದರೆ ಬೆಂಗಳೂರಿನಲ್ಲಿ ಯಾವ ರೀತಿಯ ಅಂಥ ಸೌಕರ್ಯವೂ ಇಲ್ಲವೆಂದು ಕೇಳಿಬರುತ್ತದೆ. ಮಾನ್ಯ ಮಂತ್ರಿಯವರು ವಿದ್ಯಾ ಇಲಾಖೆಯಲ್ಲಿರುವಾಗ ಹಳೆಯ ಶಾಲೆಗಳನ್ನು ಹೊಸ ಶಾಲೆಗಳಾಗಿ ಮಾಡಬೇಕೆಂದು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಈಗ ಅವರು ನ್ಯಾಯ ಖಾತೆಯಲ್ಲಿದ್ದಾರೆ. ಆದ್ದರಿಂದ ಕೋರ್ಟುಗಳಿಗೆ ಬೇಕಾದ ಸ್ವಂತ ಕಟ್ಟಡಗಳನ್ನು ಆದಷ್ಟು ತೀವ್ರವಾಗಿ ಮಾಡುವಂತೆ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತು ಸೇಲ್ಸ್ ಟ್ಯಾಕ್ಸ್ ಮಂತ್ರಿಗಳು ಇಲ್ಲಿದ್ದಾರೆ. ಸೇಲ್ಸ್ ಟ್ಯಾಕ್ಸ್ ಅಪೆಲೇಟ್ ಅಂದರೆ ಡೆಪ್ಯೂಟಿ ಕಮಿಶನರ್ ಕೋರ್ಟ್‌ನಲ್ಲಿ ಯಾರು ದೊಡ್ಡ ಮೊತ್ತದ ಸೇಲ್ಸ್ ಟ್ಯಾಕ್ಸ್ ಕೊಡುತ್ತಿದ್ದಾರೋ, ಅವರು ಅಪೀಲ್ ಮಾಡುವ ಕಾಲಕ್ಕೆ ಅವರಿಗೆ ಒಂದು ಕುಳಿತುಕೊಳ್ಳುವ ವ್ಯವಸ್ಥೆ ಇಲ್ಲ. ಅವರು ನಿಂತುಕೊಂಡೇ, ಅವರ ವಾದ ಏನು ಇದೆ, ಅದನ್ನು ಆಫೀಸರ ಮುಂದೆ ಹತ್ತು ಹದಿನೈದು ಇಪ್ಪತ್ತು ಸಾವಿರ ರೂಪಾಯಿ ಸೇಲ್ಸ್ ಟ್ಯಾಕ್ಸ್ ಕೊಡುವವರು, ನಿಂತುಕೊಂಡೇ ವಾದ ಮಾಡಬೇಕಾಗುತ್ತದೆ. ಬಹುಶಃ ಸರ್ಕಾರ ಅವರಿಗೆ ಬೇಕಾದಂತಹ ಉಪಕರಣ ಒದಗಿಸಿಕೊಟ್ಟಿಲ್ಲವೆಂದು ಕಾಣುತ್ತದೆ. ಅದನ್ನು ಸರ್ಕಾರದವರು ಗಮನಿಸಿ, ಯಾರು ಅವರ ಆಫೀಸಿಗೆ ಈ ಕೆಲಸಕ್ಕೋಸ್ಕರ ಹೋಗುತ್ತಾರೋ, ಅಂಥವರಿಗೆ ಅವರು ಕಾದು ಕುಳಿತುಕೊಳ್ಳುವಾಗ ಒಂದು ಯೋಗ್ಯ ಕೂತುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವಿದ್ಯಾಭ್ಯಾಸ ಇಲಾಖೆಯಲ್ಲಿ ಯಾವ ಒಂದು ಏಡೆಡ್ ಸ್ಕೂಲು ಇವೆ, ಅಲ್ಲಿ ಉಪಾಧ್ಯಾಯರಿಗೆ ನಿವೃತ್ತಿ ವಯಸ್ಸು 60 ಇದೆ. ಅದೇ ಉಪಾಧ್ಯಾಯರುಗಳಿಗೆ ಮುನಿಸಿಪಾಲಿಟಿ ಸ್ಕೂಲುಗಳಲ್ಲಿ 58 ಇದೆ. ಇದಕ್ಕೆ ಕೂಡ ಇವತ್ತು ಒತ್ತಾಯ ಬರುತ್ತದೆ. ಆದ್ದರಿಂದ ಮುಂದಿನ ಪೀಳಿಗೆಯು ಸತ್ಪ್ರಜೆಗಳಾಗಿ ಆಗಬೇಕಾದರೆ ಉಪಾಧ್ಯಾಯರುಗಳು ಒಳ್ಳೆಯ ಶ್ರಮದಿಂದ ಕೆಲಸಮಾಡಬೇಕು. ಅವರ ಮನಸ್ಸಿನಲ್ಲಿರುವಾತ

(ಶ್ರೀ ಎಂ. ಶ್ರೀನಿವಾಸ ನಾಯಕ್)

ದುಃಖಕರವಾದ ವಿಚಾರಗಳನ್ನು ದೂರ ಮಾಡಿ ಅವರಿಗೂ ಇನ್ನಿತರರ ಹಾಗೆ ಅನುಕೂಲವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಗೌರ್ನಮೆಂಟ್ ಕಾಲೇಜುಗಳಲ್ಲಿ ನಿವೃತ್ತಿ ವಯಸ್ಸು 60 ವರ್ಷ ಇದೆ. ಪ್ರೈವೇಟ್ ಕಾಲೇಜುಗಳಲ್ಲಿ 58 ಇದೆ. ಈ ಏಡೆಡ್ ಕಾಲೇಜಿನವರು ಅವರಿಗೆ ಯುಕ್ತ ಕಂಡಂತೆ ಮುಂದುವರಿಸಿಕೊಂಡು ಹೋಗಬಹುದು. ಇದು ತುಂಬಾ ರೀತಿಯಲ್ಲಿ ಕನಿಕರವನ್ನುಂಟುಮಾಡುವಂಥದ್ದು. ಅದನ್ನು ಕೂಡ ಸರ್ಕಾರದವರು ಗಮನಿಸಿ ಯಾವ ತಾರ ತಮ್ಯವಿಲ್ಲದ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಮುನಿಸಿಪಾಲಿಟಿ ಕಮಿಷ ನರನ್ನು ರೆವೆನ್ಯೂ ಇಲಾಖೆಯಿಂದ ಕಳಿಸುತ್ತಾರೆ. ಹೆಲ್ತ್ ಆಫೀಸರನ್ನು ಹೆಲ್ತ್ ಇಲಾಖೆಯಿಂದ ಕಳಿಸುತ್ತಾರೆ. ಅದೇ ರೀತಿ ಇತರ ಸಿಬ್ಬಂದಿಗಳನ್ನು ಬೇರೆ ಬೇರೆ ಇಲಾಖೆಗಳಿಂದ ಕಳಿಸಿಕೊಡು ತ್ತಾರೆ. ಆದಕ್ಕೆ ಮುನಿಸಿಪಲ್ ಕೇಡರ್ ಬಗ್ಗೆ ಯಾವ ರೀತಿಯೂ ಸರ್ಕಾರ ಗಮನಕ್ಕೆ ತೆಗೆದು ಕೊಂಡಿಲ್ಲವೆಂದು ಕಾಣುತ್ತದೆ. ಅದಕ್ಕೆ ಒಂದು ಮುನಿಸಿಪಲ್ ಕೇಡರ್ ಎಂದು ಮಾಡಿದರೆ ಬಹಳ ಒಳ್ಳೆಯದು ಎಂದು ಕಾಣುತ್ತದೆ. ಇದರಿಂದ ಅಲ್ಲಿಯ ಆಡಳಿತ ಯಾವ ರೀತಿ ಇರಬೇಕು, ಯಾವ ರೀತಿಯಲ್ಲಿ ಜನತೆಯ ಕೇಳಿಕೆಗಳನ್ನು ಪೂರೈಸಬೇಕೆಂಬುದರ ಬಗ್ಗೆ ಒಂದು ಪರಿಪಾಠವನ್ನು ಹೇಳಿ ಕೊಟ್ಟು ಮಾಡಬೇಕು. ಅದಕ್ಕೆ ಈ ಒಂದು ಮುನಿಸಿಪಲ್ ಕೇಡರ್ ಮಾಡುವುದು ಅಗತ್ಯ ಮತ್ತು ಅದನ್ನು ಸರ್ಕಾರದವರು ಆದಷ್ಟು ತೀವ್ರವಾಗಿ ಕಾರ್ಯರೂಪಕ್ಕೆ ತರಬೇಕೆಂದು ಒತ್ತಾಯ ಮಾಡುತ್ತೇನೆ.

ಕೆಲವು ಡಿಪಾರ್ಟುಮೆಂಟುಗಳಲ್ಲಿ ಹೆಚ್ಚು ಜನ ಇದ್ದಾರೆ ಮತ್ತು ಕೆಲವು ಡಿಪಾರ್ಟುಮೆಂಟು ಗಳಲ್ಲಿ ಬೇಕಾದಷ್ಟು ಜನ ಇಲ್ಲ ಎಂದು ನಾವು ಕೇಳುತ್ತೇವೆ. ಇದರ ಬಗ್ಗೆ ಸರಕಾರ ಸರಿಯಾದ ಒಂದು ನೀತಿ ಅನುಸರಿಸಿಕೊಂಡು ಎಲ್ಲಿ ಜಾಸ್ತಿಯಾಗಿ ಸಿಬ್ಬಂದಿ ಬೇಕೋ ಅಲ್ಲಿಗೆ ಸಿಬ್ಬಂದಿಯನ್ನು ಕಳುಹಿಸಿ ಕೊಟ್ಟು ಅಲ್ಲಿನ ಕೆಲಸಗಳು ಆದಷ್ಟು ಬೇಗ ಆಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಮಂಗಳೂರಿನಲ್ಲಿರುವ ನಗರಂದ ಹೈಸ್ಕೂಲಿಗೆ ಸರಕಾರದವರು ಹೋದ ವರ್ಷ ಕೊಡ ಬೇಕಾದ ಗ್ರಾಂಟನ್ನು ಇದುವರೆಗೂ ಕೊಟ್ಟಿಲ್ಲ. ಇದನ್ನು ಸರಕಾರ ಕೊಡಿಸಿಕೊಡಬೇಕು ಮತ್ತು ಇಲ್ಲಿ ಸುಮಾರು 140 ಕ್ಕಿಂತಲೂ ಹೆಚ್ಚು ಸಿಬ್ಬಂದಿ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಸರಕಾರ ಎಲ್ಲಿ ಸ್ಟಾಫ್ ಕೊಟ್ಟಿಲ್ಲ ಅಲ್ಲಿಗೆ ಒದಗಿಸಿಕೊಡಲು ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳ ಬೇಕೆಂದು ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಸರಕಾರದ ಅಧಿಕಾರಿಗಳನ್ನು 55 ವರ್ಷ ವಯಸ್ಸಾದ ಮೇಲೆ ನಿವೃತ್ತಿ ಮಾಡುವ ಪದ್ಧತಿ ಇದ್ದರೂ ಕೆಲವು ಕಡೆ ಸರಕಾರದವರು ಒಂದೊಂದು ವರ್ಷ ಎಕ್ಸ್‌ಟೆನ್‌ಷನ್ ಇಲ್ಲವೇ ರೀ ಎಂಪ್ಲಾಯ್‌ಮೆಂಟು ಮಾಡುವುದು ಹೀಗೆ ಮಾಡುತ್ತಿದ್ದಾರೆ. ಕೆಲವು ಕಡೆ ಅಧಿಕಾರಿಗಳು 54ನೇ ವಯಸ್ಸು ಇರುವಾಗಲೇ ಎಕ್ಸ್‌ಟೆನ್‌ಷನ್ ಪಡೆಯಲು ನಾಲ್ಕಾರು ಅರ್ಜಿಗಳನ್ನು ಸರಕಾರಕ್ಕೆ ಹಾಕಿ ಅದನ್ನು ಒತಾಯ ತರುವ ಕೆಲಸಗಳನ್ನು ಮಾಡುತ್ತಿರುವುದರಿಂದ ಸರಕಾರದ ಕೆಲಸಗಳು ಸರಿ ಯಾಗಿ ಆಗುತ್ತಿಲ್ಲ. ಇದರಲ್ಲಿ ಎಕ್ಸ್‌ಟೆನ್‌ಷನ್ ಒಬ್ಬರಿಗೆ ಕೊಡುವುದು ಒಬ್ಬರಿಗೆ ಬಿಡುವುದು ಇದನ್ನು ಮಾಡುವುದರಿಂದ ಒಂದು ರೀತಿಯಾದ ದ್ವೇಷಾಸೂಯೆಗಳಿಗೆ ಇದು ಕಾರಣವಾಗುತ್ತದೆ. ಇದರ ಬಗ್ಗೆ ನಿವೃತ್ತಿ ವಯಸ್ಸು 55 ಎನ್ನುವುದನ್ನು ಕಟ್ಟುನಿಟ್ಟಾಗಿ ಅನುಸರಿಸುವುದರ ಅಗತ್ಯ ಇದೆ ಎಂದು ಇಲ್ಲಿ ಸೂಚಿಸಬಯಸುತ್ತೇನೆ. ಏಕೆಂದರೆ ಒಬ್ಬರಿಗೆ ಎಕ್ಸ್‌ಟೆನ್‌ಷನ್ ಕೊಟ್ಟು ಇನ್ನೊಬ್ಬರಿಗೆ ಕೊಡದೇ ಹೋದರೆ ಅಂತಹ ಜನರಿಗೆ ಬಹಳ ಕಷ್ಟವಾಗುತ್ತದೆ ಒಂದು ರೀತಿಯಾದ ಅತೃಪ್ತಿಯುಂಟಾಗಲು ಅವಕಾಶವಾಗುತ್ತದೆ. ಇದರ ಬಗ್ಗೆ ಕಟ್ಟುನಿಟ್ಟಾದ ಒಂದು ನೀತಿ ಅನುಸರಿಸಬೇಕು ಎಂದು ಇಲ್ಲಿ ಹೇಳುತ್ತಿದ್ದೇನೆ.

ಇನ್ನು ಆರ್. ಟಿ. ಒ. ಆಫೀಸು ಎಂದು ಮಂಗಳೂರಿನಲ್ಲಿದೆ ಮತ್ತು ಹಾಗೇ ಮೈಸೂರು ದೇಶದ ಇತರ ಕಡೆಗಳಲ್ಲೂ ಇದೆ. ಇದು ಬಹಳ ಹೆಸರುವಾಸಿಯಾದ ಆಫೀಸು. ಇಲ್ಲಿ ನಡೆಯುವ ಕೆಲಸ ಕಾರ್ಯ ಗಳ ಬಗ್ಗೆ ಸರಕಾರ ಆಗಾಗ್ಗೆ ಸಮೀಕ್ಷೆ ನಡೆಸಿ ಅದನ್ನು ಸರಿಪಡಿಸುವುದರ ಅಗತ್ಯ ಹೆಚ್ಚಾಗಿದೆ. ಇಲ್ಲಿನ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ ಎಂದು ಕೇಳುತ್ತಿದ್ದೇವೆ. ಹೆಸರುವಾಸಿಯಾಗಿರುವ ಈ ಆಫೀಸಿನ ಕೆಲಸಗಳ ಬಗ್ಗೆ ಸರಕಾರ ಆಗಾಗ್ಗೆ ನಿಗಾ ವಹಿಸಿ ಸಮೀಕ್ಷೆ ನಡೆಸುವುದರ ಅಗತ್ಯವಿದೆ. ಇಲ್ಲಿ ಕೆಲಸ ಗಳು ಯಾವ ರೀತಿಯಾಗಿ ನಡೆಯುತ್ತಿವೆ ಮತ್ತು ಇಲ್ಲಿನ ಅಧಿಕಾರಿಗಳು ಜನರಿಗೆ ಸರಿಯಾದ ಅನು ಕೂಲಗಳನ್ನು ಮಾಡಿಕೊಡುತ್ತಿದ್ದಾರೆಯೇ ಇಲ್ಲವೇ ಇವನ್ನೆಲ್ಲಾ ನೋಡಿ ಸೂಕ್ತ ರೀತಿಯಾಗಿ ನಡೆಸಿ ಕೊಂಡು ಬರಲು ತೀವ್ರವಾದ ಕಾರ್ಯಕ್ರಮವನ್ನು ಜಾರಿಗೆ ತರಬೇಕು ಮತ್ತು ಜನರ ಮೆಚ್ಚಿಗೆಗೆ ಪಾತ್ರವಾದ ರೀತಿಯಲ್ಲಿ ಇಲ್ಲಿನ ಕೆಲಸಗಳು ಆಗುವಂತೆ ಪ್ರಯತ್ನ ಮಾಡಬೇಕೆಂದು ಇಷ್ಟು

ಮಾತುಗಳನ್ನು ಇಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಮಾನ್ಯ ಅಧ್ಯಕ್ಷರೇ, ಈ ಸಾಮಾನ್ಯ ಆಡಳಿತದ ವಿಚಾರದಲ್ಲಿ ಒಂದೆರಡು ಮುಖ್ಯವಾದ ವಿಷಯಗಳನ್ನು ಈ ಸಭೆಯ ಮುಂದೆ ಇಡಲಿಕ್ಕೆ ನಾನು ಇಲ್ಲಿ ಆಸೆಪಡುತ್ತೇನೆ.

ಇಂದು ಆಡಳಿತವನ್ನು ಯೋಚನೆ ಮಾಡುವಾಗ ಆಡಳಿತ ಹೇಗೆ ಇರಬೇಕು ಎನ್ನುತಕ್ಕದ್ದನ್ನು ನಾವು ಸರ್ವ ಸಾಮಾನ್ಯವಾಗಿರುವ ಮನುಷ್ಯನನ್ನು ಗಮನದಲ್ಲಿಟ್ಟುಕೊಂಡು ಯೋಚನೆ ಮಾಡಬೇಕು. ಈ ದಿವಸ ಆಡಳಿತ ನಮ್ಮ ರಾಜ್ಯದಲ್ಲಿ ಏನಾಗಿದೆ ಎನ್ನತಕ್ಕದ್ದನ್ನು ಯೋಚನೆ ಮಾಡಬೇಕು. ನಮ್ಮಲ್ಲಿ ಇಂದು ಬೇಕಾದಷ್ಟು ಜನ ಅಧಿಕಾರಿಗಳಿದ್ದಾರೆ ಮತ್ತು ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ವಿಧಾನಸೌಧದಂತಹ ಕಟ್ಟಡಗಳನ್ನು ಕಟ್ಟುವುದರ ಜೊತೆಗೆ ಇನ್ನೂ ಅನೇಕ ದೊಡ್ಡ ದೊಡ್ಡ ಬಂಗಲೆಗಳನ್ನು ಹಾಗೂ ಮಲ್ಟಿಸ್ಟೋರೀಡ್ ಬಿಲ್ಡಿಂಗುಗಳನ್ನು ತೆಗೆದುಕೊಂಡಿದ್ದರೂ ಕೂಡ ಇನ್ನೂ ಇವರಿಗೆ ಜಾಗ ಸಾಕಾಗುತ್ತಿಲ್ಲ. ಇವರಿಗೆ ಬೇಕಾದಷ್ಟು ಜಾಗಗಳೂ ಇಲ್ಲ. ಆದರೆ ಇಂದು ಜನಸಾಮಾನ್ಯರಲ್ಲಿ ಏನಾಗಿದೆ ಎಂದರೆ, ಇವರ ವಿಚಾರದಲ್ಲಿ ನಾವು ನೋಡಿದರೆ ಇವೊತ್ತಿನ ದಿವಸ ಆಡಳಿತದಲ್ಲಿ ಈ ಲಂಚರುಷುವತ್ತುಗಳು ಜಾಸ್ತಿಯಾಗಿ ಎಲ್ಲಿ ನೋಡಿದರೂ ಒಂದು ರೀತಿಯಾದ ಅತೃಪ್ತಿ ಕಾಣುತ್ತಿದೆ. ಯಾವ ಸಂಬಳ ಇರುವ ಅಧಿಕಾರಿಯಾಗಲೀ ಸುಮಾರು ನಾಲ್ಕು ಸಾವಿರ ಸಂಬಳ ಬರತಕ್ಕ ಅಧಿಕಾರಿಯಾಗಿದ್ದರೂ ಕೂಡ ಅವರನ್ನು ಕೇಳಿದರೆ ತೃಪ್ತಿ ಇಲ್ಲ ಎನ್ನುವುದು ಕೇಳಿಬರುತ್ತಿದೆ. ಹೀಗೆ ಎಲ್ಲೆಲ್ಲಿ ನೋಡಿದರೂ ಅತೃಪ್ತಿ ದೇಶದಲ್ಲಿ ತಾಂಡವ ವಾಡುತ್ತಿದೆ ಇವನ್ನು ಎಲ್ಲೆಲ್ಲೂ ನೋಡುತ್ತಿದ್ದೇವೆ. ಇದಕ್ಕೆ ಮೂಲ ಕಾರಣವೇನು ಎನ್ನುವುದನ್ನು ಸರಕಾರದವರು ಯೋಚನೆ ಮಾಡಬೇಕು. ನಾನಾದರೂ ಇವೊತ್ತು ಸರಕಾರದವರಲ್ಲಿ ಕೇಳಿಕೊಳ್ಳುವುದು, ಈ ದಿವಸ ಇಂತಹ ಒಂದು ಅನಿಶ್ಚಿತ ವಾತಾವರಣ ಏಕೆ ಬಂದಿದೆ? ಇದರ ಪರಿಣಾಮವೇನಾಗುತ್ತದೆ ಎನ್ನುವುದನ್ನು ನಾವು ನೋಡಬೇಕು. ಯಾವ ದೇಶದಲ್ಲಿ ಲಂಚ, ಸ್ವಜನಪಕ್ಷಪಾತ ಮುಂತಾದ ಕೆಟ್ಟ ಕೆಟ್ಟ ದುಷ್ಕಾರ್ಯಗಳು ನಡೆಯುತ್ತಲಿವೆಯೋ ಅಂತಹ ದೇಶಗಳಲ್ಲಿ ಕ್ರಾಂತಿಗಳು ಆಗುತ್ತಿವೆ ಎನ್ನುವುದನ್ನು ಯಾರೂ ಮರೆಯಬಾರದು., ಇವೊತ್ತು ಫ್ರಾನ್ಸ್ ದೇಶವನ್ನು ತೆಗೆದುಕೊಳ್ಳಿ. ಅಲ್ಲಿ ರೆವಲ್ಯೂಷನ್ ಆಗುವುದಕ್ಕೆ ಮುಖ್ಯ ಕಾರಣ ಅಲ್ಲಿ ಲಂಚ ಎನ್ನುವುದು ಒಂದು ತುಟ್ಟ ತುದಿಯ ಮೇಲೆ ಹೆಚ್ಚುತ್ತಾ ಹೋಗಿ ಸ್ವಜನಪಕ್ಷಪಾತ ಹೆಚ್ಚಾಗುತ್ತಾ ಬಂದು ಅಲ್ಲಿ ಕೂಡ ಒಂದು ರೀತಿಯಾಗಿ ಕ್ರಾಂತಿಯಾಯಿತು. ಇದೇ ರೀತಿ ರಷ್ಯಾ ದೇಶದಲ್ಲಿ ಕೂಡ ರೆವಲ್ಯೂಷನ್ ಆಯಿತು. ಅಲ್ಲೂ ಕೂಡ ಲಂಚ ಹಾಗೂ ಸ್ವಜನಪಕ್ಷಪಾತ ಜಾಸ್ತಿಯಾಗಿ ಜಾರಿಸ್ಟ್ ಆಡಳಿತದಲ್ಲಿ ಅಲ್ಲಿ ಕ್ರಾಂತಿಯಾಯಿತು. ಅದೇ ರೀತಿ ಚೀನಾ ದೇಶದಲ್ಲಿ ಕೂಡ ಚಿಯಾಂಗ್ ಕೈಷೇಕರ ರಾಜ್ಯಭಾರ ಯಾವ ರೀತಿಯಾಗಿ ಆಯಿತು ಎನ್ನುವುದು ಚರಿತ್ರೆಗಳ ಮೂಲದಿಂದ ನಾವು ತಿಳಿಯಬಹುದು. ಹಾಗೆ ಇಂದು ಪಾಕಿಸ್ತಾನದಲ್ಲಿ ನೋಡುವಾಗ ಅಲ್ಲಿ ಡಿಕ್ಟೇಟರ್‌ಷಿಪ್ ಯಾವ ರೀತಿ ಬಂತು ಎನ್ನುವುದನ್ನು ನಾವು ಚೆನ್ನಾಗಿ ತಿಳಿದುಕೊಳ್ಳಬಹುದು. ಆದದುರಿಂದ ಮಾನ್ಯ ಸರಕಾರದಲ್ಲಿ ನಾನು ಕೇಳಿಕೊಳ್ಳುವುದು, ಪ್ರಜಾಪ್ರಭುತ್ವ ನಮ್ಮ ದೇಶದಲ್ಲಿ ಇರಬೇಕು ಮತ್ತು ಆ ತತ್ವಕ್ಕೆ ಮನ್ನಣೆಯನ್ನು ಕೊಡಬೇಕು ಎಂದು ಹೇಳುವುದಾದರೆ, ಅಂತಹ ಗಂಡಸುತನದ ಸರಕಾರ ನಮ್ಮಲ್ಲಿ ಸ್ಥಾಪನೆಮಾಡಬೇಕು.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಸ್ವಾಮೀ, ನನ್ನದೊಂದು ಪಾಯಿಂಟ್ ಆಫ್ ಆರ್ಡರು ಇದೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಇಲ್ಲಿ ಮಾತಾಡುವಾಗ ಗಂಡಸುತನದ ಸರಕಾರ ಎಂದು ಹೇಳಿದರು. ಇದರ ಅರ್ಥವೇನು? ಗಂಡಸರಷ್ಟೇ ಪ್ರಧಾನವಾಗಿ ಇಂದು ಹೆಂಗಸರೂ ಇದ್ದಾರೆ. ಇಂದು ನಮ್ಮ ದೇಶದಲ್ಲಿ ಹೆಂಗಸರೇ ಕೇಂದ್ರದಲ್ಲಿ ಪ್ರಧಾನ ಮಂತ್ರಿಗಳಾಗಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ಸ್ವಾಮೀ, ಇದರ ಅರ್ಥ ಇಷ್ಟೇ. ಮಾನ್ಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರಲ್ಲಿ ವಿನಯಪೂರ್ವಕವಾಗಿ ಹೇಳುತ್ತಿರುವುದು ಇದರ ಅರ್ಥ ಇಷ್ಟೇ. ಬಲಿಷ್ಠವಾದ ಸರಕಾರ ಇಲ್ಲಿ ಸ್ಥಾಪನೆ ಮಾಡಬೇಕು ಎಂದು. ಇದರಲ್ಲಿ ಬೇರಾವ ಅರ್ಥವೂ ಇಲ್ಲ. ಏಕೆಂದರೆ ಇಂಡಿಯನ್ ಪೀನಲ್ ಕೋಡಿನಲ್ಲಿ ಕೂಡ......

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಹಾಗೆ ಇಲ್ಲಿ ಗಂಡಸುತನ ಎಂದು ಹೇಳುತ್ತಿರುವುದರಿಂದ ಅದು ಆಕ್ಷೇಪಾರ್ಹವಾಗುತ್ತದೆ. ಇಲ್ಲಿ ಬಹಳ ಜನ ಹೆಣ್ಣುಮಕ್ಕಳು ಇದ್ದಾರೆ ಆದ್ದರಿಂದ ಇದರ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಇದರಲ್ಲಿ ಯಾವ ಬೇರೆ ಅರ್ಥವೂ ಇಲ್ಲ. ನಾವೂ ಹಳ್ಳಿಗಾಡಿನಿಂದ ಬಂದಿರುವ ಜನರಾದುದರಿಂದ ನನಗೆ ಗೊತ್ತಿರುವ ಹಾಗೆ ಹಳ್ಳಿಗಾಡಿನ ಜನರು ಯಾವ ರೀತಿಯಾಗಿ ಹೇಳುತ್ತಾರೆ ಅದನ್ನು ಇಲ್ಲಿ ಹೇಳುತ್ತಿದ್ದೆ. ಇದರಲ್ಲಿ ಬೇರಾವ ಅಪಾರ್ಥವನ್ನೂ ಕಲ್ಪನೆ ಮಾಡಿ ಮಾತಾಡುತ್ತಿಲ್ಲ. ಇದರಲ್ಲಿ ಬೇರೆ ಯಾವ ಅರ್ಥವೂ ಇಲ್ಲ ಎಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಇಂಡಿಯನ್ ಪೀನಲ್ ಕೋಡಿನಲ್ಲಿ 'ಮ್ಯಾನ್ ಇನ್‌ಕ್ಲೂಡ್ಸ್ ವಿಮೆನ್' ಎಂದು ಇದರ ಡೆಫನಿಷನ್ನಿನಲ್ಲಿ ಸ್ಪಷ್ಟವಾಗಿ ಹೇಳಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಸ್ವಾಮೀ ಹಾಗಲ್ಲ. ವಿಮೆನ್ ಇನ್‌ಕ್ಲೂಡ್ಸ್ ಮೆನ್ ಎಂದು ಇದೆ. ಹೆಂಗಸರಿಲ್ಲದೆ ಗಂಡಸರು ಬರುವುದಿಲ್ಲ. (ನಗು)

ಶ್ರೀ ಎಚ್. ಸಿದ್ಧವೀರಪ್ಪ.—I stand corrected. ನಾನು ಇಲ್ಲಿ ಹೇಳುವುದರ ಉದ್ದೇಶ ಏನು ಎಂದರೆ, ನಮ್ಮ ದೇಶದಲ್ಲಿರುವ ಸರಕಾರ ಎಷ್ಟು ಜೋರಾಗಿ ಇರಬೇಕು ಎಂದರೆ, ಮೆಣಸಿನಕಾಯಿ ಎಷ್ಟು ಖಾರವಾಗಿರುತ್ತದೋ ಅದೇ ರೀತಿಯಲ್ಲಿ ಇಲ್ಲಿ ಅಂತಹ ಸರಕಾರ ಇರಬೇಕು ಎಂದು ಹೇಳುತ್ತಿದ್ದೇನೆ. ಇವೊತ್ತು ಯಾರ ಬಾಯಲ್ಲಿ ಕೇಳಲಿ ನೀವು ಓಡಾಡುವಾಗ ನಿಮಗೇ ಗೊತ್ತಾಗುತ್ತದೆ. ಒಂದು ಬಸ್ಸಿನಲ್ಲಿ ಓಡಾಡುತ್ತಿರುವಾಗ ಹಾಗೂ ರೈಲುಗಳಲ್ಲಿ ಓಡಾಡುತ್ತಿರುವಾಗ ಹಾಗೂ ಬೇರೆ ಕಡೆಗಳಲ್ಲಿ ಓಡಾಡುತ್ತಿರುವಾಗ ಜನಸಾಮಾನ್ಯರು ಸರಕಾರದ ಬಗ್ಗೆ ಏನು ಹೇಳುತ್ತಿದ್ದಾರೆ ಎಂದರೆ, ಇಂದಿನ ಸರಕಾರ ಬರೀ ಸಪ್ಪೆಯಾಗಿದೆ. ಹೊಟೇಲುಗಳಲ್ಲಿ ಜನ ಹೇಳುತ್ತಿರುವುದನ್ನು ಕೇಳಬಹುದು ಇಂದು ಸರಕಾರದಲ್ಲಿ ಬಿಗಿ ತಪ್ಪಿದೆ ಆಡಳಿತ ಸಪ್ಪೆಯಾಗಿದೆ ಎನ್ನುವುದನ್ನು ಜನ ಹೇಳುತ್ತಿರುವುದರಿಂದ ಸರಕಾರದಲ್ಲಿ ಬಿಗಿ ಇಲ್ಲ ಎನ್ನುವುದು ತಿಳಿದು ಬರುತ್ತದೆ. ನಿಷ್ಪಕ್ಷಪಾತವಾಗಿ ಸರ್ವರನ್ನೂ ಸಮಾನತೆಯಿಂದ ನೋಡಿಕೊಂಡು ರಾಜ್ಯಭಾರ ಮಾಡಿದ್ದರೆ ಇವತ್ತಿನ ದಿವಸ ಇಂಥ ಕೆಟ್ಟ ಕಾಲ ಬರುತ್ತಿರಲಿಲ್ಲ. ಆಡಳಿತ ಮಾಡತಕ್ಕಂಥ ಅಧಿಕಾರಿಗಳು ಅವರೇನೂ ದಡ್ಡರಲ್ಲ. ಅವರು ಬುದ್ಧಿವಂತರಾಗಿದ್ದಾರೆ.

ಶ್ರೀ ಅಲ್ಲಂ ಕರಿಬಸಪ್ಪ (ಕುರಗೋಡು).—ಪಕ್ಷಪಾತತನದ ಬಗ್ಗೆ ಇವರು ಮಂತ್ರಿಗಳಾಗಿದ್ದಾಗ ಹೇಗೆ ಆಳಿದರು ಎನ್ನುವುದು ಎಲ್ಲರಿಗೂ ಗೊತ್ತು.

4-00 P. M.

ಶ್ರೀ ಎಚ್. ಸಿದ್ಧವೀರಪ್ಪ.—ನಮ್ಮ ಮಂತ್ರಿಮಂಡಲದಲ್ಲಿ ಸುಖ ಅನುಭವಿಸಿದ ನೀವು ಇದನ್ನು ಹೇಳಬೇಕು. ಆಡಳಿತವನ್ನು ಹೇಗೆ ನಿಷ್ಪಕ್ಷಪಾತದಿಂದ ಮಾಡಿದ್ದೇವೆಯೋ ಇಲ್ಲವೇ ಎನ್ನುವುದನ್ನು ಹೇಳುವುದಕ್ಕೆ ನೀವೇ ಸಾಕ್ಷಿ ಸಾಕು. ಇವತ್ತಿನ ದಿವಸ ಏನಾಗಿದೆ ಅಂದರೆ, ಅದಕ್ಕೆ ಡಿಸ್ಟ್ರಿಕ್ಟ್ ಆಡಳಿತದ ಒಂದು ಉದಾಹರಣೆ ಕೊಡುತ್ತೇನೆ. ದಾವಣಗೆರೆಗೆ ಒಬ್ಬ ಅಮಲ್ದಾರರು ಅಂದರೆ ತಹಶೀಲದಾರರು ಷೆಡ್ಯೂಲ್ ಕ್ಯಾಸ್ಟ್ ಮನುಷ್ಯ ಆತ ಬಂದನು. ಅವರು ಚಾರ್ಜ್ ತೆಗೆದುಕೊಂಡು ಒಂದು ಒಂದೂವರೆ ತಿಂಗಳಾಗಿತ್ತು. ಶ್ರೀಮಾನ್ ಜತ್ತಿಯವರು ಇದ್ದಾರಲ್ಲಾ ಅವರು ಫುಡ್ ಲೆವಿ ವಸೂಲ್ಮಾಡಿ ಅನೇಕ ಪಾಪ ಮಾಡುತ್ತಿದ್ದಾರೆ. ಫುಡ್ ಲೆವಿ ಕೊಡದೆ ಒಬ್ಬ ಕಾಂಗ್ರೆಸ್ ಪುಢಾರಿ ಲಾರಿಯಲ್ಲಿ ಧಾನ್ಯ ತರುತ್ತಿದ್ದನು. ಅವನ ಹತ್ತಿರ ಡಿ ಫಾರ್ಮ್ ಇರಲಿಲ್ಲ. ಆದುದರಿಂದ ಅಮಲ್ದಾರರು ಅದನ್ನು ತಡೆದರು. ಆಗ ಆ ಕಾಂಗ್ರೆಸ್ ಪುಢಾರಿ ಯಾರೋ ನೀನು ? ಏನು ತಿಳಕೊಂಡಿದ್ದೀಯೋ ? ನನ್ನ ಲಾರಿ ತಡೆಯುವ ಶಕ್ತಿ ನಿನಗೆ ಇದೆಯೋ ? ನಿನಗೆ ಏನಾಗುತ್ತದೆ ಎನ್ನುವುದನ್ನು ಇಂದು ಸಾಯಂಕಾಲದೊಳಗೆ ನೋಡು ಎಂದು ಹೇಳಿದನು. ಅಂದು ಸಾಯಂಕಾಲದೊಳಗೆ ಆತನಿಗೆ ಟ್ರಾನ್ಸಫರ್ ಆರ್ಡರ್ ಬಂತು. ಆದರೆ ಟ್ರಾನ್ಸಫರ್ ಬಂದ ಮೇಲೆ ಫುಡ್ ಮಿನಿಸ್ಟರ್ ಅವರಿಗೆ ಹೇಳುತ್ತೇನೆ ಇಷ್ಟೊಂದು ಅನ್ಯಾಯ ಮಾಡುತ್ತಾ ಹೋದರೆ ದೇಶದಲ್ಲಿ ಕ್ರಾಂತಿ ಬರುತ್ತದೆ ಎಂದು ಆ ಟ್ರಾನ್ಸಫರ್ ಆರ್ಡರ್ ಕ್ಯಾನ್ಸಲ್ ಮಾಡಿದ್ದಾರೆ. ಮತ್ತೆ ಒಂದು ತಿಂಗಳೊಳಗೆ ಟ್ರಾನ್ಸಫರ್ ಮಾಡಿದ್ದಾರೆ. ಇದು ನ್ಯಾಯವಾದ ಆಡಳಿತವೇ? ಇದು ನಿಷ್ಪಕ್ಷಪಾತ ಆಡಳಿತವೆ? ನಮ್ಮ ಜಿಲ್ಲೆಯಲ್ಲಿ ಮೊನ್ನೆಯ ದಿನ ದೊಡ್ಡ ಸಿದ್ಧವನಹಳ್ಳಿ ಎಂಬ ಗ್ರಾಮದಲ್ಲಿ ಒಂದು ದೊಡ್ಡ ದರೋಡೆ ಆಗಿದೆ. ಅದೇ ರೀತಿ ಇನ್ನೊಂದು ಕಡೆ ಕಳ್ಳತನವಾಯಿತು. ಈ ಕಳ್ಳತನ ನಡೆದದ್ದು 26-2-1968 ರಲ್ಲಿ. ಇದರ ಬಗ್ಗೆ ವಿಚಾರಣೆ ನಡೆಯುತ್ತಾ ಇದ್ದರೆ ಹೇಳುವುದಕ್ಕೆ ವ್ಯಸನವಾಗುತ್ತದೆ. ಅನಿವಾರ್ಯವಾಗಿ ಹೇಳಿ ಎಲ್ಲರ ಗಮನಕ್ಕೆ ತರಬೇಕಾಗಿದೆ. ದೊಡ್ಡ ಮನುಷ್ಯರ ಬಾಯಿಂದ ಚಿಕ್ಕ ಮಾತು ಬರಲಾರದು, ಈ ವರ್ತಮಾನ ಒಬ್ಬ ಮಾನ್ಯ ಸದಸ್ಯರು ದೊಡ್ಡ ಮನುಷ್ಯರು ಕೊಟ್ಟಿದ್ದಾರೆ ಪಾರ್ಲಿಮೆಂಟಿನ ಸದಸ್ಯರು ತಿಳಿಸಿದ್ದಾರೆ, ಇದು ಸುಳ್ಳು ಎಂದು ಹೇಳುವುದಕ್ಕೆ ನಾನು ತಯಾರಿಲ್ಲ ನಮ್ಮ ಜಿಲ್ಲೆಯವರಾದ ಉಪ ಮಂತ್ರಿಗಳು ನಮ್ಮ ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟ್‌ರಿಗೆ

ಫೋನ್ ಮಾಡುತ್ತಾರೆ—ಅದನ್ನು ಮಾಡಬೇಡಿ. ಹೀಗೆ ಮಾಡಬೇಡಿ ಎಂದು ಹೇಳಿದರೆ ಆಡಳಿತದಲ್ಲಿ ಏನು ಬಿಗಿ ಬರುತ್ತದೆ? ಇದನ್ನು ನಾವು ಸ್ವಲ್ಪ ವಿಚಾರಣೆ ಮಾಡಬೇಕು. ಇದು ನಿಷ್ಪಕ್ಷಪಾತ ಆಡಳಿತವೇ? ಆಡಳಿತದಲ್ಲಿ ಕೈ ಹಾಕದೆ ಆಡಳಿತ ಸರಿಯಾಗಿ ನಡೆಯುವಂತೆ ಮಾಡಬೇಕು. ಯಾರಾದರೂ ತಪ್ಪು ಮಾಡಿದರೆ ಶಿಕ್ಷೆ ಮಾಡಬೇಕು ಆದರೆ ಸಣ್ಣ ಪುಟ್ಟ ಕಾರ್ಯಗಳಲ್ಲಿ ಬೇಕಾದಷ್ಟು ಇಂಟರ್‌ಫಿಯರೆನ್ಸ್ ಆಗುತ್ತಾ ಇದೆ. ಆಡಳಿತದಲ್ಲಿ ಇದು ಪ್ರತ್ಯಕ್ಷವಾಗಿ ನಡೆಯುತ್ತಿದೆ. ಮಂತ್ರಿಗಳು ಟ್ರಂಕ್‌ಕಾಲ್ಸ್ ಮಾಡಿರುವುದಕ್ಕೆ ಒಂದು ಲಕ್ಷ ಚಿಲ್ಲರೆ ರೂಪಾಯಿ ಈ ಬೇಡಿಕೆಯಲ್ಲಿ ಕೊಟ್ಟಿದ್ದೀರಿ. ಮಂತ್ರಿಗಳು ಎಲ್ಲಿಗೆ ಟ್ರಂಕ್‌ಕಾಲ್ಸ್ ಮಾಡಿದರು? ಏತಕ್ಕೋಸ್ಕರ ಮಾಡಿದರು! ನನಗೆ ಅನಿಸುತ್ತದೆ ಈ ಟ್ರಂಕ್‌ಕಾಲ್ ಟೆಲಿಫೋನು ಕಾಲ್‌ಗಳು ಇದರಲ್ಲಿ ಮುಕ್ಕಾಲು ಪಾಲು ಇನ್ನೊಬ್ಬರಿಗೆ ತೊಂದರೆ ಪಡಿಸುವುದಕ್ಕೆ ಕೇಡು ಮಾಡುವುದಕ್ಕೆ ಇರುತ್ತವೆ. ಕೇಂದ್ರ ಸರಕಾರದಲ್ಲಿ ಆಹಾರ ಮಂತ್ರಿಗಳಾದ ಶ್ರೀ ಜಗಜೀವನರಾಮ ಅವರು ಹಿರಿಯರು ದೊಡ್ಡ ನಾಯಕರು, ಹೆಚ್ಚಿನ ಗೌರವ ಅವರಲ್ಲಿ ನನಗೆ ಇದೆ. ಅವರು ಒಂದು ಮಾತು ಹೇಳಿರುವುದು ಪೇಪರಿನಲ್ಲಿ ಓದಿದ್ದೇನೆ. ನಿಮಗೆ ಪುಣ್ಯದ ಫಲ ಇರುವುದರಿಂದ ಆಡಳಿತ ಮಾಡುತ್ತಿದ್ದೀರಿ. ಈ ಪುಣ್ಯದ ಫಲ ತೀರಿಹೋದಮೇಲೆ ನಿಮಗೆ ಯಾವ ನರಕ ಕಾದಿದೆ? ಈ ಸಮಾಚಾರ ಪೇಪರಿನಲ್ಲಿ ಬಂದಿದೆ. ಶ್ರೀ ಜಗಜೀವನ ರಾಮ ಅವರು ಹೇಳಿರುವುದನ್ನೇ ಮಹಾ ಭಾರತದ ವಿದುರ ನೀತಿಯಲ್ಲಿ ಇನ್ನೂ ಚೆನ್ನಾಗಿ ಒಂದು ಪದ್ಯದಲ್ಲಿ ಹೇಳಿದೆ. ವಿದುರ ನೀತಿಯ ಪದ್ಯ ಹೀಗೆ ಅದೆ:

ಉಂಡು ತೀರಿಸಬೇಕು ತಾ ಮುಂ
ಕೊಂಡ ಮಾಡಿದ ಪುಣ್ಯ ಪಾಪದ
ತಂಡವನು ತರಹರಣವಿಲ್ಲದೆ ಭವ ಭವಂಗಳಲಿ
ಹಿಂದಿ ಹಿಳಿವುದು ಬೆಂಬಿಡದೆ ಸಮ
ದಂಡಿಯಲಿ ಹಗೆ ಕೆಳೆಗಳೆನ್ನದೆ.
ಗಂಡು ಗೆಡಿಸದೆ ಬಿಡುವುದೇ ವಿಧಿಯೆಂದನಾ ವಿದುರ

ಆ ಕಾಲ ಬರುತ್ತಾ ಇದೆ. ಇಂದು ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕು ಎಂಬ ಆಶೆ ನಿಮಗೆ ಇದ್ದರೆ ನಿಮಗೆ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇಂಪರ್ಸನಲ್ ಅಡ್ಮಿನಿಸ್ಟ್ರೇಷನ್ ನಮ್ಮ ಸ್ಟೇಟ್‌ಗೆ ಕೊಡಿ. ಶ್ರೀಮತಿ ನಾಗರತ್ನಮ್ಮನವರು ಟ್ರಾನ್ಸ್‌ಫರ್ ವಿಚಾರದಲ್ಲಿ ಒಂದು ಮಾತು ಹೇಳಿದರು. ಟ್ರಾನ್ಸ್‌ಫರ್ ವಿಚಾರದಲ್ಲಿ ಅಧಿಕಾರಿಗಳು ದಂಡಿಯಾಗಿ ಬಂದು ಯಾತ್ರೆ ಮಾಡುತ್ತಾರೆ ಎಂದು. ಈ ಟ್ರಾನ್ಸ್‌ಫರ್ ವರ್ಗಾವರ್ಗಿ ಇದರಲ್ಲಿ ಆಗುತ್ತಿರುವ ಅನ್ಯಾಯ ನೋಡಿದರೆ ಇಲ್ಲಿಯೂ ಕೂಡ ಕ್ರೈರಾನ್ ಕೇಸು ಬರುತ್ತದೆ ಎಂದು ಅನಿಸುತ್ತದೆ. ಒಬ್ಬ ಅಧಿಕಾರಿ ತಾವು ಹೇಳಿದಂತೆ ಕೇಳಲಿಲ್ಲ ಎಂದು ಸುಮಾರು ನಾಲ್ಕು ತಿಂಗಳಲ್ಲಿ 12—13 ಸಲ ಟ್ರಾನ್ಸ್‌ಫರ್ ಮಾಡಿದರು. ಈ ರೀತಿ ಟ್ರಾನ್ಸ್‌ಫರು ಮಾಡಿದರೆ ಅವರ ಗತಿ ಏನು? ಆ ಅಧಿಕಾರಿಯೇ ತನ್ನ ಹೆಂಡರು ಮಕ್ಕಳನ್ನು ಒಂದು ಕಡೆ ಇಟ್ಟು, ತನ್ನ ಹೋಲ್ಡಾಲ್ ಸೂಟ್‌ಕೇಸು ತಟ್ಟಿ ಇಟ್ಟುಬಿಟ್ಟು, ಒಂದು ದಿವಸಕ್ಕೆ ನಾಲ್ಕು ಸಾರಿ ಬೇಕಾದರೆ ಟ್ರಾನ್ಸ್‌ಫರ್ ಮಾಡಿ ಎಲ್ಲಿ ಬೇಕಾದರು ಹೋಗುತ್ತೇನೆ ಎಂದು ಹೇಳಿದನು. ಇಂಥ ಅಧಿಕಾರಿಗಳಿಗೆ ಹೆಂಡರು ಮಕ್ಕಳು ಇದ್ದಾರೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಹಿಂದಕ್ಕೆ ಯಾರಾದರೂ ತಪ್ಪು ಮಾಡಿದರೆ ಟ್ರಾನ್ಸ್‌ಫರ್ ಮಾಡಲಾಗುತ್ತಿತ್ತು. ತಪ್ಪು ಮಾಡಿದರೆ ಡಿಸ್‌ಮಿಸ್ ಮಾಡಬೇಕು ಸಸ್ಪೆಂಡ್ ಮಾಡಬೇಕು; ಆದರೆ ಅದನ್ನು ಬಿಟ್ಟು ಟ್ರಾನ್ಸ್‌ಫರ್ ಮಾಡುತ್ತಾ ಹೋದರೆ ಇದು ನ್ಯಾಯವೇ?

ಇನ್ನು ಮಹಾಜನ್ ಅವರ ವಿಚಾರದಲ್ಲಿ ಎಲ್ಲರಿಗೂ ವಿಶ್ವಾಸ ಇದೆ. ಅವರು ಬಹು ದೊಡ್ಡ ಗಣ್ಯ ವ್ಯಕ್ತಿಗಳು. ನಮ್ಮ ದೇಶದಲ್ಲಿ ಹಿರಿಯರಾದವರು. ಅವರು 1961ನೇ ಇಸವಿಯಲ್ಲಿ ಕೊಟ್ಟಿರುವ ಒಂದು ವರದಿಯಲ್ಲಿ ಬಹು ಚೆನ್ನಾಗಿ ಹೇಳಿದ್ದಾರೆ. ನಮ್ಮ ದೇಶದ ಆಡಳಿತ demoralise ಆಗಿದೆ ಎಂದು ಹೇಳಿದರು.

> "The police force in the State was demoralised and its functioning had been very seriously affected as a result of political interference"

ಎಂದು ಹೇಳಿದ್ದಾರೆ. ಯಾವ ಇಂಟರ್‌ಫಿಯರನ್ಸ್ ಇಲ್ಲದೆ ಕೈ ಹಾಕದೆ ಇದ್ದರೆ ಆಡಳಿತ ಸುಗಮವಾಗಿ ನಡೆಯುತ್ತದೆ. ಆದರೆ ನಮಗೆ ಬಹು ಆಶ್ಚರ್ಯವಾಗುತ್ತದೆ. ಸೆಕೆಂಡ್ ಡಿವಿಜನ್ ಕ್ಲಾರ್ಕ್ಸ್ ಟ್ರಾನ್ಸ್‌ಫರ್ ಮಾಡುವ ವಿಚಾರದಲ್ಲಿ ಮಂತ್ರಿಗಳು ಹೇಳುತ್ತಾರೆ, ಕಾಗದ ಬರೆಯುತ್ತಾರೆ.

(ಶ್ರೀ ಎಚ್. ಸಿದ್ದವೀರಪ್ಪ)

ಇವನನ್ನು ಟ್ರಾನ್ಸಫರ್ ಮಾಡಿಸಬೇಕು ಎಂದು ಹೇಳುತ್ತಾರೆ, ಇಂಥ ಸೆಕೆಂಡ್ ಡಿವಿಜನ್ ಕ್ಲಾರ್ಕ್ ವಿಚಾರದಲ್ಲಿ ಸರಕಾರ ಕೈ ಹಾಕುವುದಾದರೆ ಕೆಳಗಿನ ಅಧಿಕಾರಿಗಳು ಏತಕ್ಕೆ ಇರಬೇಕು ? ಅವರಿಗೆ ಗೊತ್ತಿರುವುದಿಲ್ಲವೇ ? ಇದಕ್ಕೆ ಇಲಾಖೆ ಇರುವುದಿಲ್ಲವೇ ? ತಮಗೆ ಬೇಕಾದವರನ್ನು ಆರಿಸಿ ನೇಮಕ ಮಾಡಿರುವುದರಿಂದಲೇ ಇಂದು ಸಾವಿರಾರು ರಿಟ್ ಪಿಟಿಷನ್ಸ್ ಹೈ ಕೋರ್ಟಿನಲ್ಲಿ ಇವೆ. ಆದುದರಿಂದ ಶ್ರೀಮಾನ್ ಹನುಮಂತಯ್ಯನವರ ಕಾಲದಲ್ಲಿ ಯಾವ ರೀತಿಯಾಗಿ ಜಾತಿ ಗೊಂದಲವಿಲ್ಲದೆ ನಿರ್ದಾಕ್ಷಿಣ್ಯವಾಗಿ ನಿಷ್ಪಕ್ಷಪಾತವಾದ ಆಡಳಿತ ನಡೆಸುವುದನ್ನು ದೇಶಕ್ಕೆ ಹಾದಿ ಹಾಕಿಕೊಟ್ಟಿರುವುದನ್ನು ಚೆಂಗಲ್‌ರಾಯ ರೆಡ್ಡಿಯವರು ಹಾಕಿಕೊಂಡಂಥ ದಾರಿಯನ್ನು ಮುಂದು ವರಿಸಿಕೊಂಡು ಬಂದಿದ್ದರೆ ಇಂದು ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ. ನೀವು ಎಲ್ಲಿ ನೋಡಿದರೂ ಮಂತ್ರಿಗಳಿಗೆ ಬೇಕಾದಂಥ ಜನರ ಸಲುವಾಗಿ ಮಾಡಿದ್ದಾರೆ ಎಂದು ಜನ ಅಪಾದನೆ ಮಾಡುವುದಕ್ಕೆ ಏತಕ್ಕೆ ಒಳಗಾಗುತ್ತೀರಿ ? ಇದು ತಪ್ಪು. ಪ್ರಜಾಪ್ರಭುತ್ವ ಉಳಿಯಬೇಕು ಎಂಬ ಆಶೆ ಇದ್ದರೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ಆಡಳಿತ ಸರಿಯಾಗಿ ಮಾಡಿ. ಆಡಳಿತ ಸರಿ ಹೋಗದಿದ್ದರೆ ಏನು ಪ್ರಯೋಜನ ? ಮನೆಗೆ ಯಜಮಾನನು ಸಾಮಾನು ತಂದುಹಾಕಬಹುದು. ಆದರೆ ಅಡಿಗೆ ಮಾಡುವವನು ಸರಿಯಾಗಿ ಅಡಿಗೆ ಮಾಡದಿದ್ದರೆ ಏನು ಪ್ರಯೋಜನ ? ನೀವು ಕೇಂದ್ರಕ್ಕೆ ಹೋಗಿ ರಿಜರ್ವ್ ಬ್ಯಾಂಕಿನಿಂದ ದುಡ್ಡು ತಂದು ಕೊಡುತ್ತೀರಿ. ಅದನ್ನು ಸರಿಯಾಗಿ ವಿನಿಯೋಗ ಮಾಡ ಬೇಕು. ಆ ಶಕ್ತಿ ನಿಮಗೆ ಇರಬೇಕು. ಅಧಿಕಾರ ಜೂಜು ಕುದುರೆಯು ಇದ್ದಹಾಗೆ ಇರುತ್ತದೆ. ಒಂದು ಸಲ ಮೇಲೆ ಕುಳಿತವನು ಸರಿಯಾಗಿ ಕಾಲು ತಿರುವಿ ನೂಕವೆ ಕೊಟ್ಟರೆ ಮೇಲೆ ಕುಳಿತವನು ಬುದ್ಧಿವಂತನಾಗಿದ್ದಾನೆ ಎಂದು ತಿಳಿದುಕೊಂಡು ಸಲೀಸಾಗಿ ತೆಗೆದುಕೊಂಡು ಹೋಗುತ್ತದೆ. ಇಲ್ಲದಿದ್ದರೆ ಅಂಥವನನ್ನು ಕೆಡವಿ ಹೋಗುತ್ತದೆ. ಆದುದರಿಂದ ನಿಮ್ಮ ಮೇಲೆ ಜವಾಬ್ದಾರಿ ಇದೆ. ಶ್ರೀಮಾನ್ ನಿಜಲಿಂಗಪ್ಪನವರು ಘೋಷಣೆ ಮಾಡಿದ್ದಾರೆ. ದೇಶದ ಮುಖ್ಯಮಂತ್ರಿ ಪದವಿಯನ್ನು ತ್ಯಜಿಸಿ ಬೇರೆ ಕಡೆ ಹೋಗುತ್ತೇನೆ ಎಂದು ಹೇಳಿದ್ದಾರೆ. ನನಗೆ ಅದು ಗೊತ್ತಿದೆ. ನಾನು ಹೇಳು ವುದು ಇಷ್ಟೇ, ಒಂದು ದಿನ ಇರಲಿ ಒಂದು ತಿಂಗಳು ಇರಲಿ ಆಡಳಿತ ಕೈಯಲ್ಲಿದ್ದರೆ ಬಲವಾಗಿ ಶೂರತನದ ಆಡಳಿತ ಕೊಡಬೇಕು ಇದನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಮಾತು ಪೂರೈಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳನ್ನು ಅನು ಮೋದಿಸುತ್ತ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಇದುವರೆಗೆ ಮಾತನಾಡಿದ ಸಹೋದರರು ಕೆಲವು ವಿಷಯಗಳನ್ನು ಹೇಳಿದ್ದಾರೆ. ನಾನು ಅದರ ಬಗ್ಗೆ ಹೇಳಬಯಸುವುದಿಲ್ಲ. ಒಂದೆರಡು ವಿಷಯ ಮಾತ್ರ ಆಡಳಿತದವರ ಗಮನಕ್ಕೆ ತಮ್ಮ ಮೂಲಕ ತರುತ್ತಿದ್ದೇನೆ.

ಸರ್ಕಾರಕ್ಕೆ ಕರ್ತವ್ಯ ಸಿದ್ಧಿ ದೊರೆಯಬೇಕಾದರೆ ದೇಶದ ಸಾರ್ವತ್ರಿಕ ಆಡಳಿತ ಶುದ್ಧಿ ಯಾಗಿರಬೇಕು. ಇದನ್ನು ಎಲ್ಲರೂ ಒಪ್ಪುತ್ತಾರೆ. ವೈಲ್ ದಿ ಸ್ಟ್ರಾಂಗ್ ಪ್ಲೇ ಪಾಲಿಟಿಕ್ಸ್ ದಿ ಪೂರ್ ಪೇ ಫಾರ್ ಇಟ್. ಬಲ್ಲಿದರ ರಾಜಕೀಯದ ಆಟಕ್ಕೆ ಬಡವ ದಂಡ ತೆರುತ್ತಾನೆ, ಎಂದು ಬಲ್ಲ ರಾಜಕಾರಣಿಗಳು ಹೇಳಿದ್ದಾರೆ. ಆಡಳಿತ ಹೇಗಿರಬೇಕೆಂಬುದು ನಮಗೆ ಸ್ಪಷ್ಟವಾಗಿ ಗೊತ್ತಿರುವಾಗ ಆಡಳಿತದಲ್ಲಿ ಲೋಪದೋಷಗಳಿದ್ದಾಗ ಸಂಬಂಧಪಟ್ಟವರ ಗಮನಕ್ಕೆ ತರದೆ ಇರುವಷ್ಟು ನಿರ್ಲಿಪ್ತರು ದೊರೆಯುವುದು ದುರ್ಲಭ. ಅಂತೆಯೇ ಅಧಿಕಾರ ಬಂದಾಗ ವ್ಯವಹಾರ ಬುದ್ಧಿಯುಳ್ಳವರು ಜನತೆಯೊಂದಿಗೆ ಹೊಂದಿಕೊಂಡು ಹೋಗುತ್ತಾರೆ ; ಅಹಂಕಾರಿಗಳು ಉದ್ಧಟ ರಂತೆ ವರ್ತಿಸುತ್ತಾರೆ ; ಅವಿವೇಕಿಗಳು ತೋಳೇರಿಸುತ್ತಾರೆ ; ಜಾಣರು ಅಧಿಕಾರದ ದುರುಪಯೋಗ ತೆಗೆದುಕೊಳ್ಳುತ್ತಾರೆ ; ಪ್ರತಿಭಾವಂತ ಪ್ರಾಮಾಣಿಕರು ಮಾತ್ರ ಕೀರ್ತಿ ಪಡೆಯಬಲ್ಲರು, ಆದರೆ ಅಪರೂಪ ಎಂದು ರಾಜಕೀಯ ತಜ್ಞರು ಹೇಳಿದ್ದಾರೆ. ನಮ್ಮ ಸಚಿವರೂ, ಅಧಿಕಾರಿಗಳೂ, ತಮ್ಮನ್ನು ವಿಮರ್ಶಿಸಿಕೊಂಡು ನಡೆಯಲೆಂದು ಇದನ್ನು ಗಮನಕ್ಕೆ ತಂದಿದ್ದೇನೆ. ಇದನ್ನು ಹೇಳಲಿಕ್ಕೆ ಒಂದು ಕಾರಣವೂ ಉಂಟು. ಒಬ್ಬ ಸಚಿವರಿಗೆ ಇಬ್ಬರು ಎಂ.ಎಲ್.ಎ.ಗಳು ಒಬ್ಬರಿಗೆ ನ್ಯಾಯವಾದ ವಿಚಾರಕ್ಕೆ ಕಾಗದ ಕೊಟ್ಟಿದ್ದರು. ಸಂಬಂಧಪಟ್ಟ ಮಂತ್ರಿಗಳು ಆ ಪತ್ರಗಳನ್ನು ನೋಡದೆ ಉಮ್ಮರ ಖಯ್ಯಾಮನಂತೆ ಕೊಟ್ಟವರ ಕಡೆಗೆ ಎಸೆದರಂತೆ. ಸಚಿವರಿಗೆಷ್ಟು ಜವಾಬ್ದಾರಿ ಇರುತ್ತದೋ, ಸದಸ್ಯರಾದ ನಮಗೂ ಅಷ್ಟೇ ಜವಾಬ್ದಾರಿ ಇರುತ್ತದೆ. ಅವರಿಗೆ ಒಂದೆರಡು ಮೂರು ಹಾರತುರಾಯಿಗಳು, ಪ್ರವಾಸ ಮಾತ್ರ ಹೆಚ್ಚಾಗಿರಬಹುದು. ಆದರೆ ಮಂತ್ರಿಗಳಿಗಿಂತ ಅವು ನಮಗೆ ಕಡಮೆ ಇರುತ್ತವೆ. ಆ ಪತ್ರವನ್ನು ಜವಾಬ್ದಾರಿಯುಳ್ಳವರು ಕೊಟ್ಟಮೇಲೆ ಅದರಲ್ಲೇನಿದೆ ಎಂದು ನೋಡುವಂಥ ಸಹನೆಯೂ ಇಲ್ಲವೆಂದಮೇಲೆ ಅಂತಹವರು ಪ್ರಜಾಪ್ರಭುತ್ವ

ದಲ್ಲಿ ಮಂತ್ರಿಗಳಾಗಿರಬಹುದೇ ಎಂದು ಪ್ರಶ್ನಿಸಬೇಕಾಗುತ್ತದೆ. ಸಚಿವರಿಗೆ ಅಧಿಕಾರ ಕೊಟ್ಟವರು ಎಂ.ಎಲ್.ಎ.ಗಳೆಂಬುದನ್ನು ಅಂತಹವರು ಜ್ಞಾಪಕದಲ್ಲಿಟ್ಟುಕೊಂಡಿರಬೇಕೆಂದು ಸೂಚಿಸ ಬಯಸುತ್ತೇನೆ.

ಶ್ರೀ ಎನ್. ಜಿ. ಹಾಲಪ್ಪ (ಚನ್ನಗಿರಿ).—ಸಚಿವರು ಯಾರು ಎಂದು ಹೇಳುತ್ತೀರಾ?

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಅದೆಲ್ಲ ನಿಮಗೇಕೆ ಬೇಕು ? ಆ ರೀತಿ ಮಾಡಿದವರು ತಿದ್ದಿಕೊಳ್ಳುತ್ತಾರೆ.

ಶ್ರೀ ಎಚ್. ಸಿದ್ದವೀರಪ್ಪ.—ತಿದ್ದಿಕೊಳ್ಳುತ್ತಾರೆ ಎನ್ನುವ ನಂಬಿಕೆ ಇದೆಯೇ?

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ತಿದ್ದಿಕೊಳ್ಳುತ್ತಾರೆನ್ನುವ ನಂಬಿಕೆ ಇದೆ. ತಪ್ಪನ್ನು ತೋರಿಸುವುದು ನಮ್ಮ ಕರ್ತವ್ಯ, ಅದನ್ನು ತಿದ್ದಿಕೊಳ್ಳುವುದು ಅವರ ಕರ್ತವ್ಯ.

ಕೆಲವು ಕಾನೂನುಗಳ ವಿಷಯವಾಗಿ ಹೇಳಬೇಕಾಗಿದೆ. ಕೆಲವು ಕಾನೂನುಗಳು ನಮ್ಮ ಆಡಳಿತದಲ್ಲಿ ಒಳ್ಳೆಯ ಕೆಲಸಕ್ಕೆ ಕೂಡ ಅಡ್ಡಿ ಬರುತ್ತಿವೆ. ಮಳೆ ನಿಂತರೂ ಮರದ ಹನಿ ಬಿಡದು. ಎಂಬಂತೆ ಬ್ರಿಟಿಷರು ಹೋದರೂ ಕೂಡ ಅವರ ಕೆಲವು ಕಾನೂನುಗಳಿಂದ ಆಡಳಿತಕ್ಕೆ ಅಡ್ಡಿ ಆತಂಕ ಉಂಟಾಗಿದೆ ಎಂದರೆ ತಪ್ಪಾಗಲಾರದು. ಕೆಲವೊಂದು ಕಾನೂನುಗಳು ಹೇಗಿವೆ ಎಂದರೆ ಮುಂಡಾಸಿನ ಕಾನೂನಿನಂತೆ ಇವೆ. ಒಬ್ಬ ರಾಜನಿಗೆ ಪಟ್ಟಾಧಿಕಾರವಾಯಿತು. ಆತನಿಗೆ ಬಲಗಣ್ಣು ಕುರುಡು. ಆತ ಬಲಗಣ್ಣು ಕಾಣಿಸದಂತೆ ರುಮಾಲು ಸುತ್ತಿಕೊಳ್ಳುತ್ತಿದ್ದ. ರಾಜ ಮಾತ್ರ ಹಾಗೆ ಸುತ್ತಿಕೊಂಡು ಉಳಿದವರು ಸರಿಯಾಗಿ ಸುತ್ತಿಕೊಳ್ಳುವುದರಿಂದ ರಾಜನ ಕುರುಡುತನ ಎದ್ದು ಕಾಣುತ್ತದೆ. ಕಾರಣ ಎಲ್ಲರೂ ಅದೇ ರೀತಿ ರುಮಾಲು ಸುತ್ತಿಕೊಳ್ಳಬೇಕೆಂದು ಕಾನೂನನ್ನೇ ಮಾಡಿಸಿಬಿಟ್ಟರು. ರಾಜನ ಮಗನಿಗೆ ಇದು ಸರಿ ಕಾಣಲಿಲ್ಲ. ಹಾಗೆ ಹೇಳುವಂತೆಯೂ ಇಲ್ಲ. ತಂದೆಗೆ ಹೇಳಿ ಪ್ರವಾಸ ಹೊರಟ. ಪಕ್ಕದ ರಾಜನ ಮಗಳನ್ನು ಲಗ್ನವಾಗಬೇಕೆಂದು ಮನಸ್ಸು ಮಾಡಿದ. ಆ ರಾಜ್ಯದ ಮಂತ್ರಿಗೆ ಮುಂಡಾಸಿನ ಕಾನೂನು ಹೇಳಿ ಇದನ್ನು ಉಪಾಯ ದಿಂದ ತಪ್ಪಿಸಬೇಕು, ಕಾರಣ ನೀನು ಎಡದ ಕಣ್ಣಿನ ಮೇಲೆ ಮುಂಡಾಸು ಸುತ್ತಿಕೊಂಡು ಹೋಗು, ನಮ್ಮ ಮಗಳನ್ನು ನಿಮ್ಮ ಮಗನಿಗೆ ಕೊಡುತ್ತೇವೆಂದು ಹೇಳು. ಅವರು ಕಾನೂನು ಮೀರಿದ್ದಕ್ಕೆ ಜೈಲಿಗೆ ಹಾಕಿದರೆ ಮುಂದಿನ ವಿಚಾರ ನಾನು ನೋಡಿಕೊಳ್ಳುತ್ತೇನೆ ಎಂದು ಆತನನ್ನು ಕರೆದು ಕೊಂಡು ತನ್ನ ಊರಿಗೆ ಹೋದ. ಕಾನೂನು ಮೀರಿ ಎಡಕಣ್ಣಿನ ಮೇಲೆ ರುಮಾಲು ಸುತ್ತಿದ್ದಕ್ಕೆ ಕಾರಣ ಕೇಳಿದರು. ಸ್ವಾಮಿ, ನನ್ನ ಎಡಕಣ್ಣು ಕುರುಡು, ನಿಮ್ಮ ಕಾನೂನಿನಂತೆ ಬಲದ ಕಣ್ಣಿನ ಮೇಲೆ ರುಮಾಲನ್ನು ಸುತ್ತಿದರೆ ಎರಡು ಕಣ್ಣೂ ಕಾಣುವುದಿಲ್ಲ. ಅಂತೆಯೇ ಎಡದ ಕಣ್ಣಿನ ಮೇಲೆ ಸುತ್ತಿದ್ದೇನೆ ಎಂದಿದ್ದಕ್ಕೆ ಆತನನ್ನು ಜೈಲಿಗೆ ಹಾಕಿದರು ಮತ್ತು ಪಕ್ಕದ ರಾಜ್ಯದ ಮೇಲೆ ದಂಡೆತ್ತಿ ಹೋಗಲು ಮಗನಿಗೆ ಹೇಳಿದ. ಮಗ ಬಲಕಣ್ಣಿನ ಮೇಲೆ ರುಮಾಲು ಸುತ್ತಿದ್ದ ಸೈನ್ಯ ತೆಗೆದು ಕೊಂಡು ಹೋಗಿ ಅವರನ್ನೆಲ್ಲಾ ಪಕ್ಕದ ರಾಜನಲ್ಲಿ ಬಿಟ್ಟು ವಾಪಸು ಬಂದು ನಮ್ಮವರೆಲ್ಲರೂ ಸೆರೆಯಾದರು, ನಾನೊಬ್ಬನೇ ಬಂದೆ ಎಂದು ಹೇಳಿದ. ಕಾರಣ ಕೇಳಲು ನಮ್ಮ ಮುಂಡಾಸಿನ ಕಾನೂನಿನಿಂದ ಹೀಗಾಯಿತು. ಶತ್ರು ಸೈನಿಕರು ಪ್ರತಿ ಒಬ್ಬನ ಬಲಭಾಗದಿಂದ ಬಂದು ಸೆರೆ ಹಿಡಿದರು ಎಂದು ಹೇಳಿದ. ಇದರಿಂದಾಗಿ ಈ ಕಾನೂನನ್ನು ತಪ್ಪಿಸಬೇಕು ಎಂದು ಹೇಳಿದಾಗ ರಾಜ ಯೋಚನೆ ಮಾಡಿ ಆ ಕಾನೂನನ್ನು ತಪ್ಪಿಸಿ ಎಲ್ಲರೂ ತಮ್ಮ ಕಣ್ಣುಗಳನ್ನು ಬಿಟ್ಟು ರುಮಾಲು ಕಟ್ಟಬೇಕೆಂದು ಮಾಡಿದ. ಹೀಗೆ ಕೆಲವು ಕಾನೂನುಗಳು ಒಳ್ಳೆಯ ಕೆಲಸಕ್ಕೆ ಅಡ್ಡಿಯಾಗಿವೆ. ಕೆಲವು ತಪ್ಪಿತಸ್ಥರನ್ನು, ದೊಡ್ಡ ತಪ್ಪು ಮಾಡಿದವರನ್ನು ಹಿಡಿಯುವುದಕ್ಕೆ ಕೆಲವು ಕಾನೂನುಗಳು ಅಡ್ಡಿ ಬರುತ್ತವೆ. ಅಂಥ ಕಾನೂನುಗಳಿಗೆ ತಿದ್ದುಪಡಿ ಮಾಡಿ ದೊಡ್ಡ ದೊಡ್ಡ ತಪ್ಪಿತಸ್ಥರನ್ನು ಹಿಡಿಯುವುದಕ್ಕೆ ಕ್ರಮ ಕೈಕೊಳ್ಳಬೇಕೆಂದು ನಾನು ಸರ್ಕಾರದಲ್ಲಿ ವಿನಯದಿಂದ ಸೂಚಿಸುತ್ತೇನೆ.

ಲಂಚ 20 ವರ್ಷಗಳಿಂದಲೂ ಇರಬಹುದು. ಕೃಷ್ಣದೇವರಾಯನ ಕಾಲದಲ್ಲಿ ಕೂಡ ಲಂಚದ ಪರಿಸ್ಥಿತಿ ಇತ್ತು. 20 ವರ್ಷಗಳಿಂದ ಆಡಳಿತ ನಮ್ಮ ಕೈಗೆ ಬಂದಿದೆ. ಆದರೆ ಈ 20 ವರ್ಷ ಗಳಿಂದ ಮಾತ್ರ ಲಂಚವಿದೆ ಎಂದು ಹೇಳುವುದು ಸರಿಯಲ್ಲ. ಇದನ್ನು ತಪ್ಪಿಸಬೇಕಾದರೆ ಸದಸ್ಯ ರಾದ ನಾವು, ಜನಸಾಮಾನ್ಯರು, ಸಾರ್ವಜನಿಕರು ಎಲ್ಲರೂ ಕೂಡ ಒಟ್ಟಿಗೆ ಅದನ್ನು ಸರಿಪಡಿಸು ವುದಕ್ಕೆ ಪ್ರಯತ್ನ ಮಾಡಿ ಆ ಹೊಣೆಗಾರಿಕೆಯನ್ನು ಹೊತ್ತುಕೊಂಡರೆ ಮಾತ್ರ ಅದನ್ನು ಸರಿಪಡಿಸು ವುದಕ್ಕೆ ಸಾಧ್ಯ, ಇಲ್ಲದೆ ಇದ್ದರೆ ಇಲ್ಲ ಎಂದು ಹೇಳುತ್ತೇನೆ.

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ವಿಳಂಬ ನೀತಿಯ ಬಗ್ಗೆ ಸಚಿವರೇ ಒಪ್ಪಿಕೊಂಡಿದ್ದಾರೆ. ಅನೇಕ ಕಾಲದಿಂದ ಇದು ನಡೆದುಕೊಂಡು ಬಂದಿದೆ. ಸರ್ಕಾರದವರು ಇತ್ತೀಚೆಗೆ ರಾಜಕೀಯ ಸಂತ್ರಸ್ತರಿಗೆ ಸಹಾಯ ಮಾಡಬೇಕೆಂದು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಒಬ್ಬರು ಚಿಂತಾಮಣಿಯ ಕಾಂಗ್ರೆಸ್ ಕಾರ್ಯಕರ್ತರು ತಾವು ಬಹಳ ತೊಂದರೆಪಟ್ಟಿರುವುದಾಗಿಯೂ, ಮನೆಮಠಗಳನ್ನು ಕಳೆದುಕೊಂಡಿರುವುದಾಗಿಯೂ 400 ಕಾಗದಗಳನ್ನು ಬರೆದರೂ ಅವುಗಳಿಗೆ ಉತ್ತರ ಬರಲಿಲ್ಲ ಎಂದು ಬರೆದಿರುವ ಕಾಗದ ನಿನ್ನೆ ತಾನೇ ನನಗೆ ಬಂದಿದೆ. ಈ ತರಹ ವಿಳಂಬ ನೀತಿ ಆಗದಂತೆ ಸರ್ಕಾರದವರು ನೋಡಿಕೊಳ್ಳಬೇಕು. ಈ ವಿಳಂಬ ನೀತಿಗೆ ಕೆಲವು ಅಧಿಕಾರಿಗಳೂ ಕಾರಣ. ಈ ಅಧಿಕಾರಿಗಳ ಅಸಡ್ಡೆ ಮತ್ತು ನಿರ್ಲಕ್ಷ್ಯತನದಿಂದ ಸರ್ಕಾರಕ್ಕೆ ಒಂದು ರೀತಿಯ ಅಪಮಾನ ಅಥವಾ ಕಳಂಕ ಬರುತ್ತದೆ. ಇಂಥ ಅಧಿಕಾರಿಗಳ ಮೇಲೆ ಉಗ್ರ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಕೆಲವರು ಸದಸ್ಯರು ಸಚಿವರ ಬಳಿಗೆ ಹೋದಾಗ ಈ ಸದಸ್ಯರಿಗೆ ಇದೇ ಕೆಲಸವೇನು ಎಂದು ಕೇಳುತ್ತಾರಂತೆ. ತಾವು ಸದಸ್ಯರಾಗಿದ್ದಾಗ ಅವರು ಏನು ಮಾಡಿದ್ದರೋ ಅದನ್ನೇ ಉಳಿದವರೂ ಮಾಡುತ್ತಾರೆ ಎಂಬುದನ್ನು ಅವರು ಮರೆಯಬಾರದು ; ಎಂದು ಅವರಿಗೆ ನಾನು ಹೇಳುತ್ತಿದ್ದೇನೆ.

ಸಾರ್ವತ್ರಿಕ ಆಡಳಿತ ಶುದ್ಧಿಯಾಗಬೇಕಾದರೆ ಕೆಲವು ಗಾದೆಗಳನ್ನು ಆಡಳಿತ ವರ್ಗ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಗಾದೆಗಳು ವೇದ ವಾಕ್ಯಕ್ಕೆ ಸಮ ಎನ್ನುವುದನ್ನು ಮರೆಯಬಾರದು ಎಂದು ವಿನಯದಿಂದ ಹೇಳಿಕೊಂಡು ಒಂದೆರಡು ಗಾದೆ ಮಾತ್ರ ಹೇಳುತ್ತೇನೆ.

ಅಂಕೆ ಇಲ್ಲದವರಿಗೆ ಬಂಕ ಬಹಳ
ಪ್ರಜಾ ಸರ್ಕಾರದಲ್ಲಿ ಮಜಾ ಬೇಡ
ಅಧಿಕಾರಕ್ಕೆ ತಕ್ಕ ಬುದ್ಧಿ ಬೇಕು
ಸಂಬಳಕ್ಕೆ ತಕ್ಕ ಕೆಲಸ ಬೇಕು
ಸ್ವಾತಂತ್ರ್ಯ ಬಂದಾಗ ಸರ್ವಾಧಿಕಾರವಿರಬಾರದು
ನೊಂದ ಪ್ರಜೆಯ ತಾಪ ದೇಶಕ್ಕೆ ಶಾಪ
ಯೋಜನೆ ಹಿರಿದು ಖಜಾನೆ ಬರಿದು
ಕೋಟಿಗಟ್ಟಲೆ ಸಾಲ ಸರ್ಕಾರಕ್ಕೆ ಲೀಲ
ದುರ್ಭಿಕ್ಷದಲ್ಲಿ ಅಧಿಕ ಮಂತ್ರಿಗಳು
ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು
ತತ್ವ ಹೇಳುವುದು ಭತ್ಯ ಪಡೆಯುವುದು

ಇವು ತುಂಬ ಮಹತ್ವದ ಗಾದೆಗಳು.

ಆಡಳಿತ ವರ್ಗದವರು ಇದನ್ನು ಗಮನದಲ್ಲಿಟ್ಟುಕೊಂಡು ನಡೆದರೆ ಸಾರ್ವತ್ರಿಕ ಆಡಳಿತಕೆ ಸಿದ್ಧಿ ದೊರೆಯುವುದರಲ್ಲೂ ಸಂದೇಹವಿಲ್ಲ ಎಂಬುದಾಗಿ ಸೂಚಿಸಬಯಸುತ್ತೇನೆ.

ಪ್ರಜಾಪ್ರತಿನಿಧಿಗಳಿಂದ ಚುನಾಯಿಸಲ್ಪಡುವ ಸಚಿವರು ವಿಧಾನಸಭೆಗೆ ಹೊಣೆಗಾರರಾಗಿರುವುದರಿಂದ ಈ ನಿಯಮಗಳಿಗೆ ಬದ್ಧರಾಗಿರಬೇಕಾದ್ದು ಧರ್ಮವೆಂದು ಆಧುನಿಕ ಚಾಣಕ್ಯ ತನ್ನ ರಾಜತಂತ್ರ ನೀತಿಯಲ್ಲಿ ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಪ್ರಜಾ ಸರ್ಕಾರ ಮಂತ್ರಿಗಳ ಸೊತ್ತು ।
ಅವರಿಗೆಲ್ಲಿದೆ ಬಿಡುವು ಇಲ್ಲ ಪುರಸೊತ್ತು ।
ಹೀಗಿರುವುದೆಂದು ನಾವು ಹೆದರುವುದು ವ್ಯರ್ಥ ।
ಸಿಕ್ಕೆ ಸಿಗುವುದು ಅವರ ಭಾಷಣದ ತೀರ್ಥ ॥

ಎಂಬ ಭಾವನೆ ಜನತೆಗೆ ಬಾರದಿರಲೆಂಬ ಉದ್ದೇಶದಿಂದ ರಾಜಕೀಯ ಸಂಹಿತೆಯ ನೀತಿಯನ್ನು ತಮ್ಮ ಗಮನಕೆ ತರುವುದು ನನ್ನ ಕರ್ತವ್ಯ, ಸ್ವೀಕರಿಸುವುದೂ ಬಿಡುವುದೂ ನಿಮ್ಮ ಧರ್ಮ.

1 ಪ್ರಜಾಪ್ರತಿನಿಧಿಗಳಿಂದ ನೇಮಿಸಲ್ಪಟ್ಟಿರುವ ಸರಕಾರದ ಧರ್ಮದರ್ಶಿಗಳೆಂಬುದನ್ನು ನಾವು ಸದಾ ಸ್ಮರಣೆಯಲ್ಲಿಟ್ಟುಕೊಂಡಿರುತ್ತೇವೆ. ಪ್ರಜೆಗಳಿಗೆ ಅನ್ಯಾಯವಾಗುವಂತಹ ಕೆಲಸ ವನ್ನು ಮಾಡುವುದಿಲ್ಲವೆಂಬ ನೀತಿಗೆ ಬದ್ಧರಾಗಿದ್ದೇವೆ.

2 ಸರ್ಕಾರದ ಆಡಳಿತದಲ್ಲಿ ಅಸತ್ಯ, ವಂಚನೆ, ಮೋಸ, ಮೊದಲಾದ ಅನೀತಿಗಳಿಗೆ ಅವಕಾಶ ಕೊಡುವುದಿಲ್ಲ.

3 ಜಾತಿ, ಮತ, ಪಂಥ—ಬಡವ, ಬಲ್ಲಿದ, ಎಂಬ ದಾಕ್ಷಿಣ್ಯಕ್ಕೆ ಕಟ್ಟು ಬೀಳುವುದಿಲ್ಲ.

4 ಸರ್ಕಾರಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ, ಸರ್ಕಾರ ಆಸ್ತಿ ಪಾಸ್ತಿಗಳನ್ನು ಕೊಳ್ಳುವ, ಮಾಡುವ ಹಾಗೂ ವೃದ್ಧಿಸುವ ವಿಚಾರದಲ್ಲಿ ನಿರ್ವಂಚನೆಯಿಂದ ನಡೆಯುತ್ತೇವೆ.

5 ನಮ್ಮ ಅಧಿಕಾರವನ್ನು ದುರುಪಯೋಗಪಡಿಸುವುದಿಲ್ಲ; ನೀತಿಬಾಹಿರ ಕೆಲಸಗಳಿಗೆ ಪ್ರತ್ಯಕ್ಷ, ಪರೋಕ್ಷ ಸಮ್ಮತಿಸುವುದಿಲ್ಲ, ಅವಕಾಶ ಕೊಡುವುದಿಲ್ಲ.

6 ಸರ್ಕಾರದ ಆಡಳಿತಕ್ಕೆ ಕುಂದು ತರುವಂಥ ಪ್ರಾಯವಾದ ಯಾವುದೇ ವಿಧವಾದ ಸಂಭಾವನೆ ಗಳನ್ನು ಪ್ರಯತ್ನ ಅಥವಾ ಅಪ್ರಯತ್ನ ಪೂರ್ವಕವಾಗಿಯೂ ಸ್ವೀಕರಿಸುವುದಿಲ್ಲ.

7 ದೇಶಕ್ಕೆ ಅನ್ಯಾಯವಾಗುವ ಕಾರ್ಯಕ್ರಮಗಳನ್ನು ಕೈಕೊಳ್ಳುವುದಿಲ್ಲ; ಅಕ್ರಮ ಮಾರ್ಗ ಗಳಿಂದ ಜನತೆಗೆ ದ್ರೋಹ ಬಗೆಯುವುದಿಲ್ಲ.

8 ಕಾಯಾ, ವಾಚಾ, ಮನಸಾ, ತ್ರಿಕರಣ ಪೂರ್ವಕ ಆಡಳಿತ ನಡೆಸಲು ವಚನಬದ್ಧ ರಾಗಿದ್ದೇವೆ. ಇದಕ್ಕೆ ತಪ್ಪಿದಲ್ಲಿ ಅಧಿಕಾರ ತ್ಯಜಿಸಲು ಸಿದ್ಧರಿದ್ದೇವೆ.

ಈ ಅಷ್ಟ ಸಂಹಿತೆಯನ್ನು ಆದರ್ಶವಾಗಿಟ್ಟುಕೊಂಡು ಸರ್ಕಾರದ ಆಡಳಿತ ನಡೆಸಲೆಂತಲೂ,

'ಏಕಃ ಪಾಪಾನಿ ಕುರುತೇ। ಫಲಂ ಭುಂಕ್ತೇ ಮಹಾಜನಾಃ ।।

ಅಂದರೆ ಒಬ್ಬರು ಮಾಡಿದ ಪಾಪದ ಫಲವನ್ನು ಮಹಾಜನತೆ ಅನುಭವಿಸಬೇಕಾಗುತ್ತದೆ, ಎಂಬು ದಾಗಿ ಗೀತಾವಾಕ್ಯವನ್ನು ಸರ್ಕಾರ ಸ್ಮರಣೆಯಲ್ಲಿಟ್ಟುಕೊಳ್ಳಬೇಕೆಂತಲೂ ಅಪೇಕ್ಷಿಸಿ, ಈ ಬೇಡಿಕೆ ಗಳನ್ನು ಅನುಮೋದಿಸುತ್ತೇನೆ.

ಶ್ರೀ ಎಸ್. ಎಸ್. ಶೆಟ್ಟರ್ (ಹುಬ್ಬಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ಆಡಳಿತದಲ್ಲಿ ಲಂಚ ಬಹಳವಾಗಿದೆ ಎಂದು ಅನೇಕರು ಹೇಳುತ್ತಿದ್ದಾರೆ. ಆದರೆ ಒಂದು ಸಂತೋಷದ ಸಂಗತಿ ಯೇನೆಂದರೆ, ಲಂಚ ಕೊಟ್ಟರೆ ಕೆಲಸವಾಗುತ್ತದೆ ಎಂಬುದು. ವಿಷಾದದಿಂದಲಾದರೂ ಇದನ್ನು ಹೇಳಬೇಕಾಗುತ್ತದೆ. ಇನ್ನುಮುಂದೆ ಇನ್ನೂ ಎಂಥ ಪರಿಸ್ಥಿತಿ ಬರಬಹುದೋ, ಇನ್ನೇನಾದರೂ ದಾರಿ ಹುಡುಕುವರೋ ಎಂಬ ಭಯವಿದೆ. ಇದಕ್ಕೆ ಒಂದು ಸೂಚನೆ ಕೊಡುತ್ತೇನೆ. ಒಬ್ಬ ಪೋಲೀಸು ಅಧಿಕಾರಿಯನ್ನು ಭೆಟ್ಟಿಯಾದಾಗ ಅವರು ಒಂದು ಸತ್ಯವಾದ ಮಾತನ್ನು ಹೇಳಿದರು. ಕೆಲವು ಪುಢಾರಿಗಳು ತಮ್ಮ ಕಡೆ ಬರುತ್ತಾರೆ, ಅವರು ಬರುವಾಗ ಜನರಿಂದ ಅವರು ಲಂಚ ಪಡೆದು ಬರುವುದರಿಂದ ತಾವೇನೂ ಮಾಡುವಹಾಗಿಲ್ಲ ತಮ್ಮದೂ ಅವರೇ ಪಡೆದುಕೊಂಡುಬಿಡುತ್ತಾರೆ, ತಾವೇನೂ ಮಾಡುವಂತಿಲ್ಲ ಎಂದು ಹೇಳಿದರು. ಈ ಲಂಚರುಷುವತ್ತು ಎಲ್ಲಿ ಪ್ರಾರಂಭವಾಯಿ ತೆಂದು ತಿಳಿದುಕೊಳ್ಳುವುದು ಅದಕ್ಕೆ ಅವಕಾಶವಿಲ್ಲದಂತೆ ಮಾಡುವುದು ಬಹಳ ಕಷ್ಟ. ಇದಲ್ಲದೆ ಲಂಚದ ಜೊತೆಗೆ ಜಾತೀಯತೆಯ ಭ್ರಷ್ಟಾಚಾರ ಬೇರೆ ಇದೆ. ಇದನ್ನು ಹೋಗಲಾಡಿಸಬೇಕು. ಲಂಚದ ಹಾವಳಿಗಿಂತ ಜಾತೀಯತೆಯ ಹೊಲಸು ಕಠಿಣವಾಗಿದೆ, ಅದು ಸಮಾಜ ಕಕ್ಕಾಬಿಕ್ಕಿಯಾಗು ವಂತೆ ಮಾಡಿದೆ. ಈ ದೃಷ್ಟಿಯಿಂದ ರೆವೆನ್ಯೂ ಖಾತೆ, ಪೋಲೀಸು ಖಾತೆ ಅಥವಾ ಯಾವುದೇ ಖಾತೆ ತೆಗೆದುಕೊಂಡರೂ ಕೂಡ ಲಂಚ ಮತ್ತು ಜಾತೀಯತೆಯ ಭ್ರಷ್ಟಾಚಾರಗಳನ್ನು ಸರಕಾರ ಇಂದು ಯಾವ ರೀತಿಯಿಂದ ತೊಲಗಿಸಿ ಸುಧಾರಣೆ ಮಾಡಲು ಸಾಧ್ಯವಾದೀತು ಎಂದು ಕಳವಳವಾಗುತ್ತಿದೆ.

ಇನ್ನು ಕಾಂಗ್ರೆಸ್ ಆಡಳಿತದ ವಿಚಾರ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಸಾಮಾನ್ಯ ಆಡಳಿತ ಸುಧಾರಿಸಬಹುದು ಎಂಬ ಆಸೆಯಿತ್ತು. ಏಕೆಂದರೆ, ಮಹಾತ್ಮಾಜಿಯವರು ಕಟ್ಟಿದ ಸಂಸ್ಥೆಯ ಹಿಂಬಾಲಕರು ಅಧಿಕಾರಕ್ಕೆ ಬಂದರೆ ಪರಿಸ್ಥಿತಿ ಸುಧಾರಿಸಬಹುದು ಎಂದಿದ್ದರೆ ಇಂದು ಸೇರಿಗೆ ಸವಾ ಸೇರಾಗಿದೆ. ಯಾವ ಖಾದಿ ಬೋರ್ಡು ಅಲ್ಲಿನ ನಷ್ಟ, ಭ್ರಷ್ಟಾಚಾರ ಕೆಲವು ಕಡೆ ಮನೆಮಾತಾಗಿವೆ. ಕೆಲವು ಸಿಬ್ಬಂದಿ ವಿಚಾರ ಇಂದು ಹೇಳುವಂತಿಲ್ಲ. ಇನ್ನು ನ್ಯಾಯಾಲಯಗಳಲ್ಲಿ ನೋಡಿದರೆ ಕಾರ ವಾರದಲ್ಲಿ ಒಂದು ವಿಚಿತ್ರ ಪ್ರಸಂಗ ಜರುಗಿತೆಂದು ಕೆಲವರು ಹೇಳುತ್ತಾರೆ. ಕೆಲವರು ಕ್ಲಾರ್ಕು ಗಳನ್ನು ಆಡಳಿತವರ್ಗಕ್ಕೆ ನೇಮಕ ಮಾಡುವಾಗ ಒಬ್ಬ ಶಿರಸ್ತೇದಾರ ಒಂದೆರಡು ನೂರು ತೆಗೆದು

(ಶ್ರೀ ಎಸ್. ಎಸ್. ಶೆಟ್ಟರ್)

ಕೊಂಡು ನ್ಯಾಯಾಧೀಶರ ಕಣ್ಣಿಗೆ ಮಣ್ಣೆರಚಿ ಹಣ ಎತ್ತಿ ಹಾಕಿದನಂತೆ. ಇದು ಬೀದಿ ಮಾತಾಗಿದೆ ಎಂದು ಅಲ್ಲಿಯ ಸ್ಥಳೀಯ ಪತ್ರಿಕೆಯಲ್ಲಿ ವರದಿಯಾಗಿದೆ. ನ್ಯಾಯಾಂಗ ಇಲಾಖೆಯಲ್ಲೇ ಹೀಗಾದರೆ ಇನ್ನು ಉಳಿದ ಇಲಾಖೆಗಳ ವಿಚಾರ ಹೇಳುವಂತೆಯೇ ಇಲ್ಲ.

ಇನ್ನೊಂದು ಇಲಾಖೆಯ ವಿಚಾರ ವಿಚಿತ್ರವಾಗಿದೆ. ಹುಬ್ಬಳ್ಳಿಯಲ್ಲಿ ಒಂದು ವಿಚಿತ್ರ ಸಂಗತಿ ನಡೆಯಿತು. ಅಲ್ಲಿರುವ ರಿಜಿಸ್ಟ್ರಾರರು ಅವರ ಬಳಿಗೆ ಒಂದು ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಯವರು ತಮ್ಮ ಸೊಸೈಟಿಯನ್ನು ರಿಜಿಸ್ಟರು ಮಾಡಿಸುವುದಕ್ಕೆ ಹೋದಾಗ ನಿಮಗೆ ಭೂಮಿ ಇದೆಯೋ ಎಂದು ಕೇಳಿದರಂತೆ. ಭೂಮಿ ಪಡೆದು ಮನೆ ಕಟ್ಟುವುದಕ್ಕೆ ಸುಸಜ್ಜಿತರಾಗಿದ್ದರೆ ರಿಜಿಸ್ಟರು ಮಾಡುತ್ತೇವೆ ಎಂದು ಅವರು ಹೇಳಿದರಂತೆ. ಸರಕಾರ ಅಥವಾ ಸ್ಥಳೀಯ ಸಂಸ್ಥೆಗಳ ಬಳಿಗೆ ಹೋಗಿ ಭೂಮಿಯನ್ನು ಕೇಳಿದರೆ ಸೊಸೈಟಿಯನ್ನು ರಿಜಿಸ್ಟರು ಮಾಡಿಸಿಕೊಂಡು ಬಂದರೆ ಕೊಡುವುದಾಗಿ ಅವರು ಹೇಳಿದರಂತೆ. ಹೀಗಾದರೆ ಹೇಗೆ? ಭೂಮಿ ಇದ್ದ ಹೊರತು ರಿಜಿಸ್ಟರು ಮಾಡುವುದಿಲ್ಲ, ರಿಜಿಸ್ಟರು ಮಾಡಿದ ಹೊರತು ಭೂಮಿ ಕೊಡುವುದಿಲ್ಲ ಎಂದರೆ ಹೇಗೆ ಕೆಲಸಮಾಡಬೇಕು? ಹುಬ್ಬಳ್ಳಿಯಿಂದ ಒಬ್ಬರು ಇಂದು ಬಂದಿದ್ದರು, ಅವರಿಗೆ ಗ್ರಾಂಟು ಸಿಕ್ಕಿದೆ. ಆದರೆ ಅವರ ಸಂಘವನ್ನು ರಿಜಿಸ್ಟರು ಮಾಡಿಸಿದರೆ ಗ್ರಾಂಟನ್ನು ಕೊಡುವುದಾಗಿ ಹೇಳಿದರಂತೆ. ಇದರ ವಿಚಾರವೂ ನಾನು ಹೇಳಿದ ಸೊಸೈಟಿಯಂತೆ ಆಗುವುದೋ ಏನೋ ಗೊತ್ತಿಲ್ಲ. ಹೀಗಾದರೆ ಕೊನೆಗೆ ಸರಕಾರವೇ ಕೊಡಬೇಕಾಗುವುದೋ ಏನೋ. ಒಂದು ಇಲಾಖೆಗೂ ಇನ್ನೊಂದು ಇಲಾಖೆಗೂ ಸಹಕಾರ ಪರಸ್ಪರ ಅಂಡರ್‌ಸ್ಟ್ಯಾಂಡಿಂಗ್ ಇಲ್ಲದಿದ್ದರೆ ಜನರ ಗತಿಯೇನು?

ಇನ್ನೊಂದು ಉದಾಹರಣೆ ಇದೆ. ಧಾರವಾಡ ಜಿಲ್ಲೆಯಲ್ಲಿ ಕಲಘಟಗಿಯಲ್ಲಿ ಬತ್ತದ ಗಿರಣಿಗಳು ಬಹಳವಾಗಿವೆ. ಅಲ್ಲಿ ಹೆಲ್ತ್ ಇಲಾಖೆಯವರು ಒಂದು ಕಾನೂನು ಮಾಡಿ ಯಾವುದೇ ಗಿರಣಿಯು ಹಿತ್ತಲಿನಲ್ಲಾಗಲೀ ಮುಂಬಾಗಿಲ ಒಳಿವಾಗಲೀ ಇರಬಾರದೆಂದು ತಿಳಿಸಿದ್ದಾರೆ. ಬೆಂಕಿ ಹತ್ತಿ ಜನರಿಗೆ ಅಪಾಯವಾಗಬಹುದೆಂದು ಊರಿಗೆ ದೂರವಾಗಿ ಗಿರಣಿ ಇರಬೇಕೆಂದು ನಿರ್ಬಂಧ ಮಾಡಿದ್ದಾರೆ. ಆದರೆ ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳಿಗೂ ಹೆದರದ ಮನಸ್ಸು ಬಂದ ಕಡೆ ಬತ್ತದ ಗಿರಣಿಗಳನ್ನು ತೆರೆದಿದ್ದಾರೆ, ಕೇಳಿದರೆ ಕಾಂಗ್ರೆಸ್ಸಿನವರು ಮಾಡಿರುವುದನ್ನು ಕೇಳುವಂತಿಲ್ಲವೆಂದು ಸುಮ್ಮನಿರುವುದಾಗಿ ಹೇಳುತ್ತಾರೆ. ಅಲ್ಲಿರುವ ಪ್ರುಡಾರಿಗಳು ಜಿಲ್ಲಾಧಿಕಾರಿಗಳನ್ನು ಬೆದರಿಸಿ ಗಿರಣಿಗಳನ್ನು ಊರ ಮಧ್ಯದಲ್ಲಿ ಹಾಕಿದ್ದಾರೆ. ಹೀಗಾದರೆ ಗತಿಯೇನು? ಇಂಥ ಕೆಲಸ ನಡೆಯುತ್ತಿದೆ. ಇದು ಬಹಳವಾಗಿದೆ. ಇದರಿಂದ ಜನ ಕಕ್ಕಾಬಿಕ್ಕಿಯಾಗಿದ್ದಾರೆ. ಜನರನ್ನು ಕೇಳುವವರೇ ಇಲ್ಲದಂತಾಗಿದೆ. ಊರ ಮಧ್ಯೆ ಗಿರಣಿ ಹಾಕಿರುವ ಮನುಷ್ಯ ತನಗೆ ದೊಡ್ಡವರ ಬೆಂಬಲವಿರುವುದಾಗಿಯೂ, ಯಾರು ಅದನ್ನು ತೆಗೆಸುತ್ತಾರೋ ನೋಡೋಣ ಎಂದು ಛಾಲೆಂಜ್ ಮಾಡುತ್ತಾನೆ. ಸಾಮಾನ್ಯ ಆಡಳಿತದ ಗತಿ ಹೀಗಾದರೆ ಸರಕಾರದಲ್ಲಿ ವಿಶ್ವಾಸವಿಡಬೇಕೇ ಎಂಬ ಭಯ ಸಂಶಯ ಉಂಟಾಗುತ್ತಿದೆ. ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಸೂಕ್ತಕ್ರಮ ಕೈಕೊಳ್ಳಬೇಕು.

ಇನ್ನು ಪೋಲೀಸು ಖಾತೆ ತೆಗೆದುಕೊಂಡರೆ ಒಮ್ಮೆ ಪೋಲೀಸು ಸ್ಟೇಷನ್ನಿನಲ್ಲಿದ್ದ ಪೋಲೀಸಿನವನು ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಮನುಷ್ಯನನ್ನು ಕರೆದ. ಆತ ಗಾಬರಿಯಿಂದ ಹೋದ. ಆಗ ಒಂದು ಬೀಡಿ ಕೊಡು ಎಂದು ಪೋಲೀಸಿನವ ಕೇಳಿದ. ಬೀಡಿ ಇಲ್ಲ, ಸೀಗರೇಟಿದೆ ಎಂದು ಹೇಳಿದ. ಅದನ್ನೇ ಕೊಡು ಎಂದು ಪೋಲೀಸಿನವ ಕೇಳಿದನು. ಇಂಥ ಸಣ್ಣ ವಿಚಾರಗಳಿಗೆಲ್ಲಾ ಅಧಿಕಾರಿಗಳು ಪ್ರವೇಶ ಮಾಡಿದರೆ ನೀತಿ ಹೇಗಿರಬಹುದು, ಜನರು ಅಧಿಕಾರಿಗಳಲ್ಲಿ ಪ್ರಜಾಪ್ರಭುತ್ವದಲ್ಲಿ ಹೇಗೆ ವಿಶ್ವಾಸವಿಡಬಹುದು ಎಂಬುದು ವಿಚಾರ ಮಾಡಬೇಕಾದ ಸಂಗತಿಯಾಗಿದೆ.

ಇನ್ನೊಂದು ವಿಚಾರವನ್ನು ಮೊನ್ನೆಯಿಂದ ಪದೇ ಪದೇ ಹೇಳುತ್ತಿದ್ದೇನೆ. ಅದು ವಿಧಾನ ಸಭೆಗೆ ಸಂಬಂಧಪಟ್ಟಿದೆ. ಹೊರ ದೇಶದ ಒಬ್ಬ ಅಧಿಕಾರಿ ಬಂದು ಉದ್ಘಾಟನೆ ಮಾಡುವಾಗ ಇಡೀ ಈ ಸಭೆಯ ಸದಸ್ಯರು ಅಲ್ಲಿಗೆ ಹೋಗಬೇಕು, ಇಲ್ಲಿ ಸಭೆ ನಿಲ್ಲಿಸಿ ಈ ಕಾರ್ಯ ನೆರವೇರಿಸಬೇಕು ಎಂದು ಹೇಳುವುದು ಸರಿಯಲ್ಲ. ಶ್ರೀ ನಾಗಪ್ಪನವರು ಇದರ ಬಗ್ಗೆ ಹೇಳಿದರು, ಹೊರಗಡೆ ದೇಶಗಳ ಪ್ರಮುಖರು ಬಂದಾಗ ಪಾರ್ಲಿಮೆಂಟನ್ನು ಮುಂದುವರೆಸಬೇಕು. ಬಂದವರನ್ನು ಭೆಟ್ಟಿಯಾಗಬೇಕು ಎಂದು ಯಾವಾಗ ಬೇಕಾದರೂ ಹೇಳಬಹುದು. ಇಂಥ ಪರಿಸ್ಥಿತಿ ಇದೆ. ಅಸೆಂಬ್ಲಿಯಲ್ಲಿ ಜನರ ಕಾರ್ಯ ಮಾಡದೆ ಹೀಗೆಲ್ಲಾ ಕೆಲಸ ನಿಲ್ಲಿಸಿಹೋದರೆ ತಪ್ಪಾದೀತು ಎಂಬುದನ್ನು ಸರಕಾರದ ಗಮನಕ್ಕೆ ತರುತ್ತೇನೆ. ಇಂದು ಶ್ರೀ ಬಂಗಾರಪ್ಪನವರು ಇರಬಹುದು, ಮೇಲ್ಮನೆ ಆವಶ್ಯಕತೆಯಿಲ್ಲವೆಂದು ಅನೇಕ ಕಡೆ ಪ್ರಸ್ತಾಪ ಮಾಡುತ್ತಿದ್ದಾರೆ, ಅದರ ಆವಶ್ಯಕತೆ ಇಲ್ಲ ಎಂದು ಘಂಟಾಘೋಷ

ವಾಗಿ ಹೇಳಬೇಕಾಗಿದೆ. ಅದಕ್ಕಾಗಿ ವಿಶೇಷ ಹಣ ಖರ್ಚುಮಾಡುವುದಕ್ಕೆ ಬದಲಾಗಿ ಒಂದು ಹೊಸ ನೀತಿಯನ್ನನುಸರಿಸುವುದು ಒಳ್ಳೆಯದು, ಇಂದು ಕೆಲವು ಲಿಟರರಿ ಪರ್ಸನ್ಸ್, ಸ್ಪೆಷಲೈಸ್ಡ್ ಪರ್ಸನ್ಸ್ ಮುಂತಾದವರಿಗೆ ಪ್ರಾತಿನಿಧ್ಯ ಕೊಡಬೇಕಾದರೆ ನಾಮಿನೇಷನ್‌ಗೆ ಈಗ ಇಲ್ಲಿ ಅವಕಾಶ ವಿರುವಂತೆ ಈ ಸಭೆಗೇ ಬೇಕಾದವರನ್ನು ನೇಮಕ ಮಾಡಬಹುದು. ಹಾಗೆ ಮಾಡಿ ಬೇಕಾದವರಿಗೆ ಸ್ಥಾನ ಕೊಡಬಹುದು. ಹಾಗೆ ಮಾಡಿ ಮಿತವ್ಯಯವನ್ನು ಸಾಧಿಸಬಹುದು. ಇದರ ಜೊತೆಗೆ ಮಾನ್ಯ ಸದಸ್ಯರು ಕೊಟ್ಟಿರುವ ಸೂಚನೆಗಳನ್ನು ಕೂಡ ನಾನು ಗ್ರಹಿಸಿದ್ದೇನೆ. ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

4-30 P.M.

† ಶ್ರೀ ಜಿ. ತಮ್ಮಣ್ಣ (ಕುಣಿಗಲ್).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇರುವಂತಹ ಸಾಮಾನ್ಯ ಆಡಳಿತ ಮತ್ತು ನ್ಯಾಯಾಂಗದ ಬೇಡಿಕೆಗಳನ್ನು ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಆಡಬೇಕೆಂದು ಅಪೇಕ್ಷೆಪಡುತ್ತೇನೆ. ಸಾಮಾನ್ಯ ಆಡಳಿತದ ವಿಷಯದಲ್ಲಿ ಇದುವರೆಗೂ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಅದರ ಬಗ್ಗೆ ನಾನೂ ಎರಡು ಮಾತನಾಡಬೇಕೆಂದು ಇಚ್ಛೆಪಟ್ಟಿದ್ದೇನೆ. ಇವತ್ತು ಆಡಳಿತ ಎಷ್ಟುಮಟ್ಟಿನ ಮಟ್ಟದಲ್ಲಿದೆ ಎಂದರೆ, ನಮ್ಮ ಪಕ್ಷದ ಸದಸ್ಯರೂ ಹೇಳಿದ್ದಾರೆ, ವಿರೋಧ ಪಕ್ಷದ ಸದಸ್ಯರೂ ಹೇಳಿದ್ದಾರೆ. ಆಡಳಿತ ಕುಸಿಯುತ್ತಾ ಇದೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ನನ್ನ ಭಾವನೆ. ಆಡಳಿತ ವರ್ಗಕ್ಕೆ ದೇಶಾಭಿಮಾನ ಇಲ್ಲ, ಸಮಾಜ ಉದ್ಧಾರವಾಗಬೇಕೆಂಬ ಒಂದು ಯೋಚನೆ, ಒಂದು ಮನೋಭಾವ ಇಲ್ಲ, ಅವರಲ್ಲಿ ಸ್ವಾರ್ಥ ಅಭಿಮಾನ ಬೆಳೆದು ದೇಶದ ಪ್ರಗತಿ ಹಾಗೂ ಆಳಿತಕ್ಕೆ ಅಡ್ಡಿ ತರುತ್ತಾ ಇದ್ದಾರೆ ಎಂದರೆ ತಪ್ಪಾಗಲಾರದು. ಪ್ರತಿಸಾರಿ ನೋಡಿದರೂ ನಮ್ಮ ದೇಶದಲ್ಲಿ ಐ.ಎ.ಎಸ್. ಆಫೀಸರ್ ಮತ್ತು ಎಂ.ಎ.ಎಸ್. ಆಫೀಸರುಗಳ ಸಂಖ್ಯೆ ಜಾಸ್ತಿಯಾಗಿದೆ. ಅವರು ಇರುವುದು ಆಡಳಿತಕ್ಕೆ ಒಳ್ಳೆಯದು ಎಂದು ಅಭಿಪ್ರಾಯಪಟ್ಟಿದ್ದಾರೆ, ಆ ರೀತಿ ಮಾಡುತ್ತಾ ಇದ್ದಾರೆ. ಅವರಿಗೂ ಈ ಶಾಸನಾಂಗಕ್ಕೂ ಕಾರ್ಯಾಂಗಕ್ಕೂ ಹೊಂದಾಣಿಕೆ ಇಲ್ಲವೇನೋ ಎಂದು ಭಾಸವಾಗುತ್ತಾ ಇದೆ. ಇತ್ತೀಚೆಗೆ ಈ ಮನೆಗೆ ನಾನು ಹೊಸ ಸದಸ್ಯ, ಮಾನ್ಯ ಮುಖ್ಯ ಮಂತ್ರಿಗಳು ಈ ಶಾಸನಾಂಗವನ್ನು ಇಟ್ಟುಕೊಂಡಿದ್ದರು, ಅವರು ಈ ಊರು ಬಿಡುತ್ತಾರೆ ಅನ್ನುವಂತಹ ಪರಿಸ್ಥಿತಿ ಬಂದಿದೆ ಅಂತಲೋ ಏನೋ ಈ ಜವಾಬ್ದಾರಿಯನ್ನು ಒಂದು ರೀತಿಯಲ್ಲಿ ಮಾತನಾಡುವುದಕ್ಕೆ ಇಟ್ಟುಕೊಂಡಂತೆ ಆಗಿದೆಯೋ ಹೊರತು ಇನ್ನೇನೂ ಅದಂತೆ ಕಾಣುತ್ತಿಲ್ಲ. ಹಿಂದಿನ ವರ್ಷ ಮಾನ್ಯ ಶ್ರೀಮಾನ್ ನಿಜಲಿಂಗಪ್ಪನವರು ಕಾನೂನಿನಲ್ಲಿ ಬಹಳ ಕಠಿಣತೆ ಇದೆ ಅವರಿಂದ ನಮಗೆ ಬಹಳ ಲುಕ್ಸಾನು. ಏನಾದರೂ ಮಾಡಿ ಒಂದು ತಿದ್ದುಪಡಿ ತರಬೇಕೆಂದು ದೇಶಾದ್ಯಂತ ಯೋಚನೆ ಮಾಡುತ್ತಾ ಇದ್ದೇವೆ, ಇಷ್ಟರಲ್ಲೇ ಬರುತ್ತದೆ ಎಂದು ಹೇಳಿದರು ; ಇದು ವರೆಗೂ ಕೂಡ ಅದು ಏಕೆ ಬರಲಿಲ್ಲವೋ ನನಗೆ ಅರ್ಥವಾಗುತ್ತಿಲ್ಲ. ಅದನ್ನು ಮಾಡುವುದಕ್ಕೆ ಆಗದಿದ್ದರೂ ಕೂಡ ದೇಶಾಭಿಮಾನ, ಸಮಾಜ ಇದರ ಬಗ್ಗೆ ಅವರಿಗೆ ಒಂದು ಟ್ರೈನಿಂಗ್ ಸ್ಕೂಲ್ ನ್ನಾದರೂ ತೆರೆದು ಅವರಲ್ಲಿ ಒಳ್ಳೆಯ ಕೆಲಸ ಮಾಡುತ್ತೇನೆ ಎಂಬ ಮನೋಭಾವ ಬೆಳೆದು ಬರುವಂತೆ ಮಾಡಬೇಕು. ಅದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತಾ ಇದ್ದೇನೆ. ಇವತ್ತು ನಮ್ಮ ದೇಶದ ಆಡಳಿತ ಅವರ ಕೈಯಲ್ಲಿ ಇದೆ. ಕಾಂಗ್ರೆಸ್‌ನವರು ಹೇಳಿದರೆ ಅವರು ಮಾಡುತ್ತಾರೆ ಎಂದು ನಮ್ಮ ವಿರೋಧಪಕ್ಷದ ಸದಸ್ಯರು ಹೇಳಿದರು, ವಿರೋಧ ಪಕ್ಷದ ಸದಸ್ಯರು ಹೇಳಿ ಮಾಡಿಸಿಕೊಂಡು ಬಂದಿರುವಂತಹ ಕೆಲಸಗಳೂ ಬೇಕಾದಷ್ಟು ಇವೆ. ಅವರು ಹೇಳಿದಂತೆಯೂ ಕೂಡ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಅನೇಕ ಕೆಲಸಗಳನ್ನು ಅವರೂ ಮಾಡಿಸಿ ಕೊಂಡಿದ್ದಾರೆ. ಇವತ್ತು ಲಂಚ ಜಾಸ್ತಿಯಾಗಿದೆ ಎಂದರೆ ದೇಶದಲ್ಲಿರುವಂತಹ ಅಧಿಕಾರ ವರ್ಗ ದವರಿಂದಲೇ ಅದು ಪ್ರಾರಂಭವಾಗಿದೆ. ಸರ್ಕಾರವನ್ನು ಟೀಕೆ ಮಾಡಬೇಕಾಗಿದ್ದರೆ ಅಧಿಕಾರ ವರ್ಗದವರೇ ಕಾರಣ, ಅವರಿಂದಲೇ ಈ ಸರ್ಕಾರದ ಆಡಳಿತ ಯಂತ್ರ ಇವತ್ತು ಕುಸಿದಿದೆ ಆಡಳಿತ ಯಂತ್ರ ಕೆಟ್ಟುಹೋಗಿದೆ. ಅದನ್ನು ಶುದ್ಧಿಮಾಡಬೇಕಾಗಿದ್ದರೆ ಮಾರ್ಪಾಡು ಮಾಡಬೇಕಾಗಿದ್ದರೆ ಆಡಳಿತ ಸುಧಾರಣೆಯಿಂದ ಪರಿಪಕ್ವಜ್ಞಾನ ಸಂಪಾದನೆ ಮಾಡತಕ್ಕ ಶಕ್ತಿ ಕೊಡಬೇಕು, ಅದು ಸರಿಹೋಗದಿದ್ದರೆ ದೇಶದ ಆಡಳಿತ ಕೆಟ್ಟುಹೋಗುತ್ತದೆ ಎಂದು ನನ್ನಭಾವನೆ. ಇವತ್ತು ನಮ್ಮ ದೇಶದಲ್ಲಿ ಏನಾದರೂ ಕೂಡ ಜನತೆಯಲ್ಲಿ ಒಂದು ಕ್ರಾಂತಿ ಮನೋಭಾವ ಬೆಳೆಯಬೇಕಾದರೆ ಆಡಳಿತ ಯಂತ್ರವೇ ಕಾರಣ ಎಂದು ಹೇಳುತ್ತೇನೆ. ಇದು ಕೆಳದರ್ಜೆಯಿಂದ ಹಿಡಿದು ಉನ್ನತ ದರ್ಜೆಯವರೆಗೂ ಇರತಕ್ಕ ಆಡಳಿತ ಯಂತ್ರವನ್ನು ನಡೆಸತಕ್ಕ ಅಧಿಕಾರಿಗಳು ದೇಶದ ಒಂದು ಧರ್ಮ ಒಂದು ಆಡಳಿತ ನಿಷ್ಠೆಯನ್ನು ಇಟ್ಟುಕೊಂಡಿಲ್ಲ. ಅಲ್ಲದೆ ತಮ್ಮ ಕೈಕೆಳಗೆ ಕೆಲಸ ಮಾಡುವಂತಹ ನೌಕರರನ್ನೂ ಸಹ ಸರಿಯಾಗಿ ನೋಡುತ್ತಿಲ್ಲ. ಅವರು ತಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡಿ

(ಶ್ರೀ ಜಿ. ತಮ್ಮಣ್ಣ)

ಕೊಳ್ಳಬೇಕು. ಮತ್ತು ಅದೇ ರೀತಿ ಕೆಳದರ್ಜೆ ನೌಕರರೂ ಸಹ ಸರಿಯಾಗಿ ಕೆಲಸ ಮಾಡುವಂತೆ ಅವರನ್ನು ಸರಿಪಡಿಸಿಕೊಳ್ಳಬೇಕು, ಅವರಿಂದ ಕೆಲಸ ತೆಗೆದುಕೊಳ್ಳಬೇಕು ಅನ್ನುವ ಮನೋಭಾವ ಕೂಡ ಅವರಲ್ಲಿ ಬೆಳೆಯುತ್ತಾ ಇಲ್ಲ. ಅವರನ್ನು ಕನಿಷ್ಠಭಾವನೆಯಿಂದ ಕಾಣುತ್ತಾ ಇರುವುದಲ್ಲವೆ ಅದರ ಪರಿಣಾಮವಾಗಿ ಆಡಳಿತ ಯಂತ್ರ ಕೆಟ್ಟುಹೋಗಿದೆ. ಇದನ್ನು ಆದಷ್ಟುಮಟ್ಟಿಗೆ ತಿದ್ದಿ ಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇವತ್ತು ಲಂಚರುಷುವತ್ತು ಈ ದೇಶದಲ್ಲಿ ಜಾಸ್ತಿಯಾಗಿದೆ ಅಂತ ಹೇಳಿ ನಾನಾ ಕಡೆ ಕೂಗು ಕೇಳಿಬರುತ್ತಾ ಇದೆ. ಇಂಗ್ಲೀಷರ ಕಾಲದಲ್ಲಿ, ರಾಮರಾಜ್ಯದ ಕಾಲದಲ್ಲೂ ಕೂಡ ಅದು ಇತ್ತು ಎಂದು ಅನೇಕ ಸದಸ್ಯರು ಹೇಳಿದ್ದಾರೆ. ಕೊಡುವವನು ತೆಗೆದುಕೊಳ್ಳುವವನು ಇಬ್ಬರಿಂದಲೂ ಕೂಡ ಇದು ಏರ್ಪಟ್ಟಿರತಕ್ಕ ವ್ಯವಸ್ಥೆಯಾಗಿದೆ. ಇದಕ್ಕಿಂತಲೂ ಕೂಡ ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಲ್ಲಾ ಅಂತ ಅನ್ನುವಂತೆ ಉನ್ನತ ಅಧಿಕಾರಿಗಳೇ ಇದಕ್ಕೆಲ್ಲಾ ಕಾರಣರು ಅಂತ ಅಂದರೆ ತಪ್ಪಾಗಲಾರದು. ಇವತ್ತು ವಿಜಿಲೆನ್ಸ್ ಕಮಿಷನ್ ಅಂತ ಮಾಡಿದ್ದೀರಿ. ಪೋಲೀಸ್ ಇಲಾಖೆ ಯನ್ನು ನೇಮಕ ಮಾಡಿದ್ದೀರಿ. ಈ ಪೋಲೀಸ್ ಇಲಾಖೆಯೇ ಈ ಲಂಚಗುಳಿತನಕ್ಕೆ ಪ್ರಾಮುಖ್ಯತೆ ಕೊಡತಕ್ಕ ಇಲಾಖೆ, ಅವರೇ ಲಂಚ ತಿನ್ನುತ್ತಾರೆ ಎಂದು ಹೇಳುತ್ತಾರೆ. ಅಂತಹವರನ್ನು ಪ್ರಮೋಷನ್ ಕೊಟ್ಟು ಕಳುಹಿಸಿ ವಿಜಿಲೆನ್ಸ್‌ಗೆ ಹಾಕಿದರೆ ಅವರಿಗೆ ಪ್ರಮೋಷನ್ ಕೊಟ್ಟ ಹಾಗೆ ಆಯಿತೇ ಹೊರತು ಲಂಚರುಷುವತ್ತು ಕಡಿಮೆ ಮಾಡಿದಂತಾಗಲಿಲ್ಲ. ಅನೇಕ ಜನರು ಮತ್ತು ಸದಸ್ಯರು ಹೇಳಿದರು, ನಮಗೆ ಸಂಭಾವನೆಯನ್ನೇ ಕೊಡಬೇಡಿ, ಸಬ್‌ರಿಜಿಸ್ಟ್ರಾರ್ಸ್ ಆಫೀಸು ಮತ್ತು ಆರ್.ಟಿ.ಓ. ಆಫೀಸುಗಳನ್ನು ಕೊಟ್ಟುಬಿಡಿ ನೀವು ಎಷ್ಟು ಹೇಳುತ್ತೀರೋ ಅಷ್ಟು ರೂಪಾಯಿ ಗಳನ್ನು ಕೊಟ್ಟುಬಿಡುತ್ತೇವೆ ಎಂದು, ನಿಜ. ಅನೇಕ ಇಲಾಖೆಗಳಲ್ಲಿ ಮಾಮೂಲು ಹೆಚ್ಚಿ ಸರ್ಕಾರಕ್ಕೆ ಅವರು ಕೀರ್ತಿ ಬರುವಂತಹ ಕೆಲಸವನ್ನು ಮಾಡುತ್ತಾ ಇಲ್ಲ. ಅಧಿಕಾರಿಗಳು ಸಿಕ್ಕಾಪಟ್ಟೆ ಮನೋಭಾವದಿಂದ ವರ್ತಿಸುತ್ತಾ ಇರುವಂತಹ ಪರಿಸ್ಥಿತಿ ಕಾಣುತ್ತಾ ಇದೆ. ಇದು ಎಲ್ಲರೂ ವ್ಯಥೆ ಪಡಬೇಕಾದ ವಿಚಾರ. ಈ ಆಡಳಿತ ಯಂತ್ರವನ್ನು ಪರಿಶುದ್ಧ ಮಾಡಲಿಕ್ಕೆ ಸರ್ಕಾರ ತಕ್ಷಣ ಯೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಮತ್ತು ಲೆಜಿಸ್ಲೇಷನ್ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಇವತ್ತು ಮಾನ್ಯ ಮಂತ್ರಿಗಳು ಹೆಚ್ಚಿನ ವೈಭವದಿಂದ ಮೆರೆ ಯುತ್ತಾ ಇದ್ದಾರೆ ಎಂದು ಅನೇಕ ಸದಸ್ಯರು ಟೀಕೆ ಮಾಡಿದರು, ಇಂಗ್ಲೀಷರ ಕಾಲದಲ್ಲೂ, ರಾಜ ಮಹಾರಾಜರ ಕಾಲದಲ್ಲೂ ಇದ್ದ ವೈಭವಕ್ಕೂ ಇವತ್ತಿನ ವೈಭವಕ್ಕೂ ಹೋಲಿಸಿ ನೋಡಿದರೆ ನಮ್ಮ ಮಂತ್ರಿಗಳು ಖರ್ಚು ಮಾಡುತ್ತಾ ಇರುವ ಹಣ ಬಹಳ ಕಡಿಮೆ ಎಂದರೆ ತಪ್ಪಾಗಲಾರದು. ಇವತ್ತು ನಾವು ಗಾಂಧಿವಾದಿಗಳು ಎಂದಮೇಲೆ ಅದನ್ನೂ ಕೂಡ ಇವತ್ತು ನಾವು ಕಡಿಮೆ ಮಾಡಿಕೊಳ್ಳ ಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಶಾಸಕರು ಉಳಿದುಕೊಳ್ಳುವುದಕ್ಕೆ ಸರಿಯಾದಂತಹ ವ್ಯವಸ್ಥೆ ಇಲ್ಲ. ಅಲ್ಲೊಬ್ಬರು ಇಲ್ಲೊ ಬ್ಬರು ಉಳಿದುಕೊಳ್ಳುವಂತಹ ಪರಿಸ್ಥಿತಿ ಇದೆ. ಆದ್ದರಿಂದ ಶಾಸಕರಿಗೆ ಇಳಿದುಕೊಳ್ಳುವುದಕ್ಕೆ ಉತ್ತಮವಾದ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಅವರ ಗಮನಕ್ಕೆ ತರುತ್ತಾ ಇದ್ದೇನೆ. ಲೆಜಿಸ್ಲೇಷನ್ ವಿಷಯದಲ್ಲಿ ಖರ್ಚು ಮಾಡುವಂತಹ ಹಣ ಮತ್ತು ಅದಕ್ಕೆ ಇಟ್ಟಿರು ವಂತಹ ಸಿಬ್ಬಂದಿ ಬಹಳ ಜಾಸ್ತಿ ಇದೆ, ಅದನ್ನು ಕಡಿಮೆ ಮಾಡಬೇಕು, ಮಿತವ್ಯಯ ಮಾಡಬೇಕು. ದೇಶದಲ್ಲಿ ಕೆಲಸಕಾರ್ಯಗಳು ಇಲ್ಲದೆ ನಿರುದ್ಯೋಗಿಗಳಾಗಿರುವಂತಹ ಜನರ ಸಮಸ್ಯೆಯನ್ನು ಬಗೆಹರಿಸಬೇಕೆಂದಿದ್ದೀರಿ. ಈ ಬಾಬಿನಲ್ಲಿ ಆದಷ್ಟುಮಟ್ಟಿಗಾದರೂ ಕೂಡ ಕಡಿಮೆ ಮಾಡಿ ಮಾದರಿ ಯಾಗಬೇಕೆಂದು ಈ ಸಂದರ್ಭದಲ್ಲಿ ಹೇಳಿ ನ್ಯಾಯಾಂಗ ಇಲಾಖೆಯ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಅನೇಕ ವರ್ಷಗಳಿಂದ ನಮ್ಮ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿಗೆ ಹೆಚ್ಚಿನ ತರಹದ ಕೇಸುಗಳು ಬರುತ್ತಿವೆ. ಅಲ್ಲಿಗೆ ನ್ಯಾಯಾಸ್ಥಾನವನ್ನು ಕೊಡುತ್ತೇವೆ ಎಂದು ಹಿಂದಿನ ಸರ್ಕಾರದವರೂ ಕೂಡ ಹೇಳಿದ್ದರು, ಈಗಿನ ಸರ್ಕಾರದವರೂ ಕೂಡ ಕೊಡುತ್ತೇವೆ ಎಂದು ಹೇಳಿದ್ದರು, ಇದುವರೆಗೂ ಆಗಿಲ್ಲ. ಈಗಲಾದರೂ ಕೂಡ ನ್ಯಾಯಾಸ್ಥಾನವನ್ನು ಕುಣಿಗಲ್‌ಗೆ ಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಂಡು ಈ ದಿವಸ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಸನ್ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. B. SAYANAK (Belgaum).—Mr. Speaker Sir, I rise to oppose the demands tabled by the Hon'ble Minister for Law and Parliamentary

Affairs and also by the Chief Minister before this august House. The administration must be efficient, impartial and above corruption. But now a days these things are lacking in the administration of Mysore State. One day I wanted to ring up to the Deputy Commissioner, Belgaum. I phoned him at 9 A.M. The phone was received by a peon. The peon told me that the Deputy Commissioner is making pooja. After 9-30 A.M. again I phoned the Deputy Commissioner. The same peon recevied the phone and he told me the Saheb is taking bath. Again at 10-30 A.M. I rang up the Deputy Commissioner. The same peon received the phone and told me the Saheb has gone to Office. I went to the Office and told the Deputy Commissioner that 'I tried thrice to contact you on the phone, but you had not received the phone.' He told me categorically, 'I am not bound to receive your phone at my residence.' I sthis the way to behave with the M.L.A ? If that is so, what would be the treatment these Officers would give to the general public ?

Sir, 13 call-women were removed by the Administrator. I approached the Divisional Commissioner. He told me 'I am not the Administrator.' I said : 'I know it, you are above the administrator, that is why I approached you.' This is the way they behave with me. Again take the police officers, see how they behave with the public. One day I had gone to Khanapur for court work. While coming back to Belgaum, there was a truck accident, traffic was jamme. I came to Belgaum and rang up the S. P., Belgaum and told him that there is a truck accident near Desure and traffic is jammbed. The S. P. told me : 'I am not the traffic Sub-Inspector.' Again last year, when the Mahajan Commission Report was out, my friends burnt the report of Mahajan Commission ; the police arrested 15 persons. I asked the S. P. on phone ; that the commotion is created by the police by arresting these persons. He told me to come to the office. I straightaway went to his office and asked him 'why you have called me. you want to threaten me ; if you want to arrest me I am ready. If you want to beat me, I am willing.' He told me that 'I am not of that type.' All these officers are behaving improperly in the border area because we are Maharashtrians fighting for Maharashtra.

About judiciary in Belgaum, before States Reorganisation in Bombay State, there were three civil Judges. Now there are only 2 civil judges. So there are 2,000 appeals pending. 250 suits, special darkhasts are pending before the civil judges for more than 10 years. Is this way to give justice to the general public ? I humbly request through you Sir, the Minister concerned, should appoint one more civil judge in Belgaum. Three stenographers are waited in three Courts and judges who have no stenographers are not giving Judgments for one year. So the work of these three judges is hampered.

Sir, there is no police prosecutors in taluka court, Belgam where Marathi is the predominant language. Majority of the cases are in

(Sri B. B. Sayanak)

Marathi. On police prosecutor in Bailhongal has to come to Belgaum on Friday and Saturday and conduct cases here. But that man does not know Marathi. Therefore, you must appoint a police prosecutor knowing Marathi. There is not a single Marathi police prosecutor or judge appointed in the border area since organisation. We are not given any facility by the Mysore Government up till now.

I had been to Kurikuppi for some time. There is a Sheep-Breeding Centre at that place. There are more than 300 sheep. For more than five years, the wool is not auctioned. More than Rs. 10,000 wool is damaged. I asked the officer why it is so. He said to us that none of the persons has come forward to buy the wool.

There is a vaccine institute in Belgaum. When Belgaum was in Bombay State, this vaccine institute was run on the basis of no-profit no-loss. But now this Institute is working in loss. The net loss this year, is more than Rs. 58,000. Therefore, I submit that there must be no efficiency in the administration of Institute. We must put in charge of such persons who are honest and upright in the discharge of their responsibilities.

Then I say that Mysore Government has done injustice to Shirestedars clerk of the Courts and Nazars of the Bombay Karnatak area by modifying the equation of posts. They have been down-graded in Mysore State. Some of the affected persons have filed writ petitions in the High Court. So I request through you, Sir, that the Government should remove injustice done to these persons.

There is no shed for the witnesses in Belgaum to sit. So, I request the Government through you, Sir, to construct some sheds for the witnesses, because the witnesses are put to a great inconvenience. I request the Minister to give top priority to the construction of sheds in Belgaum and Khanapbr.

Sir, I request you through that the Government legal aid must be given for poor persons. The Law Commission of India has suggested that we must give some facilities to the poor people who are suffering in jails, without help.

Lastly Sir, I request that the Legislative Council must be abolished because it is a waste of public funds and it must be abolished, forthwith.

Thank you.

†ಶ್ರೀ ಎಸ್. ಕೆ. ಅಮೀನ್ (ಉಡುಪಿ).—ಸನ್ಮಾನ್ಯ ಸಭಾಪತಿಗಳೇ, ಈ ಹೊತ್ತು ಈ ಮಾನ್ಯ ಸಭೆಯ ಮುಂದೆ ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವ ಸಾಮಾನ್ಯ ಆಡಳಿತೆ, ನ್ಯಾಯಾಂಗ ಆಡಳಿತೆ ಹಾಗೂ ಸಂಸದೀಯ ಆಡಳಿತೆಯ ಬೇಡಿಕೆಗಳನ್ನು ಸಮರ್ಥಿಸುತ್ತ ಒಂದೆರಡು ವಿಷಯಗಳನ್ನು ಹೇಳಲು ಬಯಸುತ್ತೇನೆ.

ಈ ಮಾನ್ಯ ಸಭೆಯ ಓರ್ವ ಹಿರಿಯ ಸದಸ್ಯರಾದ ಮಾನ್ಯ ಸಿದ್ಧವೀರಪ್ಪನವರು ತಮ್ಮ ಭಾಷಣದಲ್ಲಿ ಹೇಳುತ್ತ, ಈ ಹೊತ್ತು ಜನತೆಯ ಅಭಿಪ್ರಾಯವನ್ನು ನಾವು ತಿಳಿಯಬೇಕಾದರೆ ಬಸ್ಸಿನಲ್ಲಿ ಪ್ರಯಾಣ ಮಾಡಿ, ರೈಲುಗಳಲ್ಲಿ ಪ್ರಯಾಣ ಮಾಡಿ, ದಾರಿ ಉದ್ದಕ್ಕೂ ನಡೆದು ಜನತೆಯ ಅಭಿಪ್ರಾಯವನ್ನು ತಿಳಿಯಬಹುದು ಎಂದು ಸೂಚಿಸಿದರು. ಅದು ಸತ್ಯವಾದ ಮಾತು. ಇವೊತ್ತು ನಾವು ಜನತೆಯ ಅಭಿಪ್ರಾಯವನ್ನು ತೆಗೆದುಕೊಂಡು ರೂಪಿಸುವುದಾದರೆ, ಈ ಹೊತ್ತು ನಾನು ತಿಳಿದ ರೀತಿಯಲ್ಲಿ ಹೇಳುವುದಾದರೆ, ಜನತೆ ಏನು ಹೇಳುತ್ತಾರೆಂದರೆ, ನಾವು ಜನತೆಯ ಮತಗಳಿಂದ ಆರಿಸಿಬಂದು, ಈ ಸನ್ಮಾನ್ಯ ಶಾಸನ ಸಭೆಯಲ್ಲಿ ಕುಳಿತುಕೊಂಡು ನಮ್ಮ ಹೆಚ್ಚಿನ ಸಮಯವನ್ನು ಪಾರ್ಟಿ ಪಕ್ಷಗಳ ವಿಚಾರದಲ್ಲಿ ತರ್ಕಗಳಲ್ಲಿ ವಿವೇಚಿಸುತ್ತ, ಆಡಳಿತ ಪಕ್ಷದವರಾಗಲೀ ಅಥವಾ ವಿರೋಧ ಪಕ್ಷದವರಾಗಲೀ, ಜನತೆಯ ಕಷ್ಟ ಕಾರ್ಪಣ್ಯಗಳನ್ನು ಕುರಿತು ಸರಿಯಾದ ಸೂಚನೆಗಳನ್ನಿಟ್ಟು ಮುಂದಿನ ಅಭಿವೃದ್ಧಿಗೆ ಏನನ್ನೂ ತೋರಿಸದೆ ಈ ಸಭೆಯಲ್ಲಿ ಶಿಸ್ತು, ಮಾನ್ಯತೆ, ಗೌರವವನ್ನು ಇಟ್ಟುಕೊಳ್ಳದೆ ನಮ್ಮ ಸಮಯವನ್ನು ಕಳೆಯುತ್ತೇವೆ ಎಂಬುದಾಗಿ ಜನತೆ ಮಾತನಾಡುತ್ತಾರೆ ಎಂಬುದನ್ನು ನಾವು ತಿಳಿಯುವುದು ಅತಿ ಅಗತ್ಯ. ಇದೇ ದೃಷ್ಟಿಯಿಂದ ನಾವು ಮುಂದುವರಿದು ಮಾತನಾಡುತ್ತಾ ಹೋದರೆ ಅದು ಸರಿಯೇ ಎಂಬುದನ್ನು ನೋಡಬೇಕು. ಈ ದಿವಸ ನಮ್ಮ ಈ ಸಾಮಾನ್ಯ ಆಡಳಿತವನ್ನೇ ತೆಗೆದುಕೊಳ್ಳೋಣ. ನಾವು ಈ ಸರ್ಕಾರವರ್ಗದವರನ್ನಾಗಲಿ, ಅಥವಾ ಆಡಳಿತ ವರ್ಗದವರನ್ನಾಗಲೀ ನಾವು ತೆಗೆದುಕೊಂಡು ಮಾತನಾಡುವುದಾದರೆ ಅವರಿಗೊಂದು ಮಾರ್ಗದರ್ಶನ ಮಾಡಿಕೊಡುವ ಹಾಗೆ ನಾವು ಮಾತನಾಡಬೇಕು ಮತ್ತು ನಾವಿಲ್ಲಿ ಕಾನೂನು ಮತ್ತು ನೀತಿಗಳನ್ನು ನಿರೂಪಿಸಬೇಕು. ಹಾಗೆ ಇಲ್ಲಿ ಮಾಡುವುದಕ್ಕೆ ಸಾಧ್ಯವಿದೆಯೇ ಮತ್ತು ಹಾಗೆ ನಾವೆಲ್ಲರೂ ಇಲ್ಲಿ ನಮ್ಮ ಕರ್ತವ್ಯವನ್ನು ಪಾಲಿಸುತ್ತಿದ್ದೇವೆಯೇ ಅನ್ನುವುದನ್ನು ನೋಡಿದರೆ ನಾವು ಇಲ್ಲಿ ನಮ್ಮ ಕರ್ತವ್ಯದಲ್ಲಿ ಒಂದು ದೊಡ್ಡ ಕೊರತೆ ಬಂದಿರುವಂತೆ ಇಲ್ಲವೇ ನಾವು ಇದಕ್ಕೆ ಇನ್ನೂ ಬಹಳ ದೂರದಲ್ಲಿದ್ದಂತೆ ನನಗೆ ಅನಿಸುತ್ತದೆ. ನಾವೆಲ್ಲರೂ ಇಲ್ಲಿ ಕೇಳುತ್ತಿರುವಂತೆ ಕೆಲವು ಸದಸ್ಯರು ನಮ್ಮ ಮಂತ್ರಿಗಳು ಬಹಳ ದುಂದು ವೆಚ್ಚ ಮಾಡುತ್ತಿದ್ದಾರೆ, ಆಡಳಿತದಲ್ಲಿ ಹೆಚ್ಚು ವೆಚ್ಚವಾಗುತ್ತದೆ ಎಂಬುದಾಗಿ ಎಲ್ಲಾ ಮಾತನಾಡುತ್ತಿದ್ದಾರೆ. ಇರಬಹುದು.

[MR. CHAIRMAN (SRI S. D. KOTHAVALE) in the Chair]

ಇಲ್ಲಿ ಹಣದುರವ್ಯಯವಾಗುತ್ತಿದೆ ನಮ್ಮ ಆಡಳಿತದಲ್ಲಿ ಎಂಬುದಾಗಿ ಹೇಳುತ್ತಿದ್ದಾರೆ. ನಮ್ಮದು ಬೆಳೆಯುವಂಥ ರಾಷ್ಟ್ರ, ಅಭಿವೃದ್ಧಿಯನ್ನು ಹೊಂದುತ್ತಿರುವಂಥ ಜನಾಂಗ. ಇವುಗಳ ಅವಶ್ಯಕತೆಯನ್ನು ಕಂಡು ಅದಕ್ಕೆ ಬೇಕಾದ ಕಾರ್ಯಗಳನ್ನು ನಿರ್ವಹಿಸಬೇಕಾದರೆ ಹಣ ಖರ್ಚಾಗಬೇಕಾದ್ದು ಅಗತ್ಯ. ಅದಕ್ಕೆ ನಾವು ಚಿಂತೆಪಡುವ ಅವಶ್ಯಕತೆಯಿಲ್ಲ. ಇಲ್ಲಿ ಶಾಸನ ಸಭೆಯಲ್ಲಿರತಕ್ಕ ಆಡಳಿತ ಪಕ್ಷದವರಾಗಲಿ ಅಥವಾ ವಿರೋಧ ಪಕ್ಷದವರಾಗಲೀ ನಾವು ಇಲ್ಲಿ ಖರ್ಚುಮಾಡತಕ್ಕ ಹಣದಿಂದ ರಾಷ್ಟ್ರದ ಆರ್ಥಿಕ ಮಟ್ಟವನ್ನು ಹೆಚ್ಚಿಸುತ್ತಿದ್ದೇವೆಯೇ—ಹಾಗೆ ಅದನ್ನು ಹೆಚ್ಚಿಸುವುದಕ್ಕೆ ನಾವು ಸಶಕ್ತರಾಗಿದ್ದೇವೆಯೇ ಎಂಬುದನ್ನು ತಿಳಿಯತಕ್ಕದ್ದು ಅವಶ್ಯಕ. ಖರ್ಚುಮಾಡುವುದಕ್ಕೆ ಹೇಚು ಮಾಡುವುದು ಸರಿಯಲ್ಲ. ನಮ್ಮಲ್ಲಿ ದಕ್ಷತೆಯುಳ್ಳ ಆಡಳಿತ, ಸರಿಯಾದ ಕಾರ್ಯನಿರ್ವಹಣೆ ಇದ್ದರೆ ರಾಜ್ಯದ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಿದೆ ಎಂದು ನನ್ನ ಅಭಿಪ್ರಾಯ. ಮಾತು ಮಾತಿಗೆ ಇಲ್ಲಿ ಕೆಲವರು ಮಹಾತ್ಮ ಗಾಂಧಿಯವರ ಹೆಸರನ್ನೆತ್ತಿಕೊಂಡು ನೀವು ಆ ಮಹಾತ್ಮ ಗಾಂಧಿಯ ಅನುಯಾಯಿಗಳಾಗಿ ಮಂತ್ರಿಗಳು ಹಾಗೆ ಮಾಡುತ್ತಾರೆ—ಹೀಗೆ ಮಾಡುತ್ತಾರೆಂದು ಹೇಳುವುದು ಏನಿದೆ ಅದರಿಂದ ಒಂದು ಹೆಚ್ಚಿನ ಸಾಧನೆಯನ್ನು ಸಾಧಿಸಿದಂತೆ ಆಗುವುದಿಲ್ಲ. ಮಹಾತ್ಮ ಗಾಂಧಿಯವರು ಇವತ್ತು ಇದ್ದರೂ ಕೂಡ ರಾಜತಾಂತ್ರಿಕ ವಿಷಯಗಳಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಬಾರದೆಂದು ಅವರೆಂದೂ ಹೇಳುತ್ತಿರಲಿಲ್ಲ. ಅವರು ಜೀವಂತರಾಗಿದ್ದಾಗಲೂ ಒಂದು ಉದಾತ್ತ ಧ್ಯೇಯವನ್ನಿಟ್ಟುಕೊಂಡು ಜೀವನ ಸಾಗಿಸಿದರೇ ವಿನಾ ಅವರು ಯಾರೊಬ್ಬರ ಮೇಲೂ ಅವರು ತಮ್ಮ ಹೊರೆಯನ್ನು ಹೇರುವುದಕ್ಕೆ ಹೋಗುತ್ತಿರಲಿಲ್ಲ. ಅವರು ಜೀವಂತರಿದ್ದ ಕಾಲಕ್ಕೆ ಅವರ ಬಳಿ ದೊಡ್ಡ ದೊಡ್ಡ ಇಂಡಸ್ಟ್ರಿಯಲಿಸ್ಟ್‌ಗಳು, ಶ್ರೀಮಂತರಿದ್ದರೂ ಅವರ ಸಂಪರ್ಕವನ್ನು ಇಟ್ಟುಕೊಳ್ಳುವುದಕ್ಕೆ ಅವರು ಹೇಸುತ್ತಿರಲಿಲ್ಲ. ಇವತ್ತೂ ಗಳಿಸಿದ್ದ ಹಣದಲ್ಲಿ ನಾವು ಸಾಕಷ್ಟು ಪ್ರಯೋಜನವನ್ನು ಪಡೆದಿದ್ದೇವೆಯೇ ಅನ್ನುವುದನ್ನು ನೋಡುವುದು ಮಾತ್ರ ಅವಶ್ಯಕ.

ಇನ್ನು ನಾವು ನಮ್ಮ ಆಡಳಿತವನ್ನೇ ತೆಗೆದುಕೊಳ್ಳೋಣ. ಇಲ್ಲಿ ಆಡಳಿತವನ್ನು ಮಾಡತಕ್ಕವರು ಯಾರು, ಇದನ್ನು ಮಾಡತಕ್ಕವರು ನಮ್ಮ ಜನರೇ ವಿನಾ ಯಂತ್ರಗಳಲ್ಲ. ಆದುದರಿಂದ ಅವರ ಬಗ್ಗೆ ಒಂದು ಮಾನವೀಯತೆಯನ್ನು ತೋರಿಸುವುದು ಅಗತ್ಯವಿದೆ. ಸ್ವಾತಂತ್ರ್ಯ ಬಂದು 20 ವರ್ಷಗಳ ನಂತರವೂ ಕೂಡ ನಮ್ಮ ಹಿಂದಿನ ಆ ಮೈಸೂರು ಸಿವಿಲ್ ಸರ್ವೀಸ್ ರೂಲ್ಸ್‌ಗಳಲ್ಲಿ ನಾವು ಯಾವ ಬದ

(ಶ್ರೀ ಎಸ್. ಕೆ. ಅಮೀನ್)

ರಾವಣೆಗಳನ್ನೂ ಮಾಡಿರುವುದಿಲ್ಲ. ಸ್ವಾತಂತ್ರ್ಯಕ್ಕೆ ಪೂರ್ವದಲ್ಲೇ ಇದ್ದಂಥ ಕೆಲವು ನೇಮಗಳನ್ನೇ ಈ ದಿವಸವೂ ಇಟ್ಟುಕೊಂಡು ನಾವು ಆಡಳಿತವನ್ನು ಮುಂದುವರಿಸಿದಲ್ಲಿ ಈ ಸ್ವಾತಂತ್ರ್ಯ ಜಗತ್ತಿನಲ್ಲಿ ಆಡಳಿತಕ್ಕೆ ಬೇಕಾದ ಸೂಕ್ತ ಪರಿಹಾರ ದೊರೆಯುವುದಿಲ್ಲ. ಈ ಒಂದು ಲಿಮಿಟೇಷನ್ನಿನಲ್ಲಿ ನಾವು ಆಲೋಚನೆ ಮಾಡುವುದಾದರೆ ಇದು ನಮಗೆ ಮನನವಾಗದೆ ಇರಲಿಕ್ಕಿಲ್ಲ. ಯಾರು ಆಡಳಿತದಲ್ಲಿ ಕೆಲಸ ಮಾಡುತ್ತಿದ್ದಾರೋ ಅವರಿಗೆ ಸರಿಯಾದ ಸೂಚನೆ ಕೊಡದೆ ಇರುವುದು ಸರಿಯಲ್ಲ. ಅದನ್ನು ಕೊಟ್ಟಮೇಲೆ ಅದನ್ನು ಅವನು ಸರಿಯಾಗಿ ಪರಿಪಾಲನೆ ಮಾಡವಿದ್ದರೆ ಯಾವ ಸರ್ಕಾರಕ್ಕೂ ಏನು ಮಾಡಲಿಕ್ಕೂ ಸಾಧ್ಯವಿಲ್ಲ. ಈ ದಿವಸ ನಮ್ಮ ಮೈಸೂರು ಸರ್ಕಾರದ ಪರಿಸ್ಥಿತಿಯನ್ನು ಪರಿಶೀಲಿಸು ವುದಾದರೆ ನಮ್ಮಲ್ಲಿ ರಾಜ್ಯಗಳ ಪುನರ್ವಿಂಗಡಣೆ ಆದ ನಂತರ 4 ಪ್ರಾಂತಗಳಿಂದ ಬಂದ ಅಧಿಕಾರಿ ಗಳು ಇಲ್ಲಿ ಸೇರಿದ್ದಾರೆ. ಆದರೆ ಇವರ ಸೀನಿಯಾರಿಟಿ ಲಿಸ್ಟನ್ನು ಇಂದಿನವರೆಗೂ ಸರಿಪಡಿಸಿಲ್ಲ. ಮೊನ್ನೆ ತಾನೆ ನಮ್ಮ ಕಂದಾಯದ ಮಂತ್ರಿಗಳು ಒಂದು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಕಾಲದಲ್ಲಿ ಈ ಮಾತುಗಳನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇನ್ನಾದರೂ ಸರ್ಕಾರದವರು ಹೆಚ್ಚಿನ ಸಮ ಯವನ್ನು ವಿಳಂಬ ಮಾಡದೆ ಅತಿವೇಗದಲ್ಲಿ ಸರಿಪಡಿಸಿದ್ದೇ ಆಗಿದ್ದರೆ ನಮ್ಮ ಆಡಳಿತದಲ್ಲಿ ನಾವು ಒಂದು ಹೆಚ್ಚಿನ ಚಕಚುಕಿಯನ್ನು ಕಾಣಬಹುದಿತ್ತು.

ಅಧಿಕಾರ ವಿಕೇಂದ್ರೀಕರಣ ವಿಚಾರದಲ್ಲಿ ಸಭೆಯಲ್ಲಿ ಅನೇಕರು ಒತ್ತಿ ಹೇಳಿದ್ದಾರೆ. ನಮ್ಮಲ್ಲಿ ಅಧಿಕಾರ ವಿಕೇಂದ್ರೀಕರಣ ಇಲ್ಲಿಯವರೆಗೂ ಕಂಡುಬರುತ್ತಿಲ್ಲ. ಆದ್ದರಿಂದ ಒಂದು ಸಣ್ಣ ವಿಷಯಕ್ಕಾದರೂ ಕೂಡ ಅವರು ಅನುಮತಿಯನ್ನು ಪಡೆಯಲಿಕ್ಕೆ ಸೆಕ್ರೆಟೇರಿಯಟ್ಟಿಗೆ ಅವರು ಬರು ತ್ತಿರುವುದರಿಂದ ಕಾಲ ವಿಳಂಬ ಆಗುವುದು ಕಂಡುಬರುತ್ತಿದೆ. ಇದಕ್ಕೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಆದಷ್ಟು ಬೇಗ ಸರ್ಕಾರದವರು ಈ ಕೊರತೆಯನ್ನು ನೀಗಬೇಕು.

ಇನ್ನು ನಮ್ಮ ಎನ್.ಜಿ.ಓ. ಗಳ ವಿಚಾರದಲ್ಲಿ ನಾವು ಅವರನ್ನು ಒಂದು ಮಾನವೀಯತೆ ದೃಷ್ಟಿ ಯಿಂದ ನೋಡಬೇಕಾದ್ದು ಅಗತ್ಯ. ಮೊನ್ನೆ ತಾವೆಲ್ಲರೂ ಕೇಳಿರಬಹುದು ನಮ್ಮ ಮಡಕೇರಿಯಲ್ಲಿ ಎನ್.ಜಿ.ಓ. ಗಳು ಒಂದು ನಿರ್ಣಯ ಮಾಡಿ ತೀರ್ಮಾನ ಮಾಡಿದ್ದಾರೆ. ಅದನ್ನು ತಾವೆಲ್ಲರೂ ಕೇಳಿ ರಬಹುದು. ಸರ್ಕಾರಿ ನೌಕರರಲ್ಲಿ ನಾವು ನೌಕರರು ಎಂಬ ಒಂದು ಭಾವನೆ ಬಂದುಹೋಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಅವರೂ ಸಹಾ ತಾವು ದೇಶದ ಪ್ರಜೆಗಳು, ಇದು ನಮ್ಮ ರಾಷ್ಟ್ರ ಎಂಬ ಒಂದು ರಾಷ್ಟ್ರ ಭಾವನೆ ಅವರ ಮನಸ್ಸಿನಲ್ಲಿ ಮೂಡುವಂತೆ ಮಾಡಬೇಕಾದ್ದು ಆವಶ್ಯಕ. ಅದಕ್ಕೆ ಒಂದು ಅವಕಾಶ ಮಾಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರ ಉಪಕಾರವನ್ನು ಮನ್ನಿಸಿ, ಮನ್ನಣೆ ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಈ ಸಾಮಾನ್ಯ ಆಡಳಿತದ ಬಗ್ಗೆ ಹಾಗೂ ಇಲ್ಲಿ ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತ ಈಗಾಗಲೆ ಅನೇಕರು ಇಲ್ಲಿ ಮಾತನಾಡಿದ್ದಾರೆ. ಈ ಸರ್ಕಾರದಲ್ಲಿ ಒಂದು ನೀತಿಯಿಲ್ಲ, ಇಲ್ಲಿ ದುರಾಡಳಿತದಿಂದ ಆಡಳಿತ ನಡೆಯುತ್ತಿದೆ, ಈ ಸರ್ಕಾರವನ್ನು ನಂಬಿಕೊಂಡಿರುವುದು ಬಹಳ ತಪ್ಪಾಗುತ್ತದೆ ಎಂದು ಜನರು ಮನಗಂಡಿದ್ದಾರೆ. ಇಲ್ಲಿ ಕೆಲಸ ಮಾಡಲು ಈ ದಿವಸ ಯಾರು ಅಧಿಕಾರಿಗಳಿದ್ದಾರೋ ಅವರು ಈ ಮಂತ್ರಿಗಳ ಏಜಂಟರಾಗಿದ್ದಾರೆ. ಅವರೆಲ್ಲರೂ ಮಂತ್ರಿಗಳು ಏನು ಹೇಳುತ್ತಾರೋ ಅವರ ಆ ಕೆಲಸಗಳನ್ನು ಮಾಡುವುದರಲ್ಲಿ ನಿರತರಾಗಿರುತ್ತಾರೆಯೇ ವಿನಾ ಅವರು ರಾಜ್ಯದಲ್ಲಿ ಒಂದು ಸುಗಮ ವಾದ ಆಡಳಿತವನ್ನು ಕೊಟ್ಟು ಇಲ್ಲಿನ ಸರ್ಕಾರವನ್ನು ಒಂದು ಸುಭದ್ರ ಸ್ಥಿತಿಯಲ್ಲಿ ಇಡುವುದಕ್ಕೆ ಅವರು ಪ್ರಯತ್ನ ಮಾಡುತ್ತಿಲ್ಲ. ಹಿಂದೆ ಮದ್ರಾಸಿನಲ್ಲಿ ಶ್ರೀ ರಾಜಾಜಿಯವರು ಆಡಳಿತ ನಡೆಸುತ್ತಿದ್ದ ಕಾಲದಲ್ಲಿ ಆಡಳಿತದಲ್ಲಿ ಶಾಸಕರು ಯಾರೂ ಕೈಹಾಕಬಾರದು ಎಂಬುದಾಗಿ ಒಂದು ನೀತಿಯನ್ನು ಚಲಾಯಿಸುತ್ತಿದ್ದರು. ಅಲ್ಲಿ ಅಂಥ ಒಂದು ದಕ್ಷರೀತಿ ಆಡಳಿತವಿದ್ದರೆ, ಇಲ್ಲ ನಮ್ಮ ರಾಜ್ಯದಲ್ಲಿ ಈ ದಿವಸ ಅಧಿಕಾರಿಗಳು ಮಂತ್ರಿಗಳ ಕೈಲಿ ಸಿಕ್ಕಿಕೊಂಡು ಕೆಲಸಮಾಡತಕ್ಕ ನೀತಿ ಇಲ್ಲಿದೆ. ಹೀಗಾಗಿ ಇಲ್ಲಿ ನಾವು ಯಾವ ಒಂದು ಸುಭದ್ರವಾದ ಆಡಳಿತವನ್ನು ಕಾಣಬೇಕೆಂದು ಆಶಿಸುತ್ತಿದ್ದೇವೋ ಅದನ್ನು ಕಾಣುವುದಕ್ಕಾಗುತ್ತಿಲ್ಲ. ಲೆಕ್ಕವಿಲ್ಲದಂತೆ ಇಲ್ಲಿ ಅಧಿಕಾರಿಗಳನ್ನೂ ಮತ್ತು ಅಧಿಕಾರಿಗಳಿಗಾಗಿ ಕಾರ್ಯಾಲಯಗಳನ್ನೂ ವ್ಯಥಾ ಹೆಚ್ಚಿಸಿಕೊಂಡು ಬರುತ್ತಿದ್ದಾರೆ. ನಮ್ಮ ಆಡಳಿತದ ಕಾರ್ಯಾಲಯಕ್ಕೆ ಒಂದು ಕಟ್ಟಡ ಬೇಕಾಗಿದೆ ಎಂಬ ಒಂದು ನೆಪದಿಂದ ನಮ್ಮ ಸರ್ಕಾರದವರು 6 ಲಕ್ಷ ಕೂಡ ಬೆಲೆ ಬಾಳದಂಥ ಒಂದು ಕಟ್ಟಡಕ್ಕೆ ಈ ದಿವಸ 18 ಲಕ್ಷ ರೂಪಾಯಿಗಳನ್ನು ಕೊಡಲು ಒಪ್ಪಿದ್ದಾರೆ. ಮೊನ್ನೆ ದಿವಸ ಇದೇ ಸಭೆಯಲ್ಲಿ ಆ ಬಗ್ಗೆ ವಿಶೇಷ ಚರ್ಚೆ ಕೂಡ ಆಯಿತು. ಪ್ರಚಂಡ ವಾದಗಳೂ

ಆದವು. ನಮ್ಮ ಸರ್ಕಾರದವರು ಎಳೆಯ ರಾಜ ಎನ್ನತಕ್ಕವರ ಒಂದು ಬಂಗಲೆಯನ್ನು 18 ಲಕ್ಷಕ್ಕೆ ಖರೀದಿ ಮಾಡಿದ್ದಾರೆ. ಮೊದಲು ಅದನ್ನೇ ಅವರು 5 ಲಕ್ಷಕ್ಕೆ ಕೇಳಿದ್ದರು. ಅದನ್ನು ಮತ್ತೆ ಬೆಲೆ ಏರಿಸಿ ಅದಕ್ಕೇ 18 ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಒಪ್ಪಿದ್ದಾರೆ. ಇದು ಯಾರ ಹಣ ? ಬಡವರ ಹಣವನ್ನು ಇವರು ಹೀಗೆ ದುಂದು ಮಾಡುತ್ತಿದ್ದಾರೆ. ಬಾಕಿ ವಿಚಾರಗಳಿಗೆ ದುಡ್ಡನ್ನು ಕೇಳಿದರೆ ಕಾಸು ಕಾಸಿಗೂ ಲೆಕ್ಕ ಹಾಕುತ್ತಾರೆ. ತಮ್ಮವರನ್ನು ಬದುಕಿಸಲು ಇಂಥ ಅನ್ಯಾಯದ ವ್ಯವಹಾರಕ್ಕೆ ಕೈಹಾಕಿದ್ದಾರೆ. ಬಡವರ ಹಣದಿಂದ ಆ ಎಳೆಯ ರಾಜನನ್ನು ಬದುಕಿಸುವ ಬಯಕೆ ಇವರಿಗೆ ಏಕೆ ಬೇಕಾಗಿತ್ತು ? ಆದರೆ ಈ ವ್ಯವಹಾರದ ಹಿಂದೆ ಇಬ್ಬರು ಮಂತ್ರಿಗಳು ಏಜಂಟರಾಗಿ ದ್ದಾರೆಂಬುದಾಗಿ ನಮಗೆ ಖಚಿತವಾಗಿ ತಿಳಿದುಬಂದಿದೆ. ಈ ಮಾತುಗಳನ್ನು ನಾನು ಪುಂಟಾ ಘೋಷವಾಗಿ ಹೇಳುತ್ತೇನೆ.

5-00 P.M.

ಈ ರಾಜ್ಯವನ್ನು ಸಮಾಜವಾದ ತತ್ವದಮೇಲೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ಗಾಂಧಿ ಹೆಸರಿನಲ್ಲಿ, ಗಾಂಧಿ ಟೋಪಿಯ ಹೆಸರಿನ ಮೇಲೆ ಇಂತಹ ರಾಜ್ಯ ನಡೆಸುತ್ತಿದ್ದೇವೆ ಎಂದು ದೇಶಕ್ಕೆ ಅನ್ಯಾಯ ಮಾಡುತ್ತಾ ಇದ್ದೀರಾ ? ಇವೊತ್ತು ನೀವು ವೈಭವದ ಜೀವನವನ್ನು ನಡೆಸುತ್ತಿದ್ದೀರಿ. ಇಂತಹ ಜೀವನವನ್ನು ಬಿಟ್ಟು ಸಮಾಜ ಉದ್ಧಾರವಾಗಬೇಕು ಎಂದು ತಿಳಿಯಬೇಕು. ಈ ದೃಷ್ಟಿಯನ್ನು ಇಟ್ಟುಕೊಂಡು ಈ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವುದಾದರೆ ನೀವು ಏನೇನು ಅನ್ಯಾಯ ಅಕ್ರಮ ಗಳನ್ನು ಮಾಡುತ್ತಾ ಇದ್ದೀರಿ ಅದನ್ನೆಲ್ಲಾ ನಿಲ್ಲಿಸಬೇಕು. ಆವಾಗ ನೀವು ಒಂದು ಸುಭದ್ರವಾದ ಆಡಳಿತವನ್ನು ಕಟ್ಟಬಹುದು. ಈವಾಗ ನಿಮ್ಮ ಜೀವನದ ಅಂತರ ಹೆಚ್ಚು ಕಡಿಮೆ ಇರುವುದರಿಂದ ಒಂದು ಸೇತುವೆ ಕಡಿದುಬಿಟ್ಟಿದೆ. ಹಳ್ಳಿಗಾಡಿನ ರೈತನ ಜೀವನ ಮಟ್ಟಕ್ಕೂ ನಿಮ್ಮ ಜೀವನದ ಮಟ್ಟಕ್ಕೂ ಎಷ್ಟು ಅಂತರ ಇದೆ, ನೋಡಿ. ಮಂತ್ರಿಗಳಿಗೆ ಕಾರುಗಳು ಎಷ್ಟು, ಮಂತ್ರಿಗಳಿಗೆ ಬಂಗಲೆಗಳು ಎಷ್ಟು ? ಅವರಿಗೆ ವೈಭವಗಳು ಎಷ್ಟು ಎಂದು ಕೇಳುತ್ತೇನೆ. ಬೆಂಗಳೂರಿನಲ್ಲಿ ವಿಧಾನಸೌಧ ಕಟ್ಟಿರುವುದನ್ನು ಎಷ್ಟೋ ಜನ ಹಳ್ಳಿಗಾಡಿನ ರೈತರು ನೋಡಿರುವುದಿಲ್ಲ. ಸ್ವಾಮಿ, ತಾವು ಮಾಡತಕ್ಕಂಥ ಒಂದು ವೈಭವದ ಜೀವನವನ್ನೂ ಹಳ್ಳಿಗಾಡಿನವರು ಮಾಡತಕ್ಕಂಥ ಜೀವನ ವನ್ನೂ ಹೇಗಿದೆ ಎಂಬುದನ್ನು ನೋಡಬೇಕು. ಸಾಮಾನ್ಯ ಜನತೆಯಿಂದ ಹಿಡಿದು ಮಂತ್ರಿಗಳವರೆಗೂ ಒಂದೇ ಸಮಾನವಾದ ಜೀವನ ಮಟ್ಟವನ್ನು ಮಾಡಿಕೊಡಿ, ಇಲ್ಲದೇ ಹೋದರೆ ಈವೊತ್ತು ನಿಮ್ಮ ಕಾಂಗ್ರೆಸ್ ಪಾರ್ಟಿ ಆಡಳಿತ ಸರ್ವನಾಶವಾಗಿ ಹೋಗಲಿ.

ಇನ್ನು ನೀವು ಹಿಂದೆ ಹೇಳುತ್ತಾ ಇದ್ದಿರಿ. ಮಂತ್ರಿಗಳಿಗೆ 3 ಸಾವಿರ, 4 ಸಾವಿರ ಸಂಬಳ ಏತಕ್ಕೆ ಕೊಡಬೇಕು ? ನಮ್ಮ ಕೈಗೆ ಆಡಳಿತ ಕೊಟ್ಟರೆ ನಾವು 5 ಜನ ಮೈತುಂಬ ಬಟ್ಟೆ ಇಲ್ಲದೆ, ಕಾರು ಇಲ್ಲದೆ, ಮನೆ ಇಲ್ಲದೆ ಗಾಂಧಿ ಹೆಸರಿನಲ್ಲಿ ಗುಡಿಸಲು ಕಟ್ಟಿಕೊಂಡು ಗಾಂಧಿ ರಾಜ್ಯ ನಡೆಸುತ್ತೇವೆ ಎಂದು ಹೇಳುತ್ತಾ ಇದ್ದಿರಿ. ಮೈತುಂಬಾ ಬಟ್ಟೆಯನ್ನೂ ಹಾಕಿಕೊಳ್ಳದೆ ರಾಜ್ಯ ಭಾರ ನಡೆಸುತ್ತೇವೆ ಎಂದು ಹೇಳುತ್ತಾ ಇದ್ದಿರಿ. ಇವೊತ್ತು ನೋಡಿದರೆ ಮಾನ್ಯ ಶ್ರೀ ನಿಜಲಿಂಗಪ್ಪ ನವರಿಗೆ 90 ಸಾವಿರ ರೂಪಾಯಿನ ಕಾರು. ಇದು ಪ್ರಜಾಪ್ರಭುತ್ವವೇ ? ನಮ್ಮ ಮಂತ್ರಿಗಳು ಕಾರು ಇಲ್ಲದೇ ಯಾವ ಬೀದಿಯಲ್ಲೂ ಹೋಗುವುದಿಲ್ಲ. ಒಬ್ಬೊಬ್ಬರಿಗೂ 18-20 ಸಾವಿರ ರೂಪಾಯಿನ ಕಾರುಗಳು. ಇದು ಏನು ಸ್ವಾಮಿ, ಗಾಂಧಿ ರಾಜ್ಯವೇ ? ಅವರ ವೈಭವದ ಜೀವನವನ್ನೂ ನೋಡಿ. ಅವರ ಮನೆಯ ಜೀವನವನ್ನೂ ನೋಡಿ. ಅವರ ಮನೆಯಲ್ಲಿ ಕಟ್ಟಿರ ತಕ್ಕಂಥ ನಾಯಿಯ ಜೀವನವನ್ನೂ ನೋಡಿ. ಆ ನಾಯಿಯ ಜೀವನ ನೋಡಿದರೆ, ನಮ್ಮ ಬಡ ರೈತನಿಗೂ ಸಹಿತ ಅದರ ಜೀವನ ಮಟ್ಟ ಇಲ್ಲ, ಆದರೆ ರೈತನು ಕೊಡತಕ್ಕಂಥ ತೆರಿಗೆ ಏನೂ ಕಡಿಮೆ ಇಲ್ಲ. ಯಾವ ರೈತ ಒಂದು ಸರ್ಕಾರವನ್ನು ಧರ್ಮಕ್ಕಾಗಿ ನಂಬಿಕೊಂಡಿದ್ದಾನೋ ಆ ರೈತನಿಗೆ ಮೋಸ ಮಾಡುತ್ತಾ ಇದ್ದೀರಿ. ಅವನ ಮೇಲೆ ನಿಮಗೆ ಕಿಂಚಿತ್ ಕೂಡ ದಯೆಯೇ ಇಲ್ಲ. ನಿಮಗೆ ಏನಾದರೂ ರೈತನ ಮೇಲೆ ಕಿಂಚಿತ್ ದಯೆ ಇದೆಯೇ ಸ್ವಾಮಿ ? ನಾನು ಶ್ರೀಮಾನ್ ಕಂಠಿಯವರ ಮನೆಗೆ ಹೋಗಿದ್ದೆ. ಅವರ ಮನೆಯಲ್ಲಿ ನಾಯಿ ಇತ್ತು.

ಶ್ರೀ ಎಸ್. ಆರ್. ಕಂಠಿ.—ಯಾರ ಯಾರದೋ ನಾಯಿ ಕಾಂಪೌಂಡ್‌ನಲ್ಲಿ ತಂದು ಬಿಡುತ್ತಾರೆ. ಅದು ನನ್ನ ನಾಯಿ ಅಲ್ಲ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಹೇಳುತ್ತಾ ಇರುವುದು ಒಬ್ಬ ಮಂತ್ರಿಗಳ ಮನೆಯ ನಾಯಿಗೆ ಖರ್ಚು ಮಾಡುತ್ತಾ ಇರತಕ್ಕಂಥ ಹಣ ಈವೊತ್ತು ಒಬ್ಬ ಸಾಮಾನ್ಯ ಬಡಜನಕ್ಕೆ ಖರ್ಚು ಮಾಡುತ್ತಾ ಇಲ್ಲವೆಂದು ಅವರಿಗೆ ಹೇಳುತ್ತೇನೆ. ಎಷ್ಟೋ ಜನ ಎನ್.ಜಿ.ಓ. ಗಳಿಗೆ, ಎಷ್ಟೋ

(ಶ್ರೀ ವಾಟಾಳ್ ನಾಗರಾಜ್)

ಜನ ಬಡ ನೌಕರರಿಗೆ ಒಂದು ಸೈಟೂ ಇಲ್ಲ. ಆದರೆ ಹೋಗಿ ಸದಾಶಿವನಗರದಲ್ಲಿ ನೋಡಿ. 6 ಗಂಟೆ ಆದಮೇಲೆ, ಅಸೆಂಬ್ಲಿ ಮುಗಿದಮೇಲೆ ಅಧ್ಯಕ್ಷರೇ ನನ್ನ ಜೊತೆ ಬನ್ನಿ. ಮಾಜಿ ಮಂತ್ರಿಗಳ ಮನೆಯಿಂದ ಶುರುವಾಗಿ ಶ್ರೀ ಎಸ್. ರಾಚಯ್ಯನವರ ಮನೆಯಿಂದ ಹಿಡಿದು ಕೊನೆಯ ವರೆಗೂ ಬರೀ ಮಂತ್ರಿಗಳ ಮನೆಯೇ. ಒಬ್ಬ ಸಾಮಾನ್ಯ ಬಡವನಿಗೆ ಅಲ್ಲಿ ಒಂದು ಅಂಗುಲ ಜಾಗವೂ ಕೊಟ್ಟಿಲ್ಲ. ಅಲ್ಲಿ ಇರತಕ್ಕಂಥವರೆಲ್ಲಾ ಮಂತ್ರಿಗಳು, ಐ.ಎ.ಎಸ್. ಅಧಿಕಾರಿಗಳು, ದುಡ್ಡು ಇದ್ದವರೇ. ಸಾಮಾನ್ಯವಾದ ಮನುಷ್ಯನಿಗೆ ಒಬ್ಬನಿಗೂ ಮನೆ ಇಲ್ಲ. ಇದನ್ನು ನೋಡಿದರೆ ನನಗೆ ಬಹಳ ವ್ಯಥೆಯಾಗುತ್ತದೆ. ನೀವು ಮಾಡುತ್ತಾ ಇರುವುದನ್ನು ನೋಡಿದರೆ ಅಳಬೇಕೋ ನಗಬೇಕೋ ಗೊತ್ತಾಗುವುದಿಲ್ಲ.

ಇನ್ನೊಂದು ವಿಷಯ ಶ್ರೀಮಾನ್ ಬಿ. ರಾಚಯ್ಯನವರು ಹೇಳಿದರು. ಸಾರ್ವಜನಿಕರಿಂದ ದೂರುಗಳು ಪ್ರತಿನಿತ್ಯ 500 ರಿಂದ 1000 ಅರ್ಜಿಗಳು ಬರುತ್ತದೆ. ಅವುಗಳು ಪರಿಶೀಲಿಸಲ್ಪಟ್ಟು ವಿಧಾನಸೌಧದಿಂದ ಹೊರಬೀಳುವ ಕಾಲಾವಧಿ ಕನಿಷ್ಠ 1 ತಿಂಗಳು, ತಾಲ್ಲೂಕು, ಸಬ್‌ಡಿವಿಷನ್, ಜಿಲ್ಲಾಧಿಕಾರಿ ಹಾಗೂ ವಿಭಾಗಾಧಿಕಾರಿ ಕಛೇರಿಗಳಿಂದ ಒಂದು ಅರ್ಜಿ ವಿಧಾನಸೌಧದ ಕಟ್ಟೆ ಹತ್ತಲು ಬೇಕಾಗಿರುವ ಕಾಲಾವಕಾಶ ಸುಮಾರು ಈವೊತ್ತಿನ ಪರಿಸ್ಥಿತಿಯಲ್ಲಿ 4 ತಿಂಗಳು ಎಂದು. ನಾನು ಇಷ್ಟು ಹೇಳುತ್ತೇನೆ. ವಿರೋಧಪಕ್ಷದವರು ಏನು ಹೇಳುತ್ತಾರೋ ಅದನ್ನು ಸರ್ಕಾರ ದವರು ಗಮನಿಸಬೇಕು. ಸುಮ್ಮನೆ ಅವರು ಹೇಳುತ್ತಾ ಇರಲಿ, ನಾವು ಮಾಡುತ್ತಾ ಇದ್ದೇವೆ ಎನ್ನುವ ಉದಾಸೀನತೆಯನ್ನು ಬಿಡಬೇಕು. ನಿಮ್ಮ ಈ ಕೆಟ್ಟನೀತಿ ಹೋಗಲಿ. ನೀವು ಸುಖ ಸಂತೋಷದಿಂದ ಓಡಾಡುವುದನ್ನು ಬಿಡಬೇಕೆಂದು ಘಂಟಾಘೋಷವಾಗಿ ಹೇಳುತ್ತೇನೆ; ನಿಮಗೆ ಈ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ಸಾಮಾನ್ಯ ಜನಕ್ಕೆ ಒಂದು ಶುದ್ಧವಾದ ಆಡಳಿತವನ್ನು ಕೊಡಿ ಇಲ್ಲದೇ ಹೋದರೆ ಈ ಆಡಳಿತವನ್ನು ಬಿಟ್ಟು ಹೋಗಿ.

ಇನ್ನು ಕೋರ್ಟುಗಳ ವಿಚಾರ. ಅನೇಕ ಕೋರ್ಟುಗಳನ್ನು ನಾನು ನೋಡುತ್ತಾ ಇದ್ದೇನೆ. ಅಲ್ಲಿ ನ್ಯಾಯಾಧೀಶರುಗಳು ಕುಳಿತುಕೊಳ್ಳುವುದಕ್ಕೆ ಕುರ್ಚಿಗಳು ಮುರಿದುಹೋಗಿರುತ್ತದೆ. ನಿಂತುಕೊಳ್ಳುವುದಕ್ಕೆ ಸ್ಥಳ ಇಲ್ಲ. ಅನೇಕ ಎಡರು ತೊಡರುಗಳು ಇವೆ. ಅದುದರಿಂದ ಈ ಕೋರ್ಟುಗಳಿಗೆ ಒಳ್ಳೊಳ್ಳೆಯ ಕಟ್ಟಡಗಳನ್ನು ಕಟ್ಟಿಸಿ ಎಲ್ಲಾ ಜಿಲ್ಲೆಗಳಲ್ಲೂ ಎಲ್ಲಾ ಕೋರ್ಟುಗಳೂ ಒಂದೇ ಕಡೆ ಇರುವಂತೆ ವ್ಯವಸ್ಥೆಯನ್ನು ಮಾಡಬೇಕು.

ಇನ್ನು ಕೊನೆಯದಾಗಿ ಕನ್ನಡ ಶೀಘ್ರಲಿಪಿಗಾರರು ಹಾಗೂ ಭಾಷಾಂತರಕಾರರಿಗೂ ಇನೂ ಒಂದು ಹೆಚ್ಚಿನ ಉತ್ತೇಜನ ಕೊಡಬೇಕು. ವಿಧಾನಮಂಡಲದಲ್ಲಿರತಕ್ಕಂಥ ಈ ಎರಡು ಸಭೆಗಳಿಂದ ಪ್ರಶ್ನೆಗಳು ಮತ್ತು ಉತ್ತರಗಳು ಕನ್ನಡದಲ್ಲೇ ಜಾಸ್ತಿ ಬರುತ್ತದೆ. ಅವುಗಳನ್ನು ತರ್ಜುಮೆ ಮಾಡಲು ಬಹಳ ಆಯಾಸವಾಗುತ್ತದೆ. ಆದುದರಿಂದ ಅವರಿಗೆ ಒಂದು ವಿಶೇಷ ಭತ್ಯಗಳನ್ನು ಕೊಡಬೇಕು. ಅವರು ಹೆಚ್ಚು ಆಸಕ್ತಿಯಿಂದ ಕೆಲಸ ಮಾಡುತ್ತಾರೆ. ನೀವು ಸುಮ್ಮನೆ ಕನ್ನಡವನ್ನು ಆಡಳಿತ ಭಾಷೆ ಮಾಡಿದ್ದೇವೆ ಎಂದು ಹೇಳಿದರೆ ಸಾಲದು. ತಾಲ್ಲೂಕು ಮಟ್ಟದಲ್ಲಿ ಮಾಡಿದ್ದೇವೆ ಎಂದು ಹೇಳಿದರೂ ಸಾಲದು. ಯಾರು ಇದರಲ್ಲಿ ಕೆಲಸ ಮಾಡುತ್ತಾರೋ ಅವರಿಗೆ ಹೆಚ್ಚು ಭತ್ಯ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಐ. ಎ. ಎಸ್. ಅಧಿಕಾರಿಗಳಿಗೆ, ಎಷ್ಟೋ ಜನಕ್ಕೆ ನಮ್ಮ ರಾಜ್ಯದಲ್ಲಿ ಕನ್ನಡ ಬರುವುದಿಲ್ಲ. ಹಾಗೂ ಒಬ್ಬಿಬ್ಬರು ಮಂತ್ರಿಗಳಿಗೂ ಕನ್ನಡ ಬರುವುದಿಲ್ಲ. ಹೀಗೆಲ್ಲಾ ನಮ್ಮ ವಿಧಾನಮಂಡಲದಲ್ಲಿರುವಾಗ ಕನ್ನಡ ಶೀಘ್ರಲಿಪಿಗಾರರಿಗೂ ಮತ್ತು ಭಾಷಾಂತರ ಕಾರರಿಗೂ, ಸೆಕ್ಷನ್‌ನಲ್ಲಿರುವ ನೌಕರರಿಗೂ ಹೆಚ್ಚು ಉತ್ತೇಜನ ಕೊಡಬೇಕು ಮತ್ತು ಎಲ್ಲಾ ಜಿಲ್ಲೆ ಯಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರಬೇಕು ಎಂದು ಮತ್ತೊಮ್ಮೆ ಈ ಸಭೆ ಯಲ್ಲಿ ಒತ್ತಾಯಪಡಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಲೀಲಾವತಿ ರೈ (ಬಂಟ್ವಾಳ್).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕಂಥ ಬೇಡಿಕೆಗಳನ್ನು ಪುಷ್ಟೀಕರಿಸುತ್ತಾ ಒಂದೆರಡು ಸಲಹೆಗಳನ್ನು ಕೊಡ ಬಯಸುತ್ತೇನೆ. ಕೆಲವು ಮಾನ್ಯ ಸದಸ್ಯರುಗಳು ಮಾತನಾಡುವಾಗ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಿದರು, ಏನೆಂದರೆ, ಈ ಕಡೆಯ ಸದಸ್ಯರುಗಳು ಮಂತ್ರಿಗಳನ್ನು ಯಾವಾಗಲೂ ಭೇಟಿ ಮಾಡುತ್ತಿರುತ್ತಾರೆ ಎಂದು. ನಾವು ಸೌಜನ್ಯದಿಂದ ಕೂಡಿದ ಸದಸ್ಯರುಗಳಾಗಿದ್ದೇವೆ. ನಾವು ಒಂದು ಲಕ್ಷ ಜನರ ಹಿತವನ್ನು ಕಾಪಾಡುವುದಕ್ಕಾಗಿ ಇಲ್ಲಿಗೆ ಬಂದಿದ್ದೇವೆ. ಕೇವಲ ಒಬ್ಬಿಬ್ಬರ ದೃಷ್ಟಿಯಿಂದ ನಾವು ಇಲ್ಲಿಗೆ ಬಂದಿಲ್ಲ. ನಾವು ಯಾವ ಕ್ಷೇತ್ರದಿಂದ ಆರಿಸಿ ಬಂದಿದ್ದೇವೋ, ಅಲ್ಲಿಯ ಜನರ ಹಿತವನು

ನೋಡಿಕೊಳ್ಳುವುದು ಮತ್ತು ಅವರ ಕೆಲಸಕಾರ್ಯಗಳನ್ನು ಮಾಡಿಸಿಕೊಡುವುದು ನಮ್ಮ ಕರ್ತವ್ಯ ವಾಗಿದೆ. ಈ ವಿಚಾರವನ್ನು ಮಾನ್ಯ ಸದಸ್ಯರುಗಳು ತಿಳಿದುಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ಇನ್ನು ದೇಶದ ಹಿತದೃಷ್ಟಿಯಿಂದ ಕೆಲಸಕಾರ್ಯಗಳು ಜಾಗ್ರತೆಯಾಗಬೇಕಾದರೆ ಅಧಿಕಾರ ವಿಕೇಂದ್ರೀಕರಣವಾಗಬೇಕು. ಈ ಮಾತನ್ನು ನಾನು ಒಂದು ವರ್ಷದಿಂದಲೂ ಸಹ ಹೇಳಿಕೊಂಡು ಬಂದಿದ್ದೇನೆ. ಇವತ್ತಿನ ದಿವಸ ಪ್ರತಿಯೊಂದು ಕೆಲಸವಾಗಬೇಕಾಗಿದ್ದರೂ ಸಹ ಬೆಂಗಳೂರಿಗೇ ಬರಬೇಕಾಗಿದೆ. ಆಯಾ ಜಿಲ್ಲೆಗಳಲ್ಲಿರತಕ್ಕ ಜಿಲ್ಲಾಧಿಕಾರಿಗಳಿಗೇ ಕೆಲಸಗಳನ್ನು ಮಾಡಿಸುವ ಅಧಿಕಾರ ವನ್ನು ಕೊಡಬೇಕು. ಸರ್ಕಾರದವರು ಜಾಗ್ರತೆಯಾಗಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಒಂದು ಇಲಾಖೆಗೂ ಮತ್ತೊಂದು ಇಲಾಖೆಗೂ ಹೊಂದಾಣಿಕೆ ಇಲ್ಲ. ಲೋಕೋಪ ಯೋಗಿ ಇಲಾಖೆ ಮತ್ತು ವಿದ್ಯುಚ್ಛಕ್ತಿ ಇಲಾಖೆ ಎರಡಕ್ಕೂ ಒಬ್ಬರೇ ಮಂತ್ರಿಗಳಿದ್ದರೂ ಸಹ ಎರಡು ಇಲಾಖೆಯ ಅಧಿಕಾರಿಗಳಲ್ಲಿ ಹೊಂದಾಣಿಕೆ ಇಲ್ಲವಾಗಿದೆ. ಇದಕ್ಕೆ ಒಂದು ಉದಾಹರಣೆ ಹೇಳಬೇಕೆಂದರೆ, ನನ್ನ ಕ್ಷೇತ್ರದ ಒಂದು ಪಂಚಾಯಿತಿಯವರು ಎಲಕ್ಟ್ರಿಫಿಕೇಷನ್‌ಗಾಗಿ ಅರ್ಜಿ ಹಾಕಿಕೊಂಡಾಗ, ಅದು ಇತ್ಯರ್ಥವಾಗಲು 6 ತಿಂಗಳ ಕಾಲ ಬೇಕಾಯಿತು. ಏಕೆಂದರೆ, ಮೊದಲು ಲೋಕೋಪಯೋಗಿ ಇಲಾಖೆಯ ಕಡೆಯವರು ಇನ್ಸ್‌ಪೆಕ್ಷನ್‌ಗೆ ಹೋದಾಗ ವಿದ್ಯುಚ್ಛಕ್ತಿ ಇಲಾಖೆ ಯವರ ಸ್ಕೆಚ್ ಪ್ರಕಾರ ಒಂದು ಕಂಬ ಗದ್ದೆಯಲ್ಲಿ ಬರುತ್ತದೆಂದು ತಿಳಿದು ಲೈನ್ ಎಳೆಯುವುದಕ್ಕೆ ಅವಕಾಶ ಕೊಡದೆ ಅಬ್ಜೆಕ್ಷನ್ ಹಾಕಿ ಆ ಫೈಲನ್ನು ಹಾಗೆಯೇ ಇಟ್ಟುಬಿಟ್ಟರು. ವಿದ್ಯುಚ್ಛಕ್ತಿ ಇಲಾಖೆಯವರನ್ನು ವಿಚಾರಿಸಲಾಗಿ ಪಿ.ಡಬ್ಲ್ಯು.ಡಿ. ಇಲಾಖೆಯವರು ಅಬ್ಜೆಕ್ಷನ್ ಹಾಕಿದ್ದಾರೆ, ನಾವೇನು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಮಾರ್ಗದ ಮಧ್ಯದಿಂದ ಇಂತಿಷ್ಟೇ ದೂರದಲ್ಲಿ ಕಂಬ ನೆಡಬೇಕಾಗುತ್ತದೆಂದು ಒಂದು ಕಾನೂನು ಇರುವಾಗ ಎರಡು ಇಲಾಖೆಯ ಅಧಿಕಾರಿಗಳು ಜೊತೆಯಲ್ಲೇ ಹೋಗಿ ಇನ್ಸ್‌ಪೆಕ್ಟ್ ಮಾಡಿ ಒಂದು ತೀರ್ಮಾನ ತೆಗೆದುಕೊಂಡಿದ್ದರೆ ಈ ಕೆಲಸ ಜಾಗ್ರತೆಯಾಗುತ್ತಿತ್ತು. ಆದರೆ ಒಬ್ಬರಮೇಲೆ ಒಬ್ಬರು ಹೇಳಿಕೊಂಡು ಫೈಲನ್ನು ಹಾಗೆಯೇ ಇಟ್ಟುಬಿಟ್ಟಿದ್ದರು. ನಾನು ಎರಡು ಇಲಾಖೆಗೂ ಟೆಲಿಫೋನ್ ಮಾಡಿದಮೇಲೆ, ಎರಡು ಇಲಾಖೆಯವರು ಸೇರಿಕೊಂಡು ಇನ್ಸ್‌ಪೆಕ್ಷನ್ ಮಾಡಿ ಒಂದು ತಿಂಗಳಲ್ಲಿ ಎಲಕ್ಟ್ರಿಫಿಕೇಷನ್ ಮಾಡಿ ಕೊಟ್ಟರು. ಇದರಿಂದ ಎರಡು ಇಲಾಖೆಗಳಲ್ಲಿಯೂ ಹೊಂದಾಣಿಕೆ ಇಲ್ಲವೆಂದು ಗೊತ್ತಾಗುತ್ತದೆ. ಎರಡು ಇಲಾಖೆಗೂ ಒಬ್ಬರೇ ಮಂತ್ರಿಗಳು ಇರುವುದರಿಂದ ಎರಡು ಇಲಾಖೆಯ ಅಧಿಕಾರಿಗಳು ಹೊಂದಾಣಿಕೆಯಿಂದ ಕೆಲಸಮಾಡಿಕೊಂಡು ಹೋಗುವಂತೆ ಸೂಕ್ತ ತಿಳಿವಳಿಕೆ ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಆರೋಗ್ಯ ಇಲಾಖೆ ತೆಗೆದುಕೊಂಡರೆ, ಒಬ್ಬ ಡಾಕ್ಟರ್ ಒಬ್ಬ ರೋಗಿಗೆ ಔಷಧ ಕೊಡುತ್ತಿದ್ದರೆ. ಮತ್ತೊಬ್ಬ ಡಾಕ್ಟರ್ ಔಷಧ ಕೊಡುವುದಿಲ್ಲ. ಇದರಿಂದ ಕೆಲವೊಂದುಸಲ ತೊಂದರೆಗಳಾಗುವುದಕ್ಕೆ ಅವಕಾಶವಾಗುತ್ತದೆ. ಇವತ್ತಿನ ದಿವಸ ಎರಡು ಇಲಾಖೆಗಳಿಗೆ ಒಬ್ಬ ಮಂತ್ರಿಗಳು ಇದ್ದರೂ ಕೂಡ ಎರಡು ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳಲ್ಲಿ ಹೊಂದಾಣಿಕೆ ಕಂಡುಬರುತ್ತಿಲ್ಲ. ಯಾವ ರೀತಿ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗಬೇಕು ಎನ್ನುವ ಬಗ್ಗೆ ಈ ಆಫೀಸರ್‌ಗಳಿಗೆ ಟ್ರೈನಿಂಗ್ ಕೊಟ್ಟಿದ್ದರೂ ಸಹ ಈ ರೀತಿ ಮಾಡುತ್ತಿದ್ದಾರೆ. ದೇಶದ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ ಅಧಿಕಾರಿಗಳು ಈ ರೀತಿಮಾಡುವುದು ಸರಿಯಲ್ಲ. ಹೊಂದಾಣಿಕೆಯಿಂದ ಕೆಲಸ ಮಾಡಿಕೊಂಡು ಹೋಗಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಪೋಲೀಸ್ ಇಲಾಖೆ ತೆಗೆದುಕೊಂಡರೆ, ಪೋಲೀಸರು ತಮಗೆ ಅಧಿಕಾರ ಇರುವುದು ಎಂದು ತಿಳಿದುಕೊಂಡು ತಪ್ಪಿತಸ್ಥರನ್ನು ತಾವೇ ಹೊಡೆಯುವುದು, ದಬ್ಬಾಳಿಕೆ ನಡೆಸುವುದು ಮುಂತಾದವನ್ನೆಲ್ಲಾ ಮಾಡುತ್ತಿದ್ದಾರೆ. ಜನರ ರಕ್ಷಣೆ ಮಾಡುವುದಕ್ಕಾಗಿ ಇವರು ಇರುವುದು. ದರ್ಪವನ್ನು ತೋರಿಸುವುದಕ್ಕೆ ಇವರು ಇಲ್ಲ. ಕೆಂಪು ಟೋಪಿ ಹಾಕಿಕೊಂಡರೆ ತಾವು ಇಷ್ಟಬಂದಂತೆ ನಡೆದುಕೊಳ್ಳಬಹುದೆಂದು ಈ ಪೋಲೀಸರು ತಿಳಿದುಕೊಂಡಿದ್ದಾರೆ. ಜನರ ಕ್ಷೇಮವನ್ನು ವಿಚಾರಿಸುವುದಕ್ಕೆ, ಜನರ ರಕ್ಷಣೆಗೆ ಇವರು ಇರುವುದು ಎಂಬುದನ್ನು ಸರ್ಕಾರದವರು ತಿಳಿಸ ಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರೆವಿನ್ಯೂ ಇಲಾಖೆಯ ಬಗ್ಗೆ ಹೇಳುವುದಾದರೆ, ಮೇಲ್ಮಟ್ಟದಲ್ಲಿ ಸರಿಯಾಗಿ ಆಡಳಿತ ನಡೆಯುತ್ತಿರಬಹುದು, ಆದರೆ ತಾಲ್ಲೂಕ್ ಆಫೀಸ್‌ಗಳಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳು ಹೋಗಿ ನೋಡಿದರೆ ಗೊತ್ತಾಗುತ್ತದೆ. 10-12 ವರ್ಷಗಳಿಂದ ಇತ್ಯರ್ಥವಾಗದ ಫೈಲುಗಳು ಬಹಳ ಇವೆ. ರೈತರು ಹೋಗಿ ತಮ್ಮ ಕೆಲಸಗಳನ್ನು ಮಾಡಿಸಿ

(ಶ್ರೀಮತಿ ಕೆ. ಲೀಲಾವತಿ ರೈ)

ಕೊಳ್ಳುವುದು ಕಷ್ಟವಾಗಿದೆ. ತಾಲ್ಲೂಕ್ ಆಫೀಸ್‌ನಲ್ಲಿರುವ ಕ್ಲರ್ಕ್‌ಗಳನ್ನು ರೈತರು ಮಾತನಾಡಿಸುವುದು ಕಷ್ಟವಾಗಿದೆ. ಪ್ರತಿಯೊಂದು ಕೆಲಸವನ್ನು ಮಂತ್ರಿಗಳೇ ಮಾಡಬೇಕೆಂದರೆ ಸಾಧ್ಯವಾಗುವುದಿಲ್ಲ. ಆಫೀಸ್‌ಗಳಲ್ಲಿ ಕೆಲಸ ಮಾಡತಕ್ಕಂಥ ಮೇಲಿನ ಮತ್ತು ಕೆಳಗಿನ ಅಧಿಕಾರಿಗಳು ತಾವು ಇರುವುದು ಜನತೆಯ ಕೆಲಸಕ್ಕಾಗಿ, ಜನರಿಗೆ ನ್ಯಾಯ ದೊರಕಿಸಿಕೊಡುವುದು ತಮ್ಮ ಕರ್ತವ್ಯ ಎಂದು ತಿಳಿದುಕೊಂಡು ಕೆಲಸ ಮಾಡಬೇಕು. ಆ ರೀತಿ ಕೆಲಸಗಳು ನಡೆದಾಗ ಮಾತ್ರ ದೇಶದ ಅಭಿವೃದ್ಧಿಯಾಗುವುದಕ್ಕೆ ಅವಕಾಶವಾಗುತ್ತದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದಾರೆ. ಅದರಂತೆ ಸರ್ಕಾರೀ ಅಧಿಕಾರಿಗಳು ತಮ್ಮ ಕರ್ತವ್ಯ ವನ್ನು ಅರಿತುಕೊಂಡು ಕೆಲಸ ಮಾಡುವುದು ಒಳ್ಳೆಯದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸರ್ಕಾರಿ ನೌಕರರ ಬಗ್ಗೆ ಕೆಲವೊಂದು ರೂಲ್ಸ್‌ಗಳನ್ನು ಸರ್ಕಾರದವರು ಮಾಡಿದ್ದಾರೆ. ಆ ರೀತಿ ಮಾಡಿರುವುದರಲ್ಲಿ ಜಹಳ ತಾರತಮ್ಯವಿದೆ. ಗ್ರಾಂಟ್-ಇನ್-ಏಡ್ ರೂಲ್ಸ್‌ನಲ್ಲೂ ಸಹ ತಾರತಮ್ಯವಿದೆ. ಕೆಲವು ಇಲಾಖೆಗಳಲ್ಲಿ ಹಂಗಾಮಿ ನೌಕರರನ್ನು ಪುನರ್‌ನೇಮಕ ಮಾಡಿ ಕೊಳ್ಳುತ್ತಾರೆ, ಮತ್ತೇ ಕೆಲವು ಇಲಾಖೆಗಳಲ್ಲಿ ಪುನರ್‌ನೇಮಕ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಇದು ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ ಎಂದಂತಾಗುತ್ತದೆ. ಒಬ್ಬರನ್ನು ಪುನರ್‌ನೇಮಕ ಮಾಡಿಕೊಳ್ಳುವುದು, ಮತ್ತೊಬ್ಬರನ್ನು ಮಾಡಿಕೊಳ್ಳದಿರುವುದು ಸರಿಯಲ್ಲ. ಇದನ್ನು ಸರಿಪಡಿಸಿ ಎಲ್ಲಾ ಇಲಾಖೆಗಳಲ್ಲೂ ಸಹ ಒಂದೇ ರೀತಿಯ ಕಾನೂನು ಇರುವಂತೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಆಡಳಿತ ಇಲಾಖೆಯಲ್ಲಿ ಭೇದಭಾವನೆ ಇದೆಯೆಂದು ಕೆಲವು ಮಾನ್ಯ ಸದಸ್ಯರುಗಳು ಹೇಳಿದರು. ಆ ರೀತಿಯ ಭೇದಭಾವನೆ ಇರುವುದು ಸರಿಯಲ್ಲ. ಸರಿಯಾದ ರೀತಿಯಲ್ಲಿ ಆಡಳಿತ ನಡೆದುಕೊಂಡು ಹೋಗುವಂತೆ ಸರ್ಕಾರ ದವರು ನೋಡಿಕೊಳ್ಳಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ದಿಗಂಬರ್‌ರಾವ್ ಬಿ. ಕಲ್ಮಂಕರ್.—ಮಾನ್ಯ ಅಧ್ಯಕ್ಷರೇ, ಇವತ್ತು ಕನ್ನಡದಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನನ್ನ ಕೆಲವು ಮಾನ್ಯ ಸ್ನೇಹಿತರುಗಳು ಕನ್ನಡದಲ್ಲಿ ಮಾತನಾಡಬೇಕೆಂದು ಹೇಳಿದ್ದರಿಂದ ಕನ್ನಡದಲ್ಲಿ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಈ ಸಭೆಯ ಮುಂದೆ ಇರತಕ್ಕಂಥ ಬೇಡಿಕೆಗಳಾದ Parliament State/Union Territory Legislature; Administration of Justice General Administration, ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳಬೇಕೆಂದರೆ, ನನಗೆಷ್ಟು ಅನಿಸುತ್ತದೆ, ಜನರಲ್ ಅಡ್ಮಿನಿಸ್ಟ್ರೇಷನ್ ಬಹಳ ಸಡಿಲ ಆಗಿದೆ ಎಂದು ಈ ಬಗ್ಗೆ ಎಲ್ಲಾ ಪಾರ್ಟಿಯವರೂ ಸಹ ಹೇಳಿದ್ದಾರೆ. ಈ ಅಡ್ಮಿನಿಸ್ಟ್ರೇಷನ್‌ನಲ್ಲಿ ಮಂತ್ರಿ ಮಂಡಲದ ಒಂದು ಸರಿಯಾದ ಹತೋಟಿ ಇಲ್ಲ. ನನಗೆ ಈ ರೀತಿ ಅನಿಸುತ್ತದೆ, ಏನೆಂದರೆ ಮಂತ್ರಿಮಂಡಲದವರು ಒಂದು ಬಿಗಿಯಿಂದ ಕೆಲಸ ಮಾಡಿದ್ದರೆ ಅಡ್ಮಿನಿಸ್ಟ್ರೇಷನ್‌ನಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿತ್ತು ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಇವತ್ತಿನ ದಿವಸ ಮೇಲಿನ ಅಧಿಕಾರಿಗಳು ರೊಕ್ಕ ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿರುವುದರಿಂದ ಕೆಳಗಿನ ಅಧಿಕಾರಿಗಳು ಧೈರ್ಯವಾಗಿ ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ಅಡ್ಮಿನಿ ಸ್ಟ್ರೇಷನ್‌ನೊಳಗೆ ಇವತ್ತಿನ ದಿವಸ ಮೇಲಿನಿಂದ ಹಿಡಿದು ಕೆಳಗಿನವರೆಗೂ ಕರಪ್ಷನ್, ನಪೋಟಿಸಮ್ ಕಮ್ಯುನ್ಯಾಲಿಜಂ ಹೆಚ್ಚಿನ ರೀತಿಯಲ್ಲಿ ನಡೆಯುತ್ತಿದೆ. ಈ ಕಾಂಗ್ರೆಸ್ ಸರ್ಕಾರ ಏನು ಮಾಡಿದರೂ ಸಹ ಇದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇನ್ನು ಈ ಡಿವಿಜನಲ್ ಕಮೀಶನರ್ ಏನು ಇದ್ದಾರೆ, ಅವರಿಗೆ ಏನೂ ಕೆಲಸವಿಲ್ಲ. ಅವರು ಒಂದು ಪೋಸ್ಟ್ ಆಫೀಸು ಕೆಲಸ ರೀತಿ ಮಾಡುತ್ತಿದ್ದಾರೆ. ಇವರಿಗೆ 19 ಲಕ್ಷ 80 ಸಾವಿರ ಖರ್ಚು ಆಗುತ್ತದೆ. ಇವರು ಉಳಿತಾಯ ಮಾಡಬೇಕೆಂದು ಹೇಳುವುದು ಒಂದು ಕಡೆ, ಒಂದು ಕಡೆ ಖರ್ಚು ಮಾಡುತ್ತಿರುವುದು. ಅದೇ ರೀತಿ ಹಾಸ್ಪಿಟಾಲಿಟಿ ಬಗ್ಗೆ ಏನು ಖರ್ಚು ಮಾಡುತ್ತಿದ್ದಾರೆ, ಇದನ್ನು ಖೋತಾ ಮಾಡಬೇಕು. ಈಗ 10 ಲಕ್ಷ 68 ಸಾವಿರ ಇದಕ್ಕೆ ಇಟ್ಟಿದ್ದಾರೆ. ಒಂದು ಲಕ್ಷ 42 ಸಾವಿರ ಜಾಸ್ತಿ ಮಾಡಿದ್ದಾರೆ. ಇನ್ನು ಸಿವಿಲ್ ಸೆಕ್ರಟರಿಯೇಟ್ ಬಗ್ಗೆ ಹೇಳುತ್ತೇನೆ. ಹೋದವರ್ಷ ಒಂದು ಕೋಟಿ 47 ಲಕ್ಷ 50 ಸಾವಿರ ಇದ್ದದ್ದನ್ನು ಈ ವರ್ಷ 4 ಲಕ್ಷ 45 ಸಾವಿರ ಜಾಸ್ತಿ ಮಾಡಿದ್ದಾರೆ. ನಮ್ಮ ಖರ್ಚುಗಳನ್ನು ಕಡಮೆ ಮಾಡುತ್ತೇವೆ, ಎಂದು ಏನು ಅವರು ಭರವಸೆ ಕೊಡುತ್ತಾರೆ,

ಅದನ್ನು ಮಾಡುತ್ತಾ ಇಲ್ಲ. ಇವರು ಇವತ್ತು ಖರ್ಚು ಬೆಳೆಸುತ್ತಾ ಹೋಗುತ್ತಾರೆ. ಇದು ಬಹಳ ಅನ್ಯಾಯವೆಂದು ಹೇಳಬೇಕಾಗಿದೆ.

ಮೈಸೂರು ವಿಜಿಲೆನ್ಸ್ ಕಮಿಾಶನ್ ಬಗ್ಗೆ ಒಂದು ಮಾತು. ಅದರ ಕೆಲಸದ ಬಗ್ಗೆ ಏನೂ ಚರ್ಚೆ ಇಲ್ಲವೆಂದು ಹೇಳಬೇಕಾಗಿದೆ. ಅದಕ್ಕೆ ಲಕ್ಷಗಟ್ಟಲೆ ಹಣ ಖರ್ಚು ಮಾಡುತ್ತಿದ್ದಾರೆ. ಆದರೆ ಅಲ್ಲಿ ಮೂರು ಸಾವಿರ ಅರ್ಜಿಗಳು ಬಂದರೆ ಅದರಲ್ಲಿ ಎಷ್ಟು ಡಿಸ್ಪೋಸಲ್ಸ್ ಮಾಡಿದ್ದಾರೆ ? ಅದು ಬಹಳ ಕಡಿಮೆ. ಇವತ್ತು ವಿಜಿಲೆನ್ಸ್ ಕಮಿಶನ್ ಇದೆ, ನಾವು ಏನೂ ಅಕ್ರಮ ಮಾಡಬಾರದು ಎಂದು ಯಾವ ಆಫೀಸರಿಗೂ ಅಂಜಿಕೆ ಇಲ್ಲ ಸುಮ್ಮನೆ ಅರ್ಜಿಗಳನ್ನು ಇತರ ಇಲಾಖೆಗೆ ಕಳಿಸುತ್ತಾರೆ ಇವತ್ತು ಇದಕ್ಕೆ ಏನು ಖರ್ಚು ಮಾಡುತ್ತಾರೆ, ಅದು ನಿರುಪಯೋಗವಾಗುತ್ತದೆ. ಇದಕ್ಕೆ ಒಂದು ಸ್ವಾತಂತ್ರ ಮಶಿನರಿ ಮಾಡಿ speedy disposals ಮಾಡುವುದು ಒಳ್ಳೆಯದು ಇಲ್ಲವಿದ್ದರೆ ನಮ್ಮ ಮಂದಿಯಮೇಲೆ ಬಹಳ ಅನ್ಯಾಯ ಮಾಡಿದಂತೆ ಅಗುತ್ತದೆ. ಮೈಸೂರು ಲಾಂಗ್ವೇಜ್ ಕಮಿಷನ್ ಬಗ್ಗೆ ಒಂದು ಲಕ್ಷ 20 ಸಾವಿರ ಖರ್ಚು ಮಾಡಿದ್ದಾರೆ. ಇವರು ಅದರ ಬಗ್ಗೆ ಏನು ಮಾಡಿದ್ದಾರೆಂದರೆ, ಏನೂ ಇಲ್ಲ. ಮೈಸೂರು ಸರ್ಕಾರಿ ಸೆಕ್ರಟರಿಯೇಟ್‌ನಲ್ಲಿ ಸೆಕ್ರಟರಿಗಳ ಬಗ್ಗೆ 21 ಲಕ್ಷ 40 ಸಾವಿರ ಮತ್ತು ಇಡೀ ಸ್ಟಾಫ್ ಮೇಲೆ ಖರ್ಚಾಗಿರತಕ್ಕದ್ದು 28 ಲಕ್ಷ 80 ಸಾವಿರ. ಇವತ್ತು ಇವರು ಸಮಾಜವಾದ ಜಾರಿಗೆ ತರುತ್ತೇವೆ ಲೋಕಶಾಹಿ ತರುತ್ತೇವೆ ಅದು ಮಾಡುತ್ತೇವೆ, ಇದು ಮಾಡುತ್ತೇವೆಂದು ಹೇಳುತ್ತಾರಲ್ಲದೆ, ಇಂಥ ಖರ್ಚುಗಳನ್ನು ಕಡಮೆ ಮಾಡುವುದಕ್ಕೆ ಏನೂ ಕಾರ್ಯಕ್ರಮವನ್ನು ಕೈಗೊಂಡಿಲ್ಲ. ಇವತ್ತು ಸೆಕ್ರಟರಿಯೇಟಿನ ಪರಿಸ್ಥಿತಿ ಏನಿದೆ ? ಇವತ್ತು ಇಲ್ಲಿ ಕೆಲಸಮಾಡತಕ್ಕ ಕ್ಲಾರ್ಕ್‌ಗಳು ಗರೀಬರಾಗಿದ್ದಾರೆ. ಅವರ ಸ್ಥಿತಿ ಲೇಬರರಿಗಿಂತಲೂ ಕಡಿಮೆ ಯಾಗಿದೆ. ಒಬ್ಬ ನನ್ನ ಮಿತ್ರರು ಗ್ರಾಜ್ಯುಯೇಟ್ ಇದ್ದಾರೆ, ಒಳ್ಳೇ ಬುದ್ಧಿವಂತರಿದ್ದಾರೆ. ಆದರೆ ಅವರ ಸ್ಥಿತಿ ಎರಡು ಹೊತ್ತು ಊಟ ಮಾಡುವ ಪರಿಸ್ಥಿತಿಯಲ್ಲಿಲ್ಲ. ಇದರಿಂದ ಇವರು ಏನು ಪ್ರಜಾವಾದಿ, ಸಮಾಜವಾದಿ, ಎಂದು ಏನು ಹೇಳುತ್ತಾರೆ, ಅದು ಇವರಿಗೆ ಗೌರವ ತರುವಂತದ್ದೂ ಅಲ್ಲ : ಅದು ಸುಳ್ಳು ಎಂದು ಹೇಳಬೇಕಾಗಿದೆ.

ಪಬ್ಲಿಕ್ ಸರ್ವಿಸ್ ಬಗ್ಗೆ ಒಂದು ಆರು ಲಕ್ಷ 65 ಸಾವಿರ ಇಟ್ಟಿದ್ದಾರೆ, ಆದರೆ ಇವರು ಮಾಡುವ ಕೆಲಸ ಎಲ್ಲಾ ಪಕ್ಷಪಾತದ್ದಾಗಿದೆ. ಇವತ್ತು ಅಲ್ಲಿ ಮೆರಿಟ'ಮೇಲೆ ಇಂಟರ್‌ವ್ಯೂ ಮಾಡಿ ನೇಮಕ ಮಾಡುವುದು ಬಿಟ್ಟು ತಮಗೆ ಬೇಕಾದವರಿಗೆ ನೇಮಕ ಮಾಡುತ್ತಿದ್ದಾರೆ. ಇವರು ಮಾಡಿದ ನೇಮಕದ ಬಗ್ಗೆ ಸುಪ್ರೀಂ ಕೋರ್ಟು ಕೂಡ ಟೀಕೆಯನ್ನು ಮಾಡಿದೆ. ಆದರೆ ಇವರು ಮಾಡುವುದರಲ್ಲಿ ಯಾವ ವ್ಯತ್ಯಾಸವೂ ಇಲ್ಲ.

ಇನ್ನು ಕ್ರಿಮಿನಲ್ ಕೋರ್ಟುಗಳ ಭತ್ಯದ ಸಲುವಾಗಿ 70 ಸಾವಿರ ಇಟ್ಟಿದ್ದಾರೆ. ಅಲ್ಲಿಯ ಕ್ಲಾರ್ಕ್ ಪಬ್ಲಿಕ್ ಪ್ರೊಸಿಕ್ಯೂಟರ್ ಅವರೆಲ್ಲೂ ಸೇರಿ ಏನು ಬತ್ಯ ಕೊಡಬೇಕು ಅದನ್ನು ಕೊಡುವುದಿಲ್ಲ. ಅದನ್ನು ಮುನಿಸಿಫರೇ ಅಲ್ಲಿಯೇ ಕೊಡಬೇಕು. ಇಲ್ಲದಿದ್ದರೆ, ಅದು ಫುಕ್ಕಟೆಯಾಗಿ ಹೋಗುತ್ತದೆ. ಇನ್ನು ಅದರಲ್ಲಿ ಒಂದು ಸ್ಪೆಶಲ್ ಡ್ಯೂಟಿ ಆಫೀಸರ್ ಎಂದು ಇದ್ದಾರೆ. ಅವರಿಗೆ ಏನೂ ಕೆಲಸವೇ ಇಲ್ಲ. ಎಲ್ಲಾ ಕೆಲಸವನ್ನು ಡೆಪ್ಯೂಟಿ ಕಮಿಾಶನರೇ ಮಾಡುತ್ತಾರೆ. ಆದ್ದರಿಂದ ಇವರಿಗೆ ಯೋಗ್ಯವಾದ ಕೆಲಸಗಳನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಇನಾ ಅಬಾಲಿಶನ್ ಬಗ್ಗೆ ರೊಕ್ಕ ಖರ್ಚು ಮಾಡಿದ್ದೀರಿ. ಆದರೆ ಏನೂ ಕೆಲಸವಾಗಿಲ್ಲ ಅದನ್ನು ಕೂಡ ಸರ್ಕಾರದವರು ಗಮನಿಸಿ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ನನ್ನ ಮಾತಗಳನ್ನು ಮುಗಿಸುತ್ತೇನೆ.

† Sri B. P. GANGADHAR.—Mr. Speaker, Sir, there is a wise saying in English—as is the master so is the servant. While making a comment on the general administration, it is very desirable that this wise saying must be borne in mind and the ministers on the other side will also heed to this. Because of inefficiency, nepotism and red tapism that are prevailing the administration of the entire State has gone into almost liquidation. I may brand this Government as a Government which cannot deliver goods to the people and the way things are conducted here, is most atrocious. I may recall to your memory that a top ranking officer of this State, was capable of purchasing a plot at a low cost. A very fine plot of extensive land in the vicinity of Bangalore

(SRI B. P. GANGADHAR)

was granted to this top ranking officer and when this was given he did not take it in his name. The records were built up in the name of the officer concerned but at the time the document had to be registered, it was taken in the name of his wife. The plot was granted under certain conditions and the conditions were violated. Out of that plot some small plots were marked and they were sold at exorbitant rate. The value of the land sold was Rs. 80 s.yd. but it was given at an upset price of Rs. 5 per s.yd. Out of this land parcels were made and they were disposed of at exorbitant rates. From the money that was derived a magnificent building was put up. Is it not corruption at the topmost. I sent a question regarding it but it was disallowed. That is why I am raising this matter here. It is no less a person than Shri V. V. Giri who was the Governor of Mysore and who is now the Vice-President of India. If this type of corruption and nepotism prevails in the country, woe be to the country ; the country will go to dogs and there will be nobody to care for the people.

5-30 P.M.

Coming to Law Courts, I may say that the buildings in which they are housed are most inadequate ; they are housed in almost cattle sheds. It is also very necessary that they should be properly equipped. My friend was submitting that the courts are not equipped with furniture which are absolutely required. There are no proper sitting arrangements at all. This is the case with the revenue offices and other offices also. Many a time the clerk sits on a desk and does his work. It is very necessary that we have to equip our offices.

Regarding corruption, everybody is saying that corruption is rampant from top to bottom. I feel that there are no good suggestions made in this behalf. I may make a suggestion for implementation by the Government. Corruption begins where papers are delayed. My suggestion is that all the departments must come together and formulate a principle. All urgent applications, whether it is an injunction matter or attachment matter or warrant, must be disposed of within 24 hours. The officer concerned must give top priority for such applications. If this rule is introduced, I think corruption will come down by about 60 or 70 per cent. Similarly, if a rule is introduced that papers should be disposed of by the officers within a week, and if he does not do that he will be punished, it will have a salutary effect and corruption will come down considerably. If these stringent measures are taken, corruption can be brought down to the minimum. The Chief Minister said that it is not possible to remove corruption altogether. I may agree with him to some extent but no attempt is made by the Government to see that the rampancy of corruption is brought down. Corruption is mounting day by day especially people working in the Engineering Department and many other departments

have built mansions. All those things are there before our eyes. How can an officer build a house worth lakhs when his income is only Rs. 400 or 500? It is patent that that man must have made money only by corrupt means. So, I submit that even now an enquiry may be held regarding the acquisition of property by some of the officials. Of course, their buildings are visible throughout Bangalore and in rural parts.

Regarding the Co-operative Department, the less said the better. The Hon'ble Minister in reply to a question said that nearly Rs. 3 lakhs have been misappropriated in Tumkur District. Out of that, what is the money that has been recovered! Only Rs. 50,000. Regarding the remaining Rs. 3 lakhs, they said that they are contemplating to take action. We have been seeing how action has been taken and how the public has been hoodwinked. For instance, we see that a large number of cases which have been charge-sheeted in Bagalkot have been withdrawn unnoticed because it is the intention of the Government to protect some culprits and corrupt officers. If this is the way in which Government want to shield their officers, where is any security at all? That is why I stated, 'as is the master, so is the servant'. Whoever pays money for their election campaign they will be protected by the Government no matter whatever atrocities they may commit or whatever corruption they may indulge in. This is the attitude of the Government. I submit that it is atrocious, not only atrocious but most inhuman. If this type of administration were to continue, woe be to the Government. Such a Government cannot last long. If they persist in it, the man in the street will come with a lathi and see that every Congressman is put an end to.

Regarding the inefficiency of Police, much has been said. Regarding the Madhugiri incident, I may say that nobody is prepared to file an affidavit. A responsible member of the Congress who is an M. P. has gone there with thousands of rupees and has tempted the womenfolk and others who are the victims of atrocities with money and that is why they are not coming before the court to file affidavits. I do not know from where the fund is available. Is this not corruption? If the Government want to practise this corruption, if they want to pay money and try to save their face, woe be to such a Government.

Regarding unemployment in the country, it is the duty of every civilized Government to see that employment is provided to the people wherever it is possible. In fact, in smaller countries like Britain, when employment is not avilable, unemployment doles are provided to the people. Why not we do the same here? It must be done here also. If you are incapable of doing it, you better quit and make way for others who may be able to do it. There are a number of engineers and technicians who are on the streets. There is so much of natural minerals available in the State. You are simply sending the ores

(SRI B. P. GANGADHAR)

outside? Do you call this administration at all? We must stop exporting the ore outside; we must start our own factories to produce the metal out of this ore utilising the services of our own engineers and technicians. Thereby we can raise our national wealth.

Regarding the Judges we have been paying the same salary as we were paying previously. But their position has not been improved. All the Judges must be provided with the Houses in Bangalore and other places. Judges in Bangalore will be residing in distant places like Rajajinagar. Most of them do not possess vehicles. Naturally they have to travel in third class buses. They cannot come in time to the Court. They will have to come in contact with criminals. There must be some protection for these Judges. There may be houses together for them. We have been building houses for Police constables. When we are building houses for these people, why should we not build houses for these Judges? Their lives are so precious. Not only we have to build houses for these judges, but also we must see that protection must be given to these judges. These judges must be provided with houses in a proper locality. I conclude, Sir. Thank you Sir.

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಆಡಳಿತ ವಿಚಾರದಲ್ಲಿ ಬಂದಿರತಕ್ಕಂಥ ಕೋರಿಕೆಗಳ ಬಗ್ಗೆ ಮಾನ್ಯ ಸದಸ್ಯರು ಅನೇಕ ರೀತಿಯಿಂದ ಅಭಿಪ್ರಾಯ ಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಆದರೆ ಈ ಒಂದು ಮಾತು ಈಗ ಸುಮಾರು ಆರೇಳು ವರ್ಷದಿಂದ ಹೇಳು ತ್ತಿದ್ದಾರೆ ಎಂದು ನಾನು ತಿಳಿದಿದ್ದೇನೆ. ಅದಕ್ಕೂ ಮುಂಚೆ ಹದಿಮೂರು ವರ್ಷ ಇದೇ ಒಂದು ಮಾತು ಹೇಳುತ್ತಿದ್ದರು. ಮಾನ್ಯ ಸದಸ್ಯರು ಇದನ್ನು ಹೇಳುವುದು ಪ್ರತಿವರ್ಷ ನಡೆಯತಕ್ಕಂಥಾದ್ದು ಕಾರಣವಿಲ್ಲದೆ ಹೇಳತಕ್ಕಂಥ ಮಾತು ಇದು. ಮುಖ್ಯವಾಗಿ ಈ ದಿವಸ ಲಂಚಕೋರತನ ಜಾಸ್ತಿ ಯಾಗಿದೆ, ದೊಡ್ಡದಾಗುತ್ತಾ ಇದೆ ಎಂದು ಅವರು ತೀರ್ಮಾನಿಸಿದ ಹಾಗೆ ಇದೆ. ಇದನ್ನು ಸ್ವಲ್ಪ ಮಟ್ಟಿಗೆ ಒಪ್ಪಿಕೊಳ್ಳಬೇಕಾಗುತ್ತದೆ. ಲಂಚ ಇವತ್ತು ಬಂದದ್ದಲ್ಲ. ಬಹು ದಿವಸಗಳಿಂದ ಬಂದದ್ದು. ಒಂದು ಮಾತನ್ನು ನಾನು ಧೈರ್ಯವಾಗಿ ಹೇಳಬಲ್ಲೆ. ಇವತ್ತಿನ ದಿವಸ ಇದು ಕಡಿಮೆಯಾಗುತ್ತಾ ಇದೆ ಎಂದು. ಆದರೆ ಅದು ಅಲ್ಲ ಎಂದು ಹೇಳಬೇಕಾದುದು ಅವರ ಕರ್ತವ್ಯ ಎಂದು ತಿಳಿದುಕೊಂಡಿದ್ದಾರೆ. ಅದಕ್ಕೆ ನಾನು ಏನು ಮಾಡಲಿ? ಸಾಧಾರಣವಾಗಿ ನೀವು ಹೇಳು ವುದು ಸರಿಯಲ್ಲ ಎಂದು ಜನ ತಿಳಿದುಕೊಂಡಿದ್ದಾರೆ. ಮೊದಲು ಅದು ಮಾಮೂಲು ಆಗಿತ್ತು. ಆದರೆ ಇಂದು ಜನ ಅದನ್ನು ಪ್ರಶ್ನಿಸುತ್ತಾರೆ. ಇಂದು ಮಾಮೂಲು ಮಾಮೂಲಾಗಿ ಉಳಿದಿಲ್ಲ. ಈರೀತಿಯಾಗಿರುವುದು ನ್ಯಾಯಮಾರ್ಗದಲ್ಲಿ ಇದೊಂದು ಮುಂದಿನ ಹೆಜ್ಜೆ ಎಂದು ನಾನು ತಿಳಿದು ಕೊಂಡಿದ್ದೇನೆ. ಲಂಚ ಕೋರತನ ಒಬ್ಬರಿಂದ ಆಗುವುದಿಲ್ಲ. ಇವತ್ತು ಜನಗಳಲ್ಲಿ ತಿಳುವಳಿಕೆ ಬಂದಿದೆ. ಜನ ವಿದ್ಯಾವಂತರಾಗಿದ್ದಾರೆ. ಈ ಕಾರ್ಯದಲ್ಲಿ ಸ್ವಲ್ಪಮಟ್ಟಿಗೆ ಸ್ವಾಭಿಮಾನ ಇದ್ದರೆ ಎರಡೂ ಕಡೆ ಇದು ಕಡಿಮೆಯಾಗುತ್ತದೆ. ಬರೀ ಅಧಿಕಾರಿಗಳನ್ನು ತೆಗಳುತ್ತಾ ಹೋದರೆ ಉಪಯೋಗವಿಲ್ಲ. ಲಂಚ ತೆಗೆದುಕೊಳ್ಳುವವರ ಹಾಗೆ ಲಂಚ ಕೊಡುವವರು ಸರ್ವರೂ ಇದ್ದಾರೆ. ಆದುದರಿಂದ ಎರಡೂಕಡೆ ಸ್ವಾಭಿಮಾನ ಬೆಳೆಯಬೇಕು. ಇಂದು ಲಂಚವೇ ಇಲ್ಲ ಎಂದು ಹೇಳುವುದ ಕ್ಕಾಗುವುದಿಲ್ಲ. ಆದಾಗ್ಯೂ ಇದು ಕಡಮೆಯಾಗಿದೆ. ಇವರಿಗೆ ಟೀಕೆ ಮಾಡುವುದಕ್ಕೆ ಯಾವುದಾದರೂ ಒಂದು ಕಾರಣ ಬೇಕು. ಇದನ್ನು ಟೀಕೆ ಮಾಡತಕ್ಕಂಥವರು ಟೀಕೆ ಮಾಡುತ್ತಲೇ ಇದ್ದಾರೆ. ಶ್ರೀಮಾನ್ ವಾಟಾಳ್ ನಾಗರಾಜ ಅವರು ಅಂಥ ಭಾವನೆ ಇಟ್ಟುಕೊಂಡು ಹೇಳುವುದಿಲ್ಲ, ಅವರು ಅಸತ್ಯವನ್ನು ನುಡಿಯುವುದಿಲ್ಲ ಎಂದು ಭರವಸೆ ಇಟ್ಟುಕೊಂಡು ಅವರ ಮಾತನ್ನು ನಂಬೋಣ. ಮಾನ್ಯ ಸದಸ್ಯರು ಈ ಸಭೆಯಲ್ಲಿ ಹೇಳುವುದು ಎಷ್ಟರಮಟ್ಟಿಗೆ ಉತ್ಪ್ರೇಕ್ಷೆ ಇದೆ ಎನ್ನುವುದನ್ನು ಸಭೆ ತೀರ್ಮಾನ ಮಾಡಬೇಕು. ವಿಪರೀತ ಉತ್ಪ್ರೇಕ್ಷೆಮಾಡಿ ಹೇಳಿದ್ದಾರೆ. ತುಮಕೂರಿನ ಮಾನ್ಯಸದಸ್ಯ ರೊಬ್ಬರು ಆ ರೀತಿ ಹೇಳಿದರು. ನಮ್ಮ ರಾಜ್ಯದಲ್ಲಿಯ ಕಬ್ಬಿಣ ಅದಿರನ್ನು ಏತಕ್ಕೆ ಹೊರಗೆ ಕಳಿಸ

ಬೇಕು ಎಂದು ಕೇಳಿದರು. ಈ ವಿಚಾರ ಅವರು ಸಾಕಷ್ಟು ತಿಳುವಳಿಕೆ ಇಲ್ಲದೆ ಮಾತನಾಡ ತಕ್ಕಾಂಥಾದ್ದು. ಕಬ್ಬಿಣ ಅದುರನ್ನು ಹೊರಗಡೆ ಕಳಿಸುವುದಕ್ಕೆ ಸಾಧ್ಯವಿದೆ ಆದುದರಿಂದ ಕಳಿಸ ಬೇಕಾಗುತ್ತದೆ. ನಮಗೆ ಯಾವಾಗ ಫಾರಿನ್ ಎಕ್ಸ್‌ಚೇಂಜ್ ಬೇಕು ಎಂದು ಇರುವಾಗ ಹೆಚ್ಚಿನ ಸಾಮಾನು ಕೆಲವು ಹೊರಗೆ ಕಳಸಬೇಕಾಗುತ್ತದೆ. ಅದುದರಿಂದ ಈಗ ಈ ರೀತಿ ಹೇಳು ವುದನ್ನು ಹತ್ತು ಹದಿನೈದು ವರ್ಷಗಳನಂತರ ಒಂದು ವೇಳೆ ಹೇಳಿದರೆ ಅದನ್ನು ಒಪ್ಪತಕ್ಕಂಥ ಮಾತು.

Sri B. P. GANGADHAR.—Instead of sending the ore for which you are getting pittance, why con't you send the metal?

ಶ್ರೀ ಎಸ್. ನಿಜಲಿಂಗಪ್ಪ.—ಸಾಕಷ್ಟು ಅನುಭವ ಇಲ್ಲದ ಮಾತು ಇದು, ಒಂದು ಸ್ಟೀಲ್ ಪ್ಲಾಂಟ್ ತರಬೇಕಾದರೆ ಎಷ್ಟು ಖರ್ಚಾಗುತ್ತದೆ, ಇದಕ್ಕೆ ದುಡ್ಡು ಇದೆಯೇ? ಫ್ಯಾಕ್ಟರಿ ಇದೆಯೆ? ಅದಕ್ಕೆ ಬೇಕಾಗುವ ಮಿಷಿನರಿ ಇದೆಯೆ? ಇದನ್ನು ಎಲ್ಲಿಂದ ತರುವುದು? ಇದನ್ನು ಹೊರಗಡೆಯಿಂದ ತರಿಸಬೇಕು ಅಂದರೆ ಹತ್ತು ಕೋಟಿ ರೂಪಾಯಿ ಖರ್ಚಾಗುತ್ತದೆ. ಈ ಫ್ಯಾಕ್ಟರಿ ಯನ್ನು ಕೋಲಾಬರೇಷನ್ನಿನಲ್ಲಿ ಪ್ರಾರಂಭಿಸುವುದಕ್ಕೆ ಫ್ರಾನ್ಸ್, ವೆಸ್ಟ್ ಜರ್ಮನಿ, ಅಮೇರಿಕ, ರಸಿಯಾ ಈ ದೇಶಗಳೊಡನೆ ವಿಚಾರ ವಿನಿಮಯ ನಡೆದಿದೆ. ಈ ಫ್ಯಾಕ್ಟರಿ ಆಗಬೇಕು ಎಂದು ನಮಗೂ ಇಷ್ಟವಿದ್ದರೂ ಕೂಡ ಇದು ಕೂಡಲೇ ಆಗತಕ್ಕಂಥ ಮಾತಲ್ಲ. ಇದಕ್ಕೆ ಗಮನ ಕೊಟ್ಟಿದೆ. 15–20 ವರ್ಷಗಳಲ್ಲಿ ಇದನ್ನು ಕೊಡುವುದಕ್ಕೆ ಸಾಧ್ಯವಾದೀತು.

ಎಪ್ಪತ್ತು ವರ್ಷ ವಯಸ್ಸು ಮೇಲ್ಪಟ್ಟವರಿಗೆ ವೃದ್ಧಾಪ್ಯ ವೇತನ ಕೊಡಬೇಕು ಅಂದರೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ನಮ್ಮ ಹಣ ಕಾಸಿನ ಪರಿಸ್ಥಿತಿ ಉತ್ತಮವಾಗುವವರೆಗೆ ಈ ಕೆಲಸ ಸರಿಯಾಗಿ ಆಗುವುದಿಲ್ಲ. ಅವರು ಬರಿ ತತ್ವ ಹೇಳುತ್ತಾರೆ. ಅದು ಆಗಬಾರದು ಇದು ಆಗಬಾರದು ಎಂದು, ಅದು sublime to the ridiculous ಎಂದು ಅನೇಕ ರೀತಿ ತತ್ವ ಹೇಳು ತ್ತಾರೆ. ಒಬ್ಬ ತಹಶೀಲುದಾರನಿಗೆ ಏನೋ ಆಯಿತು ಅದನ್ನೇ ಸೃಷ್ಟಿಸುತ್ತಾರೆ. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಮೇಲೆ ಏನೋ ಅನುಮಾನ ಆಯಿತು, ಏನೋ ತಪ್ಪು ಆಯಿತು ಅಂದರೆ ಎಲ್ಲರೂ ತಪ್ಪು ಮಾಡತಕ್ಕಾಂಥಾದ್ದು ಎಂದು ಹೇಳುವುದು ಸರಿಯಾಗಿ ಕಾಣುವುದಿಲ್ಲ. ಆದುದರಿಂದ ವಿಷಯ ತಿಳಿದುಕೊಂಡು ಅದನ್ನು ಸರಿಯಾಗಿ ವಿಚಾರಮಾಡಿ ಹೇಳಬೇಕಾದುದ್ದು ಅವಶ್ಯಕ. ಈ ವಿಚಾರಗಳನ್ನು ಹೇಳತಕ್ಕಂಥ ಮಾತಿನಲ್ಲಿ ಅದನ್ನು ವಿಚಾರ ಮಾಡುವಾಗ ಅದರಲ್ಲಿ ಎಷ್ಟು ಸತ್ಯಾಂಶ ಇದೆ ಇದನ್ನು ವಿಚಾರ ಮಾಡಿ ಹೇಳಬೇಕು.

Sri M. NAGAPPA (Raichur)—I raise a point of order Sir. The Chief Minister just now used the words *viz.*, sublime to the ridiculous. I want to know whether these words are parliamentary words. Such words have once been used and have been deprecated in the House of people. You can refer this in volume 8, 55, page 4081. You can see the same words have been used and they have been deprecated. I want the Chair to clarify this.

Mr. CHAIRMAN.—Hon'ble Memb r Sri Nagappa has raised a point of order pleading that the words sublime to the ridiculous are unparlimentary. The words become Parliamentary or unparlimentary depending upon the context in which they are used. I find there is nothing wrong about the use of these words in the context in which the Chief Minister has used them. Hence there is no point of order.

ಶ್ರೀ ಎಸ್. ನಿಜಲಿಂಗಪ್ಪ.—ಹೀಗೂ ಇದು ನಡೆಯುತ್ತಾ ಇರುತ್ತದೆ, ಇದು ನನಗೆ ಗೊತ್ತು. ಆದಾಗ್ಯೂ ಇದನ್ನು ಕಡಮೆ ಮಾಡಬೇಕೆಂದು ಸರಕಾರ ನಾನಾ ಕ್ರಮಗಳನ್ನು ಕೈಗೊಂಡಿದೆ. ಈ ವಿಚಾರದಲ್ಲಿ ವಿಜಿಲೆನ್ಸ್ ಕಮಿಷನ್ ನೇಮಕ ಮಾಡಿದ್ದೇವೆ. ಅದರ ಕಾರ್ಯಾಚರಣೆಯಲ್ಲಿ ಸಾಕಷ್ಟು ಜನ ಸಿಕ್ಕುತ್ತಾ ಇದ್ದಾರೆ. ಮಾನ್ಯ ಸದಸ್ಯರೊಬ್ಬರು ಹೇಳಿದರು ದೊಡ್ಡ ಮನುಷ್ಯ ರಾದವರೊಬ್ಬರಿಗೆ ಸ್ವಲ್ಪ ದರದಲ್ಲಿ ಜಾಗ ಕೊಡಿಸಿದ್ದೇವೆ ಎಂದು. ಅದನ್ನು ವಿಚಾರಮಾಡಿ ವಿಚಾರ ಏನು ಅನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ.

Sri B. P. GANGADHAR.—Sri V. V. Giri made an application and got a big plot. This plot has been given to him at a bargain rate. Some of these plots were sold to some of these big people. This is the Congress bureaucracy and hierarchy ruling in our country.

Mr. CHAIRMAN.—Members should not name anybody here.

Sri B. P. GANGADHAR.—In fact such things must be condemned.

ಶ್ರೀ ಎಸ್. ನಿಜಲಿಂಗಪ್ಪ.—ಈಗ ಅವರ ಹೆಸರು ತಂದು ಹೇಳಭಾರದಾಗಿತ್ತು. ಆದರೂ ಕೂಡ ಅವರು ಹೇಳಿದ್ದಾರೆ. ವಿಚಾರಮಾಡಿ ತಿಳಿದುಕೊಳ್ಳಬೇಕಾದುದು ಆವಶ್ಯಕ. ಇಂಥಾದ್ದನ್ನು ನನಗೆ ತಿಳಿಸಬೇಕು, ಕೆಲವರು ತಿಳಿಸುತ್ತಾರೆ, ಅದನ್ನು ವಿಚಾರ ಮಾಡುತ್ತೇನೆ.

Sri B. P. GANAGADHAR.—May I know whether conditions can be enforced and the grant can be cancelled. If what I have stated is true, will Government take action ?

(ಗಲಾಟೆ—ಗೊಂದಲ)

ಶ್ರೀ ಎಸ್. ನಿಜಲಿಂಗಪ್ಪ.—ಅದು ಅರ್ಥವಿಲ್ಲದ ಮಾತು.

Sri B. P. GANGADHAR,—I can take the consequences. Are you going to take action ?

Sri S. NIJALINGAPRA.—I am going to take notice of that. I have said that. I think he must be satisfied with it.

Sri B. P. GANGADHAR.—Are you really going to take action ?

Sri S. NIJALINAPPA.—I have said enough. I have understood him. But he goes on saying the same thing. I have understood you and that is why I told you that I am going to take action.

ಕೆಲವು ಪುಕಾರುಗಳು ಬಂದಿವೆ. ಅಂತಹ ಕೆಲವು ಪುಕಾರುಗಳು ಬಂದಾಗ ಒಬ್ಬ ಅಧಿಕಾರಿಯ ಸಂಬಳ ಎಷ್ಟು ಬರುತ್ತದೆ, ಅವನು ಅದಕ್ಕಿಂತ ಹೆಚ್ಚು ಆಸ್ತಿಯನ್ನು ಸಂಪಾದನೆ ಮಾಡಿದರೆ ಅದನ್ನು ವಿಚಾರ ಮಾಡಬೇಕಾದ್ದು ಕರ್ತವ್ಯ. ಕೆಲವು ವಿಚಾರ ಮಾಡಬೇಕಾದ್ದು ಇವೆ. ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಈ ರೀತಿ ಯಾವುದಾದರೂ ಪುಕಾರು ಇದ್ದು ಈ ರೀತಿ ಆಸ್ತಿ ಮಾಡಿದರೆ ತಮ್ಮ ಹೆಸರು ಹೇಳುವುದಿಲ್ಲ, ವಿಚಾರ ಮಾಡುತ್ತೇನೆ ಎಂದು ಹೇಳುತ್ತೇನೆ. ಅದು ಮಾಡತಕ್ಕದ್ದು ನ್ಯಾಯ ಮತ್ತು ಅವಶ್ಯಕ ಹಾಗೂ ತಡ ಆಗುತ್ತಾ ಇದೆ ಎಂದು ಹೇಳುತ್ತಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಗೋರವಾಲಾ ರಿಪೋರ್ಟ್ ಮತ್ತು ಎ. ಜಿ. ರಾಮಚಂದ್ರರಾಯರ ರಿಪೋರ್ಟ್ ಓದಿದರು. ನಾನು ಇಷ್ಟು ಹೇಳಲು ಇಷ್ಟಪಡುತ್ತೇನೆ. ಮಂತ್ರಿಮಂಡಲದಲ್ಲಿ ಸಾಧಾರಣವಾಗಿ ತಡ ಆಗುತ್ತಾ ಇಲ್ಲ. ಅದು ಆದಷ್ಟುಮಟ್ಟಿಗೆ ಕಡಿಮೆ ಆಗಿದೆ. ತಡ ಆಗುತ್ತಾ ಇರುವುದು ಕೆಲವುಮಟ್ಟಿಗೆ ರಿಪೋರ್ಟ್ ಬರಬೇಕಾದರೆ ತಿಂಗಳುಗಟ್ಟಲೆ ಆಗುತ್ತದೆ. ಕೆಲವುಕಡೆ 15 ದಿವಸದಲ್ಲಿ ಕಳುಹಿಸಬೇಕಾದ ರಿಪೋರ್ಟ್ 15 ತಿಂಗಳು ತೆಗೆದುಕೊಳ್ಳುತ್ತದೆ. ಅದಕ್ಕೆ ಎಕ್ಸ್‌ಪ್ಲನೇಷನ್ ಕೇಳುತ್ತಿದ್ದೇವೆ. ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದು ಇದ್ದರೆ, ಡಿಲೇ ಕಾರಣ ಎಂದು ತಿಳಿದುಕೊಂಡಿದ್ದೇವೆ. ಈ ಡಿಲೇಗೆ ಅವಕಾಶ ಇಲ್ಲದೇ ಹೋದರೆ ಲಂಚಕ್ಕೆ ಅವಕಾಶ ಕಡಿಮೆಯಾಗುತ್ತದೆ ಎಂದು ನನ್ನ ಅಭಿಪ್ರಾಯ. ಡಿಲೇ ಕಡಿಮೆ ಮಾಡಬೇಕು ಎನ್ನುವ ಉದ್ದೇಶದಿಂದ ಸರ್ಕಾರದವರು ಈ ಬಗ್ಗೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾ ಇದ್ದಾರೆ ಎಂದು ಹೇಳುವುದಕ್ಕೆ ನಾನು ಸಂತೋಷಪಡುತ್ತೇನೆ. ಕೆಲಸ ಆಗುತ್ತಾ ಇದೆ.

ಮಂತ್ರಿಗಳು ಬಹಳ ಖರ್ಚು ಮಾಡುತ್ತಾರೆ, ಅಟ್ಟಹಾಸದಿಂದ ಜೀವನ ಮಾಡುತ್ತಾರೆ ಎಂದು ಕೆಲವರು ಹೇಳಿದರು ಏನು ಅಟ್ಟಹಾಸದ ಜೀವನ ಮಾಡುತ್ತಾರೋ ಗೊತ್ತಿಲ್ಲ. ನಾಯಿಗೆ ಖರ್ಚು ಮಾಡಿದ್ದಾರೆ ಎಂದು ಹೇಳಿದರು. ನಾಯಿಯೂ ಸಾಕಲಿಲ್ಲ, ಕತ್ತೆಯೂ ಸಾಕಲಿಲ್ಲ, ಕುದುರೆಯೂ

ಸಾಕಲಿಲ್ಲ. 15 ದಿವಸದ ಕೆಳಗೆ 'ಕೋಲಿ' ಜಾತಿಯ ನಾಯಿ ಒಂದು ತಂದು ಕೊಟ್ಟಿದ್ದರು. ಅದಕ್ಕೆ ಔಷಧಿ, ಬಿಸ್ಕತ್ ಮುಂತಾದುವಕ್ಕೆ ತಿಂಗಳಿಗೆ 100-150 ರೂಪಾಯಿ ಖರ್ಚು ಆಗುತ್ತದೆ. ನನ್ನ ಕೈಯಲ್ಲಿ ಸಾಕುವುದಕ್ಕೆ ಆಗುವುದಿಲ್ಲ ಎಂದು ಯಾರೋ ಒಬ್ಬರು ಅಮೇರಿಕಾದಿಂದ ಬಂದ ಶ್ರೀಮಂತರಿಗೆ ಕೊಟ್ಟುಬಿಟ್ಟೆ. ನಾನು ನಾಯಿ ಸಾಕುವುದಕ್ಕೆ ಹೋಗಲಿಲ್ಲ. ಅಟ್ಟಹಾಸದಿಂದ ಜೀವನ ಮಾಡಿಲ್ಲ. ನನಗೆ ಸರ್ಕಾರದವರು ಬಿಳಿಯ ಅಮೇರಿಕಾ ಕಾರು ಕೊಟ್ಟಿದ್ದಾರೆ. ಇದು ಏನಾದರೂ ತಪ್ಪು ಇದ್ದರೆ, ಒಳ್ಳೆಯದು ಬಿಟ್ಟುಬಿಡೋಣ. ಆದುದರಿಂದ ಯಾರೂ ಖರ್ಚುಮಾಡದೇ ಇರುವುದು ನಾವು ಖರ್ಚು ಮಾಡುತ್ತಾ ಇಲ್ಲ. ಸರ್ವೇ ಸಾಧಾರಣವಾದ ಜೀವನ ಮಾಡಿಕೊಂಡು ಹೋಗುತ್ತಿದ್ದೇವೆ. ಮನೆಗೆ ಬಂದರೆ ಗೊತ್ತಾಗುತ್ತದೆ. ಶ್ರೀಮಾನ್ ಚೆಂಗಲರಾಯರೆಡ್ಡಿಯವರ ಶ್ರೀಮಾನ್ ವಿಶ್ವೇಶ್ವರಯ್ಯನವರ ಕಾಲದ ಕುರ್ಚಿಗಳೇ ಇದೆ. ದುರುದ್ದೇಶದಿಂದ ಅನಾವಶ್ಯಕವಾಗಿ ಯಾವ ಮಂತ್ರಿಗಳೂ ಫರ್ನೀಚರ್ ತೆಗೆದುಕೊಳ್ಳುತ್ತಾ ಇಲ್ಲ ದುರ್ವ್ಯಯ ಮಾಡುತ್ತಾ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ಎಸ್. ಶಿವಪ್ಪನವರು ಹೇಳಿದರು 3 ಸಾವಿರ, 4 ಸಾವಿರ ಕೊಡಬಹುದು ಎಂದು ವಿಚಾರ ಮಾಡುವ. ಸರ್ಕಾರಕ್ಕೆ ದುಡ್ಡು ಉಳಿಯುವುದಾದರೆ ಮಾಡಬಹುದು. ನನ್ನ ಅಭ್ಯಂತರ ಇಲ್ಲ. ವಿಚಾರ ತಿಳಿಯದೇ ಊಹೆ ಮಾಡಿಕೊಂಡು ಆಕ್ಷೇಪಣೆ ಮಾಡುವುದು ಸರಿಯಲ್ಲ. ನಾವು ಏನಾದರೂ ದುಂದು ವೆಚ್ಚ ಮಾಡುತ್ತಾ ಇದ್ದರೆ ಬರೆಯಿರಿ, ಕಡಿಮೆ ಮಾಡುವುದಕ್ಕೆ ಸಿದ್ಧನಾಗಿದ್ದೇನೆ. ಯಾವುದು ದುಂದು ವೆಚ್ಚ ಎಂದು ಹೇಳಿದರೆ ಸಾಕು.

ಬಂದಿರತಕ್ಕ ಪುಕಾರುಗಳು ಇವೆ. ಮಂತ್ರಿಗಳು ಕೆಟ್ಟ ಕೆಲಸ ಮಾಡುತ್ತಾರೆಂದು ಎದುರು ಪಕ್ಷದ ನಾಯಕರು ಹೇಳಿದರು. ಅದರ ಬಗ್ಗೆ ನೀವು ಏನು ಮಾಡುತ್ತೀರಿ ಎಂದು ಕೇಳಿದರು. ಎಲ್ಲಾ ವಿಚಾರ ಮಾಡಬೇಕೆಂದು ಮನಸ್ಸು ಆಗಿದೆ, ಎಲ್ಲರಿಗೂ ನೋಟೀಸ್ ಕೊಡೋಣವೆಂದು ಮಾಡಿದ್ದೇವೆ. 1947ನೇ ಇಸವಿಯಿಂದ ಈಚೆಗೆ ಎಲ್ಲಾ ಮುಖಂಡರಿಗೂ ನೋಟೀಸ್ ಕೊಡೋಣ. 1947ನೇ ಇಸವಿಯಲ್ಲಿ ಏನಿತ್ತು, ಇವತ್ತು ಏನಿದೆ, ಅದು ಹೇಗೆ ಬಂತು, ನಿಮ್ಮ ಅಪ್ಪ ಸಂಪಾದನೆ ಮಾಡಿಕೊಟ್ಟಿದ್ದೋ, ಬ್ಯಾಂಕಿನಲ್ಲಿ ಎಷ್ಟಿದೆ, ಅದು ಎಲ್ಲಿಂದ ಬಂತು ಎಂದು ಎಲ್ಲಾ ಕೇಳಬೇಕೆಂದಿದ್ದೇವೆ. ಅದಕ್ಕೆ ಬಹುಶಃ ಈ ಸಭೆ ಒಪ್ಪುತ್ತದೆಂದು ಕಾಣುತ್ತದೆ.

Sri H. SIDDAVEERAPPA.— It is very good.

ಶ್ರೀ ಎಸ್. ಗೋಪಾಲಗೌಡ.—ಮಂತ್ರಿಗಳು ಸ್ಟೇಟ್‌ಮೆಂಟ್ ಫೈಲ್ ಮಾಡಬೇಕೆಂದು ಇಂಡಿಯಾ ಸರ್ಕಾರದವರು ಕೇಳಿದ್ದರು. ಆದರೆ ಮೈಸೂರಿನವರಾರೂ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಯಾರು ಕೊಟ್ಟಿಲ್ಲ, ಏತಕ್ಕೆ ಕೊಟ್ಟಿಲ್ಲ ಎನ್ನುವುದನ್ನು ವಿಚಾರ ಮಾಡುತ್ತೇನೆ. ಹೋದ ಏಪ್ರಿಲ್ ತಿಂಗಳಲ್ಲಿ ಆಸ್ತಿ ಎಷ್ಟು ಇತ್ತು, ಈ ವರ್ಷ ಏಪ್ರಿಲ್‌ನಲ್ಲಿ ಎಷ್ಟು ಇದೆ ಎನ್ನುವುದನ್ನು ಎ.ಐ.ಸಿ.ಸಿ. ಆಫೀಸಿಗೆ ಕಳುಹಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಮಕ್ಕಳ ಪಾಲು ಇದೆ. ಅದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ತನ್ನ ಹೆಸರಿನಲ್ಲಿ ಮಾತ್ರವಲ್ಲ, ಹೆಂಡತಿ ಹೆಸರಿನಲ್ಲಿಯೂ ಆಸ್ತಿ ಮಾಡಿರುತ್ತಾರೆ.

ಶ್ರೀ ಎಲ್. ಶ್ರೀಕಂಠಯ್ಯ (ನಂಜನಗೂಡು).—ವ್ಯಕ್ತಿಯ ಬಗ್ಗೆ ಮಾತ್ರ ಕೊಟ್ಟರೆ ಸಾಲುವುದಿಲ್ಲ. ಹೆಂಡತಿ, ಮಗ, ದೊಡ್ಡಪ್ಪನ ಮಗ, ಚಿಕ್ಕಪ್ಪನ ಮಗ, ಬಂಧುವರ್ಗದವರು ಎಲ್ಲರದೂ ಕೊಡಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಬಹಳ ಜನ ಹೆಂಡತಿ ಹೆಸರಿಗೆ ಮಾಡುತ್ತಾರೆ, ಮಕ್ಕಳ ಹೆಸರಿಗೆ ಮಾಡುತ್ತಾರೆ. ಎಲ್ಲಾ ತರಿಸೋಣ. ಯಾರ ವಿಚಾರದಲ್ಲಿ ಅನುಮಾನ ಇದ್ದರೂ ಬರೆದು ಕೊಡಿ. ಅದರಂತೆ ಕಳುಹಿಸುತ್ತೇನೆ. ಇದು ಆವಶ್ಯಕ. ಜನಗಳು ಬಹುಶಃ ಹೇಳಿದ್ದನ್ನು ನಂಬುತ್ತಾರೆ. ಒಬ್ಬರು 50 ಲಕ್ಷ ಸಂಪಾದನೆ ಮಾಡಿದ್ದಾರೆ ಎಂದು ಹೇಳಿದರೆ ನಂಬುತ್ತಾರೆ, ನಾನು ಒಂದು ಉದಾಹರಣೆ ಹೇಳುತ್ತೇನೆ. ನಾನು ಬೆಂಗಳೂರಿನಲ್ಲಿ ಸಾಲು ಸಾಲಾಗಿ ಎಂಟು ಮನೆಗಳನ್ನು ಕಟ್ಟಿಸಿದ್ದೇನೆಂದು ಹೇಳುತ್ತಿದ್ದಾರೆ. ಅದಕ್ಕೆ ನಾನು ಸ್ಟಾಂಪಿನ ಖರ್ಚು ಕೊಡಿ, ರಿಜಿಸ್ಟ್ರೇಷನ್ ಖರ್ಚು ಕೊಡಿ, ನಾನು ಅದನ್ನು ಬರೆದುಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಬಿ. ಪಿ. ಗಂಗಾಧರ್.—ಆ ರೀತಿ ಬರೆದುಕೊಟ್ಟರೆ ಬಹಳ ರಿಸ್ಕ್ ಇದೆ. ಮನೆಗಳು ಇವರದ್ದಲ್ಲ, ಬೇರೆಯವರದ್ದು, ಅದರ ಬದಲು ದುಡ್ಡು ಕೊಡಿ ಎಂದು ರೆಕವರಿ ಆಫ್ ಪರ್ಚೇಸ್ ಹಣಕ್ಕೆ ಕೋರ್ಟಿಗೆ ಹೋಗುತ್ತಾರೆ.

ಶ್ರೀ ಎಸ್. ನಿಜಲಿಂಗಪ್ಪ.—ನಿಮಗಿಂತ ಚೆನ್ನಾಗಿ ನನಗೆ ಕಾನೂನು ಗೊತ್ತಿದೆ. ಸದಸ್ಯರಿಗಿಂತ ಕಾನೂನು ನನಗೆ ಚೆನ್ನಾಗಿ ಗೊತ್ತಿದೆ. ನನ್ನ ಸನ್ನದನ್ನು ಹೈಕೋರ್ಟಿನವರು ಕಿತ್ತುಕೊಂಡಿದ್ದಾರೆ. ನಾನು ಹೇಳಿದ್ದು ಮುಫತ್ತಾಗಿ ದಾನ ಮಾಡುತ್ತೇನೆಂದು. ಜನರು ಹೇಗೋ ಏನೋ ಊಹೆ ಯಿಂದಲೋ, ದುರಭಿಪ್ರಾಯದಿಂದಲೋ, ಹೊಟ್ಟೆಕಿಚ್ಚಿನಿಂದಲೋ ಹೇಳುತ್ತಾರೆ. ಅದನ್ನು ನಂಬುತ್ತೇವೆ ಮತ್ತು ನಂಬಿ ಪಬ್ಲಿಕ್ ಮೀಟಿಂಗ್‌ನಲ್ಲಿಯೂ, ಆ ವಿಚಾರ ಮಾತನಾಡುತ್ತೇವೆ, ಮತ್ತು ಇಲ್ಲಿಯೂ ಮಾತನಾಡುತ್ತೇವೆ. ಅಂಥವರ ವಿಚಾರದಲ್ಲಿ ನನಗೆ ಕನಿಕರ ಹುಟ್ಟುತ್ತದೆಯೇ ಹೊರತು ಸಿಟ್ಟು ಬರುವುದಿಲ್ಲ. ಆದ್ದರಿಂದ ಈ ಒಂದು ದೃಷ್ಟಿಯಿಂದ ಹೇಳುವುದು, ಯಾರು ಯಾರಿಗೆ ಏನು ಏನು ಅನುಮಾನ ಬರುತ್ತದೋ, ಅದನ್ನು ಒಂದು ವಾರ, ಎರಡು ವಾರದೊಳಗೆ ಬರೆಯಿರಿ, ವಿಚಾರ ಮಾಡೋಣ.

ಶ್ರೀ ಎಸ್. ಗೋಪಾಲಗೌಡ.—ತಾವು ಹೇಳಿದ್ದು ಒಳ್ಳೆಯದು ಆಯಿತು. ಒಂದು ವಿಚಾರ. ಒಂದು ಆಯೋಗ ಅಥವಾ ಕಮೀಷನ್ ರಚನೆ ಮಾಡಿಬಿಡಿ. ದೂರು ಕೊಡುವವರೆಲ್ಲಾ ಅವರಿಗೆ ಕೊಡಬಹುದು.

ಶ್ರೀ ಎಸ್. ನಿಜಲಿಂಗಪ್ಪ.—ಆಧಾರ ಇದ್ದರೆ ಮಾಡಬಹುದು. ಪ್ರಾಮಿಸ್ಸರಿ ನೋಟು ಇದ್ದರೆ ದಾವ ಹಾಕಬಹುದು. ಪತ್ರ ಇದ್ದರೆ ದಾವ ಹಾಕಬಹುದು.

ಶ್ರೀ ಎಸ್. ಶಿವಪ್ಪ.—ಈಗ ಒಳ್ಳೆಯ ಬುದ್ಧಿ ಬಂದಿದೆ.

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲರಿಗೂ ಕಳುಹಿಸುತ್ತೇನೆ. ಮಂತ್ರಿಗಳು ಆಗಿದ್ದವರು, ಕಾಂಗ್ರೆಸ್ ಪ್ರೆಸಿಡೆಂಟರು ಆಗಿದ್ದವರು, ಕಾಂಗ್ರೆಸ್ ಮುಖಂಡರುಗಳು ಆಗಿದ್ದವರು, ಪುಡಾರಿಗಳ್ ಆಗಿದ್ದವರು ಎಲ್ಲರಿಗೂ ಕಳುಹಿಸೋಣ. ಹಾಗೆ ಮಾಡಿದರೆ ಕೆಲವು ಮಟ್ಟಿಗಾದರೂ ವಾತಾವರಣ ತಿಳಿಯಾಗಲಿ.

ಶ್ರೀ ಎಚ್. ಸಿದ್ಧವೀರಪ್ಪ.—ಇದೇ ಸುದಿನ.

ಶ್ರೀ ಎಸ್. ನಿಜಲಿಂಗಪ್ಪ.—ಕೆಲವರಿಗೆ ದುರ್ದಿನವಾಗುತ್ತದೆ.

ಶ್ರೀ ಎಚ್. ಸಿದ್ಧವೀರಪ್ಪ.—ಯಾರು ಉಪ್ಪು ತಿಂದಿದ್ದಾರೋ, ಅವರು ನೀರು ಕುಡಿಯಲಿಕ್ಕೇ ಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಸಾಕಷ್ಟು ಜನರಿಗೆ ನೀರು ಕುಡಿಸಬೇಕು ಎಂದು ಮಾಡಿದ್ದೇನೆ.

ಶ್ರೀ ಎರ್. ಶ್ರೀಕಂಠಯ್ಯ.—ಏನಾದರೂ ಹೇಳಬೇಕೆಂದರೂ ಹೇಳಿ, ವಿಚಾರಣೆ ಮಾಡುತ್ತೇನೆಂದು ಹೇಳುತ್ತೀರಿ. ಪ್ರೈಮಾಫೇಸಿ ಕೇಸ್ ಇದೆಯೆಂದು ಸರ್ಟಿಫೈ ಮಾಡಿದ ಮೇಲೆ ವಿಚಾರಣೆ ಮಾಡುತ್ತೇನೆಂದು ಹೇಳುತ್ತೀರಿ. ಈಗ ಡೈರೆಕ್ಟ್ ಆಗಿ ಇಂಡಿಪೆಂಡೆಂಟ್ ಬಾಡಿ ಬರಲಿ. ಅವರ ಮುಂದೆ ಹೇಳುತ್ತೇವೆ. ನೀವು ಸರ್ಟಿಫೈ ಮಾಡಿ, ಪ್ರೈಮಾಫೇಸಿ ಕೇಸ್ ಇದೆ ಎಂದು ಹೇಳುವುದು ಬೇಡ.

ಶ್ರೀ ಎಚ್. ಸಿದ್ಧವೀರಪ್ಪ.—ಮೊದಲು ವಿಚಾರಣೆ ಮಾಡುವುದು ಆಗಲಿ. You issue notice to everybody. This is what this House means. Therefore you disclose what you were and what you are. You start from 1947.

Sri S. NIJALINGAPPA.—It is all very good. I want the whole of this dirty linen to be washed in the public. In the imagination of the people, all this dirty linen that is in existence, we shall wash it. Whoever is guilty, will be punished. Let me also say, whoever indulges in false allegations, let him also be punished.

6-00 P.M.

ಶ್ರೀ ಎಲ್. ಶ್ರೀಕಂಠಯ್ಯ.—ಎನ್‌ಕ್ವೈರಿ ಮಾಡಿ ಕಸದ ಬುಟ್ಟಿಗೆ ಹಾಕುವುದಕ್ಕೆ ಬದಲಾಗಿ ಒಂದು ಇಂಡಿಪೆಂಡೆಂಟ್ ಕಮಿಷನ್ ನೇಮಕ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಒಪ್ಪುವುದಕ್ಕಾಗುವುದಿಲ್ಲ, ಆ ಪ್ರಮೇಯ ಬಂದರೆ ಯೋಚನೆ ಮಾಡೋಣ. ಎಲ್ಲವನ್ನೂ ಗಮನಿಸಿ ವಿಚಾರಮಾಡಿ ಸೂಕ್ತವಾದುದನ್ನು ಮಾಡೋಣ.

ಶ್ರೀ ಎಚ್. ಸಿದ್ಧವೀರಪ್ಪ.—ವಿಚಾರಣೆ ಮಾಡಲು ನೀವೇನು ನೋಟೀಸು ಕೊಡುತ್ತೀರಿ, ಅದಕ್ಕೇನು ಉತ್ತರ ಬರುತ್ತದೆ, ಮುಂದೇನಾಯಿತು ಎಂಬುದನ್ನೆಲ್ಲಾ ಈ ಸಭೆಯ ಮುಂದೆ ಇಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ವಿಚಾರ ಮಾಡೋಣ. ಸುಮ್ಮಸುಮ್ಮನೆ ಆಕ್ಷೇಪಣೆ ಮಾಡುವವರಿಗೂ ಶಿಕ್ಷೆ ಮಾಡಬೇಕು, ಅನ್ಯಾಯವಾಗಿ ಸಂಪಾದನೆ ಮಾಡಿರುವವರಿಗೂ ಶಿಕ್ಷೆ ಮಾಡಬೇಕು. ಹಾಗೆ ಮಾಡದಿದ್ದರೆ ಪಬ್ಲಿಕ್ ಲೈಫ್ ಪರಿಶುದ್ಧ ಆಗುವುದಿಲ್ಲ. ಆದುದರಿಂದ ಇದನ್ನು ಮಾಡಬೇಕೆಂದು ಹೇಳಿದ್ದೇನೆ.

ಶ್ರೀ ಎಸ್. ಶಿವಪ್ಪ.—ಬಹಳ ಧೈರ್ಯದಿಂದ ಹೇಳಿದ್ದೀರಿ.

ಶ್ರೀ ಎಸ್. ನಿಜಲಿಂಗಪ್ಪ.—ಧೈರ್ಯಕ್ಕೇನೂ ಕಡಿಮೆಯಿಲ್ಲ. ಇತರರ ಮನಸ್ಸನ್ನು ನೋಯಿಸಲು ನಾನು ಏನೂ ಹೇಳುತ್ತಿಲ್ಲ. ಇನ್ನು ಹೇಳಬೇಕಾದ ವಿಚಾರವೇನೂ ಉಳಿದಿಲ್ಲವೆಂದು ಕಾಣುತ್ತದೆ. ಆದುದರಿಂದ ಮಾನ್ಯ ಸದಸ್ಯರು ಸಭೆಯ ಮುಂದೆ ಮಂಡಿಸಿರುವ ಬೇಡಿಕೆಯನ್ನು ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ.

† ಶ್ರೀ ಎಸ್. ಆರ್. ಕಂಠಿ.—ಸನ್ಮಾನ್ಯ ಅಧ್ಯಕ್ಷರೇ, 9 ಮತ್ತು 11—ಈ ಎರಡು ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರು ಬಹಳ ಕಡಮೆ ಮಾತನಾಡಿದ್ದಾರೆ ಎಂದು ಭಾವಿಸಿದ್ದೇನೆ. ಮಾತನಾಡಿರುವವರು ನಿರ್ವಿಕಾರ ಬುದ್ಧಿಯಿಂದ ಮಾತನಾಡಿದ್ದಾರೆ, ಸರಿಯಾದ ಸೂಚನೆ ಕೊಟ್ಟಿದ್ದಾರೆ ಎಂದು ಭಾವಿಸಿದ್ದೇನೆ. ಶ್ರೀಮಾನ್ ಸಿದ್ಧವೀರಪ್ಪನವರ ಜೊತೆಯಲ್ಲಿ ಲಾಂಜಿನಲ್ಲಿ ನಾನು ಯಾವಾಗಲಾದರೂ ಹರಟೆ ಹೊಡೆಯುವುದುಂಟು, ಆ ಸಮಯದಲ್ಲಿ ಒಂದು ವಚನವನ್ನು ಹೇಳುವುದಾಗಿ ತಿಳಿಸಿದ್ದೆ. ಈಗ ಬಸವಣ್ಣನವರ ವಚನವನ್ನು ಸ್ವಲ್ಪ ಮಾರ್ಪಾಡು ಮಾಡಿ ಹೇಳುತ್ತೇನೆ. ಅದು ಈ ರೀತಿ ಇದೆ: "ಮಾಡಿ ಮಾಡಿ ಕೆಟ್ಟರು, ಹಾಡಿ ಹಾಡಿ ಕೆಟ್ಟರು, ಇದು ಸತ್ಯಕ್ಕೆ ಅಗದು ಸಿದ್ಧ ಬಸವೇಶ್ವರಾ" ಈ ದಿವಸ ಅರ್ಥವಿಲ್ಲದೆ ಯಾರೂ ಮಾತನಾಡಿಲ್ಲ. ಕೆಲವರಿಗೆ ತಪ್ಪು ಭಾವನೆ ಬಂದಿದೆ, ಅದನ್ನು ನಿವಾರಣೆ ಮಾಡುವುದಕ್ಕೆ ನಾಲ್ಕು ಮಾತುಗಳನ್ನು ಹೇಳುತ್ತೇನೆ.

ಮೊದಲನೆಯದಾಗಿ ಕೆಲವು ಸದಸ್ಯರು ಮೇಲ್ಮನೆಯನ್ನು ತೆಗೆದುಹಾಕಬೇಕೆಂದು ಹೇಳಿದರು. ಈ ಸೂಚನೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಅದನ್ನು ತೆಗೆದುಹಾಕುವುದಕ್ಕೆ ಸರಕಾರಕ್ಕೆ ಬರುವುದಿಲ್ಲ, ಅದನ್ನು ತೆಗೆಯಲು ಈ ಮನೆಗೆ ಅವಕಾಶವಿರುವುದು. ಅದೇ ಪ್ರಕಾರ ಈ ವಿಚಾರವನ್ನು ಅವರ ಮುಂದೆ ಇಡುತ್ತಿದ್ದೇನೆ. ಆರ್ಟಿಕಲ್ 169ರಲ್ಲಿ ಈ ರೀತಿ ಇದೆ :

> "Article 169: (1): Notwithstanding anything in article 168, Parliament may by law provide for the abolition of the Legislative Council of a State having such a Council or for the creation of such Council in a State having no such Council, if the Legislative Assembly of the State passes a resolution to that effect by a majority of the total membership of the Assembly and by a majority of not less than two-thirds of the Members of the Assembly present and voting."

ಹೀಗೆ ಈ ಮನೆಗೆ ಅಧಿಕಾರವಿದೆ. ಆದುದರಿಂದ ಸರಕಾರಕ್ಕೆ ವಿಧಾನ ಪರಿಷತ್ತನ್ನು ತೆಗೆದುಹಾಕುವುದಕ್ಕೆ ಇಷ್ಟವಿಲ್ಲ ಎಂದು ಹೇಳುವುದು ಸರಿಯಲ್ಲ ಎಂದು ಹೇಳಬೇಕಾಗಿದೆ.

ಶ್ರೀ ಎಂ. ನಾಗಪ್ಪ.—ಹಾಗಾದರೆ ಈ ಬಗ್ಗೆ ಒಂದು ನಿರ್ಣಯ ತಂದರೆ ಅದಕ್ಕೆ ಬೆಂಬಲ ಕೊಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಬೆಂಬಲ ಕೊಡುತ್ತೇವೆಯೇ, ಇಲ್ಲವೇ ಎಂಬುದು ಬೇರೆ ಮಾತು. ಅವರಿಗೆ ಬಹಳ ಉತ್ಸಾಹವಿದೆ. ನಾನು ಮುಂಬಯಿಯ ಅಸೆಂಬ್ಲಿಯಿಂದ ಬಂದಿದ್ದೇನೆ. ಅಲ್ಲಿ ಇಂಥ ಒಂದು ನಿರ್ಣಯ ಹಿಂದೆ ಅಂಗೀಕಾರವಾದರೂ ಕೂಡ ಪಾರ್ಲಿಮೆಂಟ್ ಏನೂ ಮಾತಿಲ್ಲ.

(ಶ್ರೀ ಎಸ್. ಆರ್. ಕಂಠಿ)

ಆದುದರಿಂದ ನಾವೇನೂ ಮಾಡಿಲ್ಲವೆಂದು ಹೇಳುವಹಾಗಿಲ್ಲ. ಯಾವ ಯಾವ ರಾಜ್ಯಗಳಲ್ಲಿ ಮೇಲ್ಮನೆಯಿದೆ ಎಂಬುದನ್ನು ಹೇಳಬೇಕೆಂದಿದ್ದೇನೆ. ಆಂಧ್ರದಲ್ಲಿ ಮೇಲ್ಮನೆಯಿಲ್ಲವೆಂದು ಶ್ರೀ ಬಂಗಾರಪ್ಪನವರು ಹೇಳಿದರು; ಅದು ಸರಿಯಲ್ಲ, ಅಲ್ಲಿ ಅಪ್ಪರ್ ಹೌಸ್ ಇದೆ, ಬಿಹಾರ, ಮದ್ರಾಸು, ಮೈಸೂರು, ಮಹಾರಾಷ್ಟ್ರ, ಪಂಜಾಬು, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಜಮ್ಮು—ಕಾಶ್ಮೀರ—ಹೀಗೆ 9 ರಾಜ್ಯಗಳಲ್ಲಿ ಅಪ್ಪರ್ ಹೌಸ್ ಇದೆ. ಇದನ್ನು ತೆಗೆಯುವ ಕಾರ್ಯ ವಿದೆ, ಈಗ ಮುಖ್ಯವಾಗಿ ಒಂದು ಆಯೋಗವು ಈ ವಿಚಾರವನ್ನು ಪರಿಶೀಲಿಸುತ್ತಿದೆ.

ಎರಡನೆಯದು ಕನ್ನಡ ಭಾಷೆಯನ್ನು ಕೋರ್ಟ್ ಲ್ಯಾಂಗ್ವೇಜ್ ಆಗಿ ಮಾಡಬೇಕು ಎಂಬುದು.

ಶ್ರೀ ಎನ್. ಶ್ರೀಕಂಠಯ್ಯ.—ತಮ್ಮ ಅಭಿಪ್ರಾಯವನ್ನು ಖಚಿತವಾಗಿ ತಿಳಿಸಲಿಲ್ಲ.

ಶ್ರೀ ಎಸ್. ಆರ್. ಕಂಠಿ.—ನನ್ನ ಅಭಿಪ್ರಾಯ ಅಷ್ಟು ಮಹತ್ವದ್ದಲ್ಲ.

ಶ್ರೀ ಎಂ. ನಾಗಪ್ಪ.—ಸರಕಾರದ ಅಭಿಪ್ರಾಯ ಹೇಳಿ.

ಶ್ರೀ ಎಸ್. ಆರ್. ಕಂಠಿ.—ಈ ಕೆಲಸ ಈ ಸಭೆ ಮಾಡಬೇಕು, ಸರಕಾರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಶ್ರೀಕಂಠಯ್ಯ.— ಸರಕಾರದ ನಿಲುವೇನು ?

ಶ್ರೀ ಎಸ್. ಆರ್. ಕಂಠಿ.—ನಾವು ವಿಚಾರ ಮಾಡಿಲ್ಲ. ಹಾಗಿರುವಾಗ ಹೇಗೆ ಹೇಳಲು ಸಾಧ್ಯ ? ಕನ್ನಡವನ್ನು ಕೋರ್ಟ್ ಲ್ಯಾಂಗ್ವೇಜ್ ಮಾಡುವ ಸಲುವಾಗಿ ಸೂಚನೆ ಇದೆ. ಈ ಸಂದರ್ಭದಲ್ಲಿ 345ನೆಯ ಆರ್ಟಿಕಲ್ಲಿನ ಪ್ರಾವಿಸೋವನ್ನು ಸಭೆಯ ಗಮನಕ್ಕೆ ತರುತ್ತೇನೆ. ಅದು ಈ ರೀತಿ ಇದೆ :

> Proviso : "Provided that, until the Legislature of the State otherwise provides by Law, the English language shall continue to be used for those official purposes within the State for which it was being used immediately before the commencement of this Constitution."

ರಾಷ್ಟ್ರ್ಯಾಂಗದಲ್ಲಿ ರಾಜ್ಯಕ್ಕೆ ಒಂದು ಅಧಿಕಾರವಿದೆ. ಆ ಅಧಿಕಾರವೇನಿದೆ ಅದನ್ನು ತಿಳಿದು ಒಂದು ಕಾನೂನನ್ನು ಕೂಡ ಮಾಡಿದ್ದೇವೆ. ಅದನ್ನು ಸಭೆಯ ಗಮನಕ್ಕೆ ತರುತ್ತೇನೆ. ಆ ಕಾನೂನಿನ ಹೆಸರು ಮೈಸೂರು ಅಫಿಷಿಯಲ್ ಲ್ಯಾಂಗ್ವೇಜಸ್ ಆಕ್ಟ್ 1963 ಎಂಬುದಾಗಿದೆ. ಆ ಆಕ್ಟಿನ 4ನೆಯ ಸೆಕ್ಷನ್ನಿನಲ್ಲಿ ಈ ರೀತಿ ಇದೆ :

Mysore Official Languages Act 1963 :

> "The State Government may from time to time by Notification in the Official Gazette direct that Kannada shall be used in respect of such official purposes and in such areas as may be specified in the notification."

ಆದರೆ ಹೈಕೋರ್ಟನ್ನು ಕೇಳಿ ಅದರ ತೊಂದರೆಯೇನಿದೆ ಎಂದು ವಿಚಾರ ಮಾಡದೆ ಅದರ ಮನಸ್ಸನ್ನು ತಿಳಿಯದೆ ಈ ಕೆಲಸ ಮಾಡುವುದಕ್ಕಾಗುವುದಿಲ್ಲ.

ಆದ್ದರಿಂದ ಅದಕ್ಕೆ ಕಾಲಹಿಡಿಯುತ್ತದೆ, ಎಂದು ಹೇಳಬೇಕೇ ವಿನಾ ಕೋರ್ಟುಗಳಲ್ಲಿ ಕನ್ನಡ ಭಾಷೆಯನ್ನು ತರುವುದಕ್ಕೆ ಮನಸ್ಸು ಇಲ್ಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ, ಆ ರೀತಿ ಹೇಳಬಾರದು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ನಾಗಪ್ಪ.— ಕನಿಷ್ಠ ಪಕ್ಷ ಕನ್ನಡದಲ್ಲಿ ರೆಕಾರ್ಡ್ ಆದರೂ ಮಾಡುತ್ತೀರಾ? ಆ ಇಚ್ಛೆಯಾದರೂ ಇದೆಯೇ ?

ಶ್ರೀ ಎಸ್. ಆರ್. ಕಂಠಿ.—ಹೋದ ಸಲ ಶ್ರೀಮಾನ್ ಬೊಮ್ಮಾಯಿ'ರವರು ಒಂದು ಪ್ರಶ್ನೆ ಕೇಳಿದರು ಏನೆಂದರೆ, ಮುಂಬೈ ಕರ್ನಾಟಕದ ಭಾಗದಲ್ಲಿ ಕನ್ನಡದಲ್ಲಿ ಮತ್ತು ಮರಾಠಿಯಲ್ಲಿ ಡೆಪೊಸಿಷನ್ ತೆಗೆದುಕೊಳ್ಳುತ್ತಾ ಇದ್ದರು ಅದನ್ನು ನಿಲ್ಲಿಸಿದ್ದೀರಿ ಏಕೆ ಎಂದು ? ಅದಕ್ಕೆ ಕಾರಣವೇ

ನೆಂದರೆ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ, ಇಂಗ್ಲೀಷ್‌ನಿಂದಲೇ ಪ್ರಯೋಜನವಾಗುತ್ತದೆ ಎಂದು ಹೈಕೋರ್ಟಿನವರು ನೋಟಿಫಿಕೇಷನ್ ತೆಗೆದರು. ಅದನ್ನು ನಾವು ಒಪ್ಪಿಕೊಂಡು 318ರ ಪ್ರಕಾರ ನೋಟಿಫಿಕೇಷನ್ ತೆಗೆದಿದ್ದೇವೆ. ಇದರ ಅರ್ಥ ಹೈಕೋರ್ಟಿನವರು ಯಾವ ವಿಚಾರವನ್ನು ಹಿಂದೆಯೇ ಮಾಡಬೇಕೆಂದು ಹೇಳುತ್ತಾರೆ ಅದಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ಸರ್ಕಾರದವರು ಪಾಲಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಹೈಕೋರ್ಟಿನವರು ಏನು ಹೇಳುತ್ತಾರೆ ಅದರ ಪ್ರಕಾರ ನಿಚ್ಚಳವಾದ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ, ಅದನ್ನು ಪರಿಶೀಲನೆ ಮಾಡಿ ಸರ್ಕಾರದವರು ಆ ಒಂದು ನಿಲುವನ್ನು ತೆಗೆದುಕೊಂಡಿದ್ದಾರೆ. ಹೈಕೋರ್ಟಿನಲ್ಲೂ ಕೂಡ ಕನ್ನಡದಲ್ಲಿ ಮಾಡುವುದಕ್ಕೆ ಬರುತ್ತದೆಯೋ ಹೇಗೆ ಎಂಬ ಮಾತನ್ನು ನೋಡಿಸಿದ್ದೇನೆ. The relevant section in the Central Official Languages Act, 1963, is as follows :

> "As from thh appointed day or any day thereafter, the Government of a State may, with the previous consent of President, authorise the use of Hindi or the official language of the State, in addition to the English language for the purposes of any judgement, decree or order passed or made by the High Court for that State and where any judgement, decree or order is passed or made in any such language (other than the English language), it shall be accompanied by a translation in the English language issued under the authority of the High Court."

ಮಾಡಲಿಕ್ಕೆ ಬರುವ ಹಾಗಿದ್ದರೂ ಕೂಡ ಹೈಕೋರ್ಟಿನವರು ಒಪ್ಪಬೇಕಾಗುತ್ತದೆ. ಅದಾದಮೇಲೆ ಯಾವ ಯಾವ ಹಂತದಲ್ಲಿ ಎಷ್ಟೆಷ್ಟು ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ಮಾಡೋಣ ಎಂಬುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ.

ಬಡವರಿಗೆ ಲೀಗಲ್ ಏಡ್ ಕೊಡುವ ವಿಚಾರದ ಬಗ್ಗೆ ಒಂದು ಪ್ರಶ್ನೆ ಬಂದಿದೆ. ಬಾರ್ ಅಸೋಸಿಯೇಷನ್ ಅವರು ಒಪ್ಪಿಲ್ಲ, ಅದನ್ನು ಕೇಳುತ್ತಾ ಇದ್ದೇವೆ. ಅದು ಒಂದು ರೂಪಕ್ಕೆ ಬರುತ್ತದೆ. ಏನಾದರೂ ಒಂದು ನಿರ್ಣಯ ತೆಗೆದುಕೊಳ್ಳಲಿಕ್ಕೆ ಸಾಧ್ಯ ಎಂದು ಹೇಳಿ ನನಗೆ ಅನಿಸುತ್ತದೆ.

ವಿಟ್ನೆಸ್ ಷೆಡ್ಸ್ ಬಹಳ ಕಡೆ ಇಲ್ಲ ಎಂದು ಹೇಳಿದರು. ಅದು ನಿಜ ಬಹಳ ಕಡೆಯಲ್ಲಿ ಇಲ್ಲ, ಬೆಳಗಾಂ ಜಿಲ್ಲೆಯಲ್ಲಿ ಆ ಸ್ಥಿತಿ ಇದೆ ಅಂತ ಅಲ್ಲ ಪ್ರತಿಯೊಂದು ಜಿಲ್ಲೆಯಲ್ಲೂ ಅದೇ ರೀತಿ ಇದೆ. ಈ ವರ್ಷದಿಂದ ಏನಾದರೂ ಪ್ರಯತ್ನ ಮಾಡಿ ವಿಟ್ನೆಸ್ ಷೆಡ್ಸ್‌ನ್ನು ಹಂತ ಹಂತವಾಗಿ ತೆಗೆದುಕೊಳ್ಳುವ ವಿಚಾರ ಮಾಡುತ್ತಾ ಇದ್ದೇವೆ. ಮುನ್ಸಿಫ್ ಜುಡಿಷಿಯಲ್ ಆಫೀಸರ್ಸ್‌ಗೆ ಜಾಗ ಇಲ್ಲ ಅಂತ ಅನ್ನುವಂತಹ ಮಾತು ಗೊತ್ತಿದೆ. ನಾನು ಒಂದು ಕಡೆ ಹೋಗಿದ್ದೆ ಅದು ಬಹಳ ದೊಡ್ಡ ಊರು ಅಲ್ಲಿ ಮುನ್ಸಿಫ್ ಮ್ಯಾಜಿಸ್ಟ್ರೇಟರನ್ನು ಎಲ್ಲಿ ವಾಸಮಾಡುತ್ತಾ ಇದ್ದೀರಿ ಎಂದು ಕೇಳಿದ್ದಕ್ಕೆ ಅವರು, ಜಾಳನಲ್ಲಿ ಅಂದರೆ ಪ್ಲಾಟ್‌ನಲ್ಲಿ ವಾಸಮಾಡುತ್ತಾ ಇದ್ದೇನೆ ಎಂದು ಹೇಳಿದರು. ಅಲ್ಲಿ ಹೇಗೆ ಜಡ್ಜ್‌ಮೆಂಟ್ ಬರೆಯುವುದಕ್ಕೆ ಆಗುತ್ತದೆ, ಶಾಂತಿ ಎಲ್ಲಿ ಇರುತ್ತದೆ ಎಂದು ಕೇಳಿದ್ದಕ್ಕೆ ದೇವರೇಗತಿ ಎಂದು ಹೇಳಿದರು, ಕಷ್ಟ ಇದೆ, ಅದಕ್ಕೆ ಉಪಾಯ ಏನು ಇದೆ ಅದನ್ನು ಹುಡುಕಿಕೊಂಡು ಹಂತ ಹಂತವಾಗಿ ಮಾಡಲಿಕ್ಕೆ ಬರುತ್ತದೆ. ಅದನ್ನು ಮಾಡಬೇಕೆಂಬ ವಿಚಾರ ಇದೆ.

ಆ ಮೇಲೆ ಬೆಂಗಳೂರು ಕೋರ್ಟಿನ ವಿಚಾರ ಹೇಳಿದರು, ಒಂದೇ ಕಾಂಪೌಂಡಿನಲ್ಲಿ ಬರಬೇಕೆಂಬ ವಿಚಾರವನ್ನು ಅವರು ಹೇಳಿದ್ದಾರೆ ಇದರ ವಿಚಾರ ನಡೆಯುತ್ತಾ ಇದೆ. ಮೊನ್ನೆ ದಿವಸ ಬೆಂಗಳೂರು ಬಾರ್ ಅಸೋಸಿಯೇಷನ್‌ನ ಕೆಲವು ಸದಸ್ಯರು ಭೇಟಿಯಾಗಿದ್ದರು ಇದನ್ನು ಸರ್ಕಾರದವರು ಗಮನದಲ್ಲಿ ಇಟ್ಟುಕೊಂಡಿದ್ದೇವೆ. ಮುಖ್ಯವಾದ ಅಂತಹ ಪ್ರಶ್ನೆ ಎಂದರೆ ಯಾವ ರೂಪದಲ್ಲಿ ಯಾವ ಕಾಲದಲ್ಲಿ ತೆಗೆದುಕೊಳ್ಳಬೇಕೆಂಬುದನ್ನು ವಿಚಾರ ಮಾಡುತ್ತಾ ಇದ್ದೇವೆ. ಚಿತ್ರದುರ್ಗದಲ್ಲಿ ಸ್ವಲ್ಪ ಅನುಕೂಲ ಮಾಡಿಕೊಡಬೇಕೆಂದು ಈ ವರ್ಷ 7 ಲಕ್ಷ ರೂಪಾಯಿ ಹಾಕಿ ಕೆಲವು ಕೋರ್ಟುಗಳನ್ನು ಕಟ್ಟಿಸುತ್ತೇವೆ, ಈಗ ಒಂದು ಕೋರ್ಟು ಕಟ್ಟಿಸಿದ್ದೇವೆ, ಮತ್ತೊಂದು ಕೋರ್ಟು ಕಟ್ಟಿಸೋಣ ಎಂಬ ವಿಚಾರ ಮಾಡಿದ್ದೇವೆ.

ಲ್ಯಾಂಗ್ವೇಜ್ ಕಮಿಷನ್ ವಿಚಾರವಾಗಿ ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿದರು. ಅದರ ವಿಚಾರ ಹೇಳಬೇಕಾದರೆ ಲ್ಯಾಂಗ್ವೇಜ್ ಕಮಿಷನ್‌ನ್ನು ಯಾವ ಆರ್ಟಿಕಲ್ ಕೆಳಗೆ ಅಪಾಯಿಂಟ್

(ಶ್ರೀ ಎಸ್. ಆರ್. ಕಂಠಿ)

ಮಾಡಿದ್ದಾರೆ ಎಂಬ ಪ್ರಶ್ನೆಯನ್ನು ಮಾಡಿದರು, ಶ್ರೀಮಾನ್ ಸಿದ್ಧವೀರಪ್ಪನವರು ಮತ್ತು ಸನ್ಮಾನ್ಯ ಸದಸ್ಯರಿಗೆ ಹೇಳಬೇಕಾಗಿದ್ದರೆ ಆರ್ಟಿಕಲ್ 344 ಮತ್ತು ಸಬ್ ಆರ್ಟಿಕಲ್ (6) ಕೆಳಗೆ ಮಾಡಿದ್ದೇವೆ. 344ರ ಕೆಳಗೆ ಪ್ರೆಸಿಡೆಂಟರು ಸೆಂಟ್ರಲ್ ಕಮಿಷನ್ ನೇಮಕ ಮಾಡಿದರು, ಅದಾದಮೇಲೆ ಆ ಕಮಿಷನ್‌ನವರು ಕೆಲವು ಕಮಿಟಿಗಳನ್ನು ಮಾಡಿದರು. ಅದರಲ್ಲಿ ಏನು ಹೇಳಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ :

The Committee has also expressed the opinion that the State Government might be advised to take necessary steps in consultation with the Central authorities.

1960ರಲ್ಲಿ ಸೆಂಟ್ರಲ್ ಕಮಿಷನ್‌ನ ಒಂದು ನೋಟಿಫಿಕೇಷನ್ ಆಯಿತು ಆಮೇಲೆ ಆಕ್ಚ್ಯುಯಲ್ ಆಗಿ ಅದು ನೇಮಕ ಆದದ್ದು 8ನೇ ಜೂನ್ 1961ರಲ್ಲಿ, ಅದರಲ್ಲಿ ಬಹಳ ಜನ ಇದ್ದಾರೆ, ಎರಡು ತರಹ ಇದೆ. ಫುಲ್ ಟೈಂ, ಪಾರ್ಟ್ ಟೈಂ. ಫುಲ್ ಟೈಂ 7 ಜನರು ಇದ್ದಾರೆ. ಪಾರ್ಟ್ ಟೈಂ ಇದ್ದವರು 15+14 ಈ ಪ್ರಕಾರ ಇದ್ದಾರೆ. ಇಂತಹ ಒಂದು ದೊಡ್ಡದಾದಂತಹ ಕಮಿಟಿ 1961ರಲ್ಲಿ ತನ್ನ ಕೆಲಸವನ್ನು ಪ್ರಾರಂಭ ಮಾಡಿತು. ಪ್ರಾರಂಭ ಮಾಡಿದ ತಾರೀಖು 16ನೇ ಏಪ್ರಿಲ್ 1961ರಲ್ಲಿ. 78 ಲಕ್ಷದ 94 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ ಈ ಕಮಿಷನ್ ಏನು ಕೆಲಸ ಮಾಡಿದೆ ಎಂಬ ವಿಚಾರವನ್ನು ಕೇಳಿದ್ದಾರೆ. ನಾನು ಸ್ವಲ್ಪ ಸೆಂಟ್ರಲ್ ಕಮಿಷನ್‌ನವರ ವಿಚಾರ ಹೇಳಿದರೆ ಇದು ಎಷ್ಟು ಕಷ್ಟವಾದಂತಹ ಕೆಲಸ ಎಂಬುದು ಗೊತ್ತಾಗುತ್ತದೆ. ಅದು 1961-62ರಲ್ಲಿ ಕೆಲಸ ಪ್ರಾರಂಭ ಮಾಡಿತು, ಆ ವರ್ಷ ಏನೂ ಕೆಲಸವಾಗಲಿಲ್ಲ.

June.—The Chairman, Vice-Chairman, Member-Secretary, three full-time members have since joined duty and started functioning. The part-time members have also been appointed.

1962-63.—The full Commission met for 85 days during the year 1962-63 and turned out work...The set up of the Commission remains unaltered...Considered the Hindi drafts of the Indian Penal Code, Criminal Procedure Code, Evidence Act and a major portion from the Civil Procedure Code.

1963-64.—The Commission has prepared the official drafts of the Hindi text copy of Civil Procedure Code, 1900, Transfer of Property Act, 1882. Was engaged in preparing the final draft of the Hindi text of the Contract Act, 1872.

The Work Group has also prepared the Hindi version of the Indian Partnership Act, the Sales Goods Act, The Indian Legislation Act and the Negotiable Instruments Act.

1963-64ನೇ ಸಾಲಿನಲ್ಲಿ ಆ ರೀತಿ ಇದೆ. 1964-65ನೇ ಸಾಲಿನಲ್ಲಿ ಸ್ವಲ್ಪ ಕೆಲಸ ಮಾಡಿದ್ದಾರೆ. 24 ಆಕ್ಟ್‌ಗಳನ್ನು ಭಾಷಾಂತರ ಮಾಡಬೇಕಾಗಿದೆ. ಅದು ಬಹಳ ಕಠಿಣ ಕೆಲಸವಾಗಿರುವುದರಿಂದ ಮೊದಲು ಮೊದಲು ಕೆಲಸ ಅಷ್ಟು ಚುರುಕಾಗಿ ಆಗುತ್ತಿರಲಿಲ್ಲ. ಕೇವಲ 6 ಆಕ್ಟ್‌ಗಳನ್ನು ಭಾಷಾಂತರ ಮಾಡಿದ್ದಾರೆ. ಕೇಂದ್ರದ 3 ಆಕ್ಟ್‌ಗಳನ್ನು ಚೆನ್ನಾಗಿ ಭಾಷಾಂತರ ಮಾಡಬೇಕಾಗಿ ಬಂತು. ಆದರೆ ಅವರಿಗೆ ಕೂಡುವುದಕ್ಕೆ ಜಾಗ ಇರಲಿಲ್ಲ. ಚೇರ್‌ಮನ್ ಆಫೀಸಿನಲ್ಲಿಯೇ ಕೆಲವು ಕಾಲ ಕೂತುಕೊಳ್ಳುತ್ತಿದ್ದರು. 1967ನೇ ಸೆಪ್ಟೆಂಬರ್‌ನಲ್ಲಿ ಅವರಿಗೆ ಬೇರೆ ಜಾಗ ಮತ್ತು ಸಿಬ್ಬಂದಿಗೆ ಬೇರೆ ಜಾಗ ಮಾಡಿಕೊಟ್ಟ ಮೇಲೆ ಕೆಲಸ ಚೆನ್ನಾಗಿ ನಡೆಯುತ್ತಿದೆ. ಮೊನ್ನೆ ಯೂನಿಯನ್ ಲಾ ಮಿನಿಸ್ಟರ್ ಬಂದ ಮೇಲೆ ಕೆಲವು ವಿಚಾರಗಳನ್ನು ಅವರೊಡನೆ ನಾವು ಮಾತನಾಡಿದ್ದೇವೆ. ಆ ವಿಚಾರಗಳ ಬಗ್ಗೆ ನಾನು ಈಗಾಗಲೇ ಸಂಪೂರ್ಣವಾಗಿ ಹಾಗೂ ಖಚಿತವಾಗಿ ನಿರ್ಧಾರ ಮಾಡಿದ್ದೇನೆಂದು ಹೇಳುವುದಕ್ಕಾಗುವುದಿಲ್ಲ. ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಈಗ ಏನು ಲ್ಯಾಂಗ್ವೇಜ್ ಕಮಿಷನ್ ಇದೆ, ಅದರಲ್ಲಿ ಒಬ್ಬರು ಫುಲ್‌ಟೈಂ, ಇಬ್ಬರು ಪಾರ್ಟ್ ಟೈಂ ಕೆಲಸಗಾರರು ಇದ್ದಾರೆ. ಆದರೂ ಹೆಚ್ಚಿನ ಕೆಲಸವೇನೂ ಆಗುವುದಿಲ್ಲ. ಆದರೂ ಎಲ್ಲರನ್ನೂ ಫುಲ್‌ಟೈಂ ಆಗಿ ಮಾಡೋಣ. ಅದನ್ನು ಸ್ಟ್ರೆಂಗ್ತನ್ ಮಾಡೋಣ. 10 ವರ್ಷಗಳ ಕಾರ್ಯಕ್ರಮ ಇಟ್ಟುಕೊಂಡಿದ್ದೇವು. ಈಗ 5 ವರ್ಷಗಳಲ್ಲಿಯೇ ಆ ಕಾರ್ಯಕ್ರಮವನ್ನು ಮುಗಿಸಬೇಕೆಂಬ ರಿವೈಸ್ಡ್ ಒಪೀನಿಯನ್ನಿಗೆ ಬಂದಿದ್ದೇವೆ.

Sri L. SRIKANTIAH.—I want one clarification from you. As you know, there are several Law Colleges in the State. At the same time, there is the Legislative staff who translate from English to Kannada. I want to know whether you at any time solicited the help of the Law College or the University ? If you do it at this rate, you will not be able to finish it in your life time.

ಶ್ರೀ ಎಸ್. ಆರ್. ಕಂಠಿ.—ಯೂನಿವರ್ಸಿಟಿಗೆ ಕೊಟ್ಟರೆ, ಲಾ ಕಾಲೇಜಿಗೆ ಕೊಟ್ಟರೆ, ಅದು ತೀವ್ರವಾಗುತ್ತದೆಂದು ಹೇಳುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಅವರಿಗೆ ಕನ್ನಡ ಬರುವುದಿಲ್ಲವೆಂದರೆ ಲಾ ಕಾಲೇಜಿಗೆ ಅಥವಾ ಯೂನಿವರ್ಸಿಟಿಗೆ ಯಾರು ಕಳುಹಿಸುತ್ತಾರೆ ? ಯೂನಿವರ್ಸಿಟಿಯಲ್ಲೇ ಕನ್ನಡ ಮೀಡಿಯಂ ಮಾಡೋಣ. ನಿಮಗೆ ಕನ್ನಡ ಬರುವುದಿಲ್ಲವೆಂಬುದೇ ಒಂದು ಚಿಂತೆಯಾಗಿದೆ.

ಶ್ರೀ ಎಲ್. ಶ್ರೀಕಂಠಯ್ಯ.—ಸಚಿವರಿಗೆ ಕನ್ನಡ ಬರುತ್ತದೆಯೇ ?

ಶ್ರೀ ಎಸ್. ಆರ್. ಕಂಠಿ.—ಕೇಂದ್ರ ಸರ್ಕಾರದಲ್ಲಿಯೂ, ಇಡೀ ರಾಜ್ಯ ಸರ್ಕಾರಗಳಲ್ಲಿಯೂ, ಇದೇ ಪ್ರಕಾರ ಇವೆ. ಕೆಲವು ಕಡೆ ಫುಲ್‌ಟೈಂ, ಮತ್ತೆ ಕೆಲವು ಕಡೆ ಪಾರ್ಟ್‌ಟೈಂ ಸಿಬ್ಬಂದಿ ಇದ್ದಾರೆ. ಆದರೆ ಇದನ್ನು ಇಂಡಿಯಾದಲ್ಲಿ ಎಲ್ಲೂ ಒಪ್ಪಿಲ್ಲ. ಕೇಂದ್ರ ಸರ್ಕಾರದಲ್ಲಿಯೂ ಒಪ್ಪಿಲ್ಲವೆಂದು ಹೇಳುತ್ತೇನೆ. ಇದು ಸ್ಟ್ರೆಂಗ್ತನ್ ಮಾಡುವ ಪ್ರಶ್ನೆ. ಭಾಷಾಂತರ ಮಾಡಬೇಕಾದರೆ ಚೆನ್ನಾಗಿ ಕನ್ನಡ ಬರಬೇಕು. ಇಂಗ್ಲಿಷ್ ಸಹ ಚೆನ್ನಾಗಿ ಬರಬೇಕು. ಕೆಲವರಿಗೆ ಲಾಟರ್ಮ್ಸ್ ಬರುವುದಿಲ್ಲ. ಈಗ ನಾವು ಅಂತಹ ಜನರನ್ನು ಹುಡುಕುವುದು ಬಹಳ ಕಷ್ಟವಾಗಿದೆ. ಯಾರು ಕನ್ನಡದಲ್ಲಿ ಒಳ್ಳೆಯ ಭಾಷಾಂತರ ಮಾಡತಕ್ಕ ಮತ್ತು ಲಾ ಪ್ರ್ಯಾಕ್ಟೀಸ್ ಮಾಡಿರುವವರು ಇದ್ದಾರೆ, ಅಂತಹವರು ಸಿಗುವುದು ಬಹಳ ಕಷ್ಟ. 15 ಸಾವಿರ ಶಬ್ದಗಳನ್ನು ಕನ್ನಡದಲ್ಲಿ ಹುಡುಕಬೇಕಾಗಿದೆ. ನಮ್ಮಲ್ಲಿ ಅಷ್ಟು 15 ಸಾವಿರ ಶಬ್ದಗಳನ್ನು ಹುಡುಕಬೇಕಾದರೆ ಬಹಳ ಕಷ್ಟ. ಕೇವಲ 1,200 ಪದಗಳನ್ನು ಹುಡುಕಿದ್ದಾರೆ. ಆದಕ್ಕೆ ಸರಿಯಾದ ಆಕ್ಟ್‌ಗಳನ್ನು ತೆಗೆದುಕೊಂಡು ಎಲ್ಲ ಶಬ್ದಗಳನ್ನು ಉಪಯೋಗಿಸಬೇಕಾಗುತ್ತದೆ. ಗ್ಲಾಸರಿ ಟರ್ಮಿನಾಲಜಿ ಹುಡುಕಬೇಕು. ಒಂದು ಮಾತು, ಈ ಕೆಲಸ ಬಹಳ ನಿಧಾನ ಆಗಿದೆ. ಇದು ಬಹಳ ಕಷ್ಟದ ಕೆಲಸ. ಒಳ್ಳೆಯ ಭಾಷಾಂತರಕಾರರನ್ನು ನಾವು ಹುಡುಕಬೇಕಾಗಿದೆ. ಸನ್ಮಾನ್ಯ ಸದಸ್ಯರು ಆಗಿರತಕ್ಕ ಪ್ರೊಫೆಸರ್ ಶ್ರೀಕಂಠಯ್ಯನವರು ಇಂದೇ ಹೇಳಲಿ. ಅವರನ್ನು ಎಲ್ಲಿಗೆ ಬೇಕಾದರು ಹಾಕುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ನನ್ನನ್ನು ಹಾಕಿದರೆ ಧೈರ್ಯವಾಗಿ ಒಪ್ಪಿಕೊಳ್ಳುತ್ತೇನೆ. ನಿಜವಾಗಿ ನಾನ್ ಕಾಂಗ್ರೆಸ್‌ನವರನ್ನು ನೇಮಕ ಮಾಡುತ್ತೀರಾ ? ನಮಗೆ ಆ ಹೃದಯವಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಒಬ್ಬ ಮಾನ್ಯ ಸದಸ್ಯರು ಹೇಳಿದರು, ಅಪೀಲು ಕೇಸುಗಳು ಬಹಳ ವರ್ಷಗಳಿಂದಲೂ ಇವೆಯೆಂದು ಹೇಳಿದರು. ಅದು ನನಗೆ ಅರ್ಥವಾಗಲಿಲ್ಲ. ಇಷ್ಟು ಅಲ್ಲಿ ಇಲ್ಲವೆಂದು ಹೇಳುತ್ತೇನೆ. ಹೈಕೋರ್ಟಿನವರಿಗೆ ಇದರ ಬಗ್ಗೆ ಸ್ವಲ್ಪ ಕಷ್ಟವಿದೆ. ಮತ್ತೊಬ್ಬ ಸದಸ್ಯರು ನಾಜರ್ ಮತ್ತು ಶಿರಸ್ತೇದಾರರ ವಿಷಯವಾಗಿ ಬೇರೆ ಹೇಳಿದರು. ಆದರೆ ಅವರ ಹುದ್ದೆಗಳನ್ನು ಈಕ್ವೇಷನ್ ಮಾಡುವವರು ಸರ್ಕಾರವಲ್ಲ. ಅದನ್ನು ಹೈಕೋರ್ಟಿನಲ್ಲಿಯೇ ಮಾಡಬೇಕಾಗಿದೆ. ಅದು ಸರಿಯೋ ತಪ್ಪೋ ಎಂಬುದನ್ನು ನಿರ್ಣಯ ಮಾಡುವುದಕ್ಕೇ ಬಹಳ ಕಷ್ಟವಾಯಿತು. ಆದ್ದರಿಂದ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಹೈಕೋರ್ಟಿಗೆ ತಿಳಿಸುತ್ತೇವೆ. ಅದರಲ್ಲಿ ವಿಶೇಷ ಕಾರ್ಯವನ್ನು ಮಾಡುವುದಕ್ಕಾಗುವುದಿಲ್ಲ.

ಇನ್ನು ಈಗಾಗಲೇ ಮೂರು ಸಿವಿಲ್ ಜಡ್ಜ್ ಕೋರ್ಟುಗಳು ಇದ್ದು ಬೆಳಗಾವಿನಲ್ಲಿ ಎರಡು ಇವೆ. ಆದರೆ ಇನ್ನೊಂದು ಅಲ್ಲಿ ಮಾಡುವುದಕ್ಕಾಗುವುದಿಲ್ಲ. ಈಗ ಚಿಕೋಡಿಯಲ್ಲಿ ಸೇಕಡ 60ರಷ್ಟು ಕೇಸುಗಳು ಬರುತ್ತಾ ಇರುವುದರಿಂದ ಅಲ್ಲಿ ನಾವು ಒಂದು ಕೋರ್ಟನ್ನು ಮಾಡುತ್ತೇವೆ. ಆದರೆ 6 ಕೋರ್ಟುಗಳನ್ನು ಬೆಳಗಾಂನಲ್ಲಿ ಮಾಡುವುದಕ್ಕಾಗುವುದಿಲ್ಲ.

ಇನ್ನು ಸ್ಟೆನೋಗ್ರಾಫರ್ ವಿಷಯದಲ್ಲಿ ಇಬ್ಬರನ್ನು ಡಿಸ್ಟ್ರಿಕ್ಟ್ ಜಡ್ಜ್ ಅವರೇ ನೇಮಕ ಮಾಡುತ್ತಾರೆ. ಒಬ್ಬ ಸ್ಟೆನೋಗ್ರಾಫರನ್ನು ಈಗ ವರ್ಗ ಮಾಡಿರುವುದರಿಂದ, ಇನ್ನೊಬ್ಬರನ್ನು ನೇಮಿಸಬೇಕೆಂದು ಹೇಳಿದೆ. ಕೋರ್ಟಿನಲ್ಲಿ ಡಿಸ್ಟ್ರಿಕ್ಟ್ ಜಡ್ಜ್‌ಗಳಿಗೆ ಹೆಚ್ಚಿನ ಸಂಬಳವಿಲ್ಲ. ಅವರಿಗೆ ಹೆಚ್ಚಿಗೆ ಸಂಬಳ ಕೊಡಬೇಕೆಂದು ಹೇಳಿದ್ದಾರೆ. ಅದು ಯೋಚನೆ ಮಾಡುವಂಥ ಮಾತು. ಅಲ್ಲಿ ಯಾವ್ಯಾವ ದರ್ಜೆ ಅಥವಾ ಕೇಡರಿನ ಜನ ಇದ್ದಾರೆಯೋ ಅವರೆಲ್ಲರಿಗೂ ಸಮಾನವಾದ ಸಂಬಳ ಇರಬೇಕಾಗಿದೆಯೆಂದು ಹೇಳಿದ್ದಾರೆ. ಅದನ್ನು ಕೂಲಂಕಷವಾಗಿ ವಿಚಾರ ಮಾಡುತ್ತಿದ್ದೇವೆ. ಇನ್ನು ಕೆಲವರು

(ಶ್ರೀ ಎಸ್. ಆರ್. ಕಂಠಿ)

ಕೋರ್ಟಿನಲ್ಲಿ ಸ್ಥಳ ಸಾಕಷ್ಟು ಇಲ್ಲವೆಂದು ಹೇಳಿದ್ದಾರೆ. ಅದಕ್ಕಾಗಿ ಹೊಸ ಹೊಸ ಕೋರ್ಟು ಗಳನ್ನು ಕಟ್ಟುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ.

ಇನ್ನು ಕನ್ನಡ ಶೀಘ್ರಲಿಪಿಯನ್ನು ಕೋರ್ಟುಗಳಲ್ಲಿ ಈಗಲೇ ಜಾರಿಗೆ ತರುವುದಕ್ಕಾಗುವುದಿಲ್ಲ. ಕನ್ನಡ ಶೀಘ್ರಲಿಪಿ ಬಲ್ಲವರಿಗೆ ಈಗ ವಿಶೇಷವಾದಂಥ ಕೆಲಸವಿರುತ್ತದೆ. ನಮ್ಮ ವಿಧಾನ ಮಂಡಲದಲ್ಲಿಯೂ ಕೆಲಸ ಮಾಡುವ ಕನ್ನಡ ವರದಿಗಾರರೂ ಕೂಡ ನಮ್ಮ ವಿಧಾನಮಂಡಲದ ಎರಡು ಸಭೆಗಳ ನಡೆವಳಿಕೆಗಳನ್ನು ಹೆಚ್ಚಿಗೆ ಕನ್ನಡದಲ್ಲಿಯೇ ವರದಿ ಮಾಡುತ್ತಿರುವುದರಿಂದ, ಅವರಿಗೆ ಸಾಕಷ್ಟು ಕೆಲಸ ಇದೆ. ಕೆಲವು ಸದಸ್ಯರು ಅವರಿಗೆ ಹೆಚ್ಚಿನ ಸಂಬಳವನ್ನು ಕೊಡಬೇಕೆಂದು ಹೇಳಿದ್ದಾರೆ. ಈ ವಿಚಾರವಾಗಿ ವಿಧಾನಮಂಡಲದ ಬೋರ್ಡ್, ಅಂದರೆ ಸ್ಪೀಕರ್ ಅವರು ಮತ್ತು ಚೇರಮನ್ ಅವರು, ಸರ್ಕಾರಕ್ಕೆ ಏನಾದರೂ ಶಿಫಾರಸ್ಸು ಮಾಡಿದರೆ, ಅದನ್ನು ಸರ್ಕಾರಕ್ಕೆ ಕೂಡಲೇ ಕಳುಹಿಸಿಕೊಟ್ಟರೆ, ಸರ್ಕಾರ ಆ ವಿಚಾರವನ್ನು ಕೂಲಂಕಷವಾಗಿ ಯೋಚನೆ ಮಾಡಿ, ತೀರ್ಮಾನ ಮಾಡಬಹುದು. ನಾನು ನಿಜವಾಗಿ ಎಲ್ಲ ಮಾನ್ಯ ಸದಸ್ಯರಿಗೂ ಅತ್ಯಂತ ಋಣಿಯಾಗಿದ್ದೇನೆ. ಮಾನ್ಯ ಶ್ರೀ ಸಿದ್ಧವೀರಪ್ಪನವರಿಗೂ ಋಣಿಯಾಗಿದ್ದೇನೆ. ಏಕೆಂದರೆ, ಅವರು ನನ್ನ ಇಲಾಖೆಯ ಬಗ್ಗೆ ಏನಾದರೂ ಹೇಳುತ್ತಾರೆಂಬ ಭಾವನೆ ನನಗಿತ್ತು, ಮತ್ತೆ ಅವರು ಏನೂ ಹೇಳಲಿಲ್ಲ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ ಗ್ರಾಮಾಂತರ) ಕಿತ್ತೂರು ಚನ್ನಮ್ಮ ಸ್ಮಾರಕ ಸಮಿತಿ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ.

(ಉತ್ತರವಿಲ್ಲ.)

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರುದುರ್ಗ).—ಲೆಜಿಸ್ಲೇಟರ್ಸ್ ಹೋಂನಲ್ಲಿ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಸಭಾ ಸದಸ್ಯರುಗಳಿಗೆ ವಸತಿ ಸೌಕರ್ಯಗಳು ಸಾಕಷ್ಟು ಇಲ್ಲವೆಂದು ನಾವು ಆಗಿಂದಾಗ್ಗೆ ಸರ್ಕಾರದ ಗಮನಕ್ಕೆ ಈ ಸಭೆಯ ಮೂಲಕ ತಂದಿದ್ದೇವೆ. ಆ ವಿಷಯದಲ್ಲಿ ಸರ್ಕಾರದವರು ಏನಾದರೂ ಕ್ರಮವನ್ನು ತೆಗೆದುಕೊಳ್ಳಲು ಯೋಚನೆ ಮಾಡಿದ್ದಾರೆಯೇ ಎಂಬುದನ್ನು ಹೇಳಬೇಕು.

ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು ಅದನ್ನು ಇನ್ನೂ ವಿಚಾರ ಮಾಡಲಿಲ್ಲವೆಂದು ನನಗನ್ನಿಸುತ್ತದೆ. ಹಣಕಾಸಿನ ಸಚಿವರ ಹತ್ತಿರ ಮಾತನಾಡಿ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದ್ದರೆ, ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಸುಮಾರು 20 ವರ್ಷಗಳಿಂದಲೂ ಬೆಂಗಳೂರಿನಲ್ಲಿ 15–20 ಮಹಿಳೆಯರು ಲಾ ಪ್ರ್ಯಾಕ್ಟೀಸ್ ಮಾಡಿಕೊಂಡು ಇದ್ದಾರೆ. ಮ್ಯಾಜಿಸ್ಟ್ರೇಟ್ ಹುದ್ದೆಗಳಿಗೆ ಎಂತೆಂಥ ಅರ್ಹತೆಗಳುಳ್ಳಂತಹವರನ್ನೋ ಹಾಕುತ್ತಿದ್ದಾರೆ. ಯಾರಾದರೂ ಒಬ್ಬ ಮಹಿಳೆಗೆ ಅಂತಹ ಹುದ್ದೆಯನ್ನು ಪ್ರ್ಯಾಕ್ಟೀಸ್ ಮಾಡಲು ಕೊಡಿ. ಅದನ್ನು ಪ್ರ್ಯಾಕ್ಟಿಕಲ್ಲಾಗಿಯಾದರೂ ಕೊಟ್ಟು ನೋಡಿ. ಇನ್ನು ಮುಂದಾದರೂ ಮಹಿಳೆಯರಿಗೆ ಆ ಸ್ಥಾನಮಾನವನ್ನು ಕೊಡುತ್ತೀರೊ ಇಲ್ಲವೋ ಹೇಗೆ ?

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ನಾನು ಕಾನ್‌ಸ್ಟಿಟ್ಯೂಷನ್ ನೋಡಿ ಹೇಳಬೇಕಾಗುತ್ತದೆ. ಅದರಲ್ಲಿ ಏನೂ ಡಿಸ್ಕ್ರಿಮಿನೇಷನ್ ಮಾಡುವದಕ್ಕಾಗುವುದಿಲ್ಲ. ಕಾನ್‌ಸ್ಟಿಟ್ಯೂಷನ್ ಆ ರೀತಿ ಇದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಇವರು ಹೆಣ್ಣು ಮಕ್ಕಳು, ಇವರು ಗಂಡು ಮಕ್ಕಳು ಎಂಬ ತಾರತಮ್ಯ ಮಾಡಕೂಡದೆಂದು ರಾಜ್ಯಾಂಗದಲ್ಲಿ ಹೇಳಿದೆ. ಆದುದರಿಂದ ಇವರು ಹೆಣ್ಣು ಮಕ್ಕಳೆಂಬ ಕಾರಣದ ಮೇಲೆ ಅವರಿಗೆ ಒಂದು ಸ್ಪೆಷ್ಯಾಲಿಟಿ ಮೇಲಿನ ಕೆಲಸ ಕೊಡುವುದಕ್ಕಾಗುವುದಿಲ್ಲ. ಅವರೆಲ್ಲರೂ ಅವರವರ ಸರ್ತಿ ಪ್ರಕಾರ ಅವಕಾಶಗಳು ದೊರೆತಂತೆ ಸ್ಥಾನಗಳನ್ನು ಪಡೆಯಬೇಕಾಗಿದೆ.

6–30 P.M.

Sri H. SIDDAVEERAPPA.—You can give an assurance that at the time next vacancy occurs you will recommend one to the High Court. Why not you say that ?

ಶ್ರೀ ಎಸ್. ಆರ್. ಕಂಠಿ.—ನಾನು ಅದನ್ನು ಹೇಗೆ ಶಿಫಾರ್ಸು ಮಾಡಲಿಕ್ಕೆ ಬರುತ್ತೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದೆ ಜಸ್ಟೀಸ್ ಮಲ್ಲಪ್ಪನವರ ಸಮಿತಿಯನ್ನು ಮಾಡಿದ್ದ ಕಾಲಕ್ಕೆ ಆ ಸಮಿತಿಯವರು ಕುಣಿಗಲಿಗೆ ಒಂದು ಕೋರ್ಟನ್ನು ಕೊಡಬೇಕೆಂದು ಶಿಫಾರ್ಸು ಮಾಡಿದ್ದರು. ಅದಕ್ಕನುಸಾರವಾಗಿ ಅಲ್ಲಿ ಯಾವಾಗ ಕೋರ್ಟನ್ನು ಪ್ರಾರಂಭ ಮಾಡಲಾಗುವುದು ?

ಶ್ರೀ ಎಸ್. ಆರ್. ಕಂಠಿ.—ಹೌದು. ಈ ದಿವಸ ಕೋರ್ಟುಗಳು ಅನೇಕ ಕಡೆಗೆ ಬೇಕಾಗಿವೆ—ಕುಣಿಗಲಿಗೂ ಬೇಕು, ಬೀರೂರಿಗೂ ಬೇಕು, ಪಾವಗಡಕ್ಕೂ ಬೇಕು. ಸರ್ಕಾರದವರು ಇವುಗಳನ್ನೆಲ್ಲಾ ಒಟ್ಟಾರೆ ವಿಚಾರ ಮಾಡುತ್ತಾರೆ.

ಶ್ರೀ ಎಲ್. ಶ್ರೀಕಂಠಯ್ಯ.—ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟುಗಳು ಈಗ ಬಹಳ ಕಂಜೆಷನ್ ಆಗಿ ಅಲ್ಲಿ ಜನರು ನಿಲ್ಲುವುದಕ್ಕೂ ಕೂಡ ಸ್ಥಳವಿಲ್ಲ. ಅದನ್ನು ಪ್ರತ್ಯಕ್ಷವಾಗಿ ಜಸ್ಟೀಸ್ ಸೋಮನಾಥ ಐಯ್ಯರ್ ಅವರೂ ಮತ್ತು ನಮ್ಮ ಅರ್ಥ ಸಚಿವರಾದ ಶ್ರೀ ರಾಮಕೃಷ್ಣ ಹೆಗಡೆಯವರೂ ನೋಡಿದ್ದಾರೆ. ಅಲ್ಲಿ ಮುಂಭಾಗದಲ್ಲೇ ಸ್ವಲ್ಪ ಓಪನ್ ಏರಿಯಾ ಇತ್ತು, ಅದನ್ನೂ ಸಹಾ ಈಗ ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಕೊಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ. ಆ ಒಂದೇ ಜಾಗದಲ್ಲಿ ಲ್ಯಾಂಡ್ ರೆವಿನ್ಯೂ ಟ್ರಿಬ್ಯೂನಲ್, ಲೇಬರ್ ಕಮಿಷನರ್ ಕೋರ್ಟು, ಕ್ರಿಮಿನಲ್ ಕೋರ್ಟುಗಳೂ ಎಲ್ಲಾ ಇರುತ್ತವೆ. ಅದಕ್ಕೆ ತಾವೇನು ಪ್ರಯತ್ನ ಮಾಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಅವರು ಬಂದನಂತರ ನನ್ನ ಕಡೆಗೆ ಒಂದು ಪಟ್ಟಿಯನ್ನೆ ಕೊಟ್ಟಿದ್ದಾರೆ. ಅದಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳ ಮೇಲಾಗುತ್ತದೆ. ಆದ್ದರಿಂದ ಅದನ್ನು ಯಾವ ರೀತಿ ಯಾವ ಯಾವ ಹಂತದಲ್ಲಿ ಹೇಗೆ ಮಾಡಬೇಕೆಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಆದರೆ ಶ್ರೀ ಶ್ರೀಕಂಠಯ್ಯನವರು ಸದ್ಯ ಆ ನಂಜನಗೂಡಿನ ವಿಚಾರ ಕೇಳಲಿಲ್ಲ.

ಶ್ರೀ ಎಂ. ನಾಗಪ್ಪ.—ಸಿಬ್ಬಂದಿಯನ್ನು ನೇಮಕ ಮಾಡದೆ ಲಾಂಗ್ವೇಜ್ ಕಮೀಷನನ್ನು ನೇಮಕ ಮಾಡುವುದರ ಔಚಿತ್ಯವೇನು ? ಇವರಿಗೆ ಕೊಡುತ್ತಿರುವ ಸಂಬಳ ಸಾರಿಗೆಗಳಲ್ಲಾ ದಂಡವಾಗುತ್ತಿಲ್ಲವೆ ? ಮತ್ತು ನಮ್ಮ ರಾಯಚೂರು ಜಿಲ್ಲೆಗೆ ಕೋರ್ಟನ್ನು ಕೊಡಬೇಕೆಂದು ಶಿಫಾರ್ಸಾಗಿದ್ದರೂ ಇನ್ನೂ ಏತಕ್ಕೆ ಕೊಟ್ಟಿಲ್ಲ ?

ಶ್ರೀ ಎಸ್. ಆರ್. ಕಂಠಿ.—ಅವರ ಮೊದಲನೇ ಪ್ರಶ್ನೆಗೆ ಉತ್ತರ—ಅಲ್ಲಿ ಸಿಬ್ಬಂದಿಯನ್ನು ಕೊಟ್ಟಿಲ್ಲ ಎಂದು ಹೇಳಿದ್ದು ಪೂರಾ ಸತ್ಯವಾದ್ದಲ್ಲ. ಅಲ್ಲಿ ಮೊದಲು ಅಷ್ಟು ಸ್ಥಳಾವಕಾಶ ಇರಲಿಲ್ಲ. ಆದ್ದರಿಂದ ಕೆಲವು ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಲಾಗಿತ್ತು. ಅವರು ಕೆಲವು ಇಂಗ್ಲಿಷ್ ಶಬ್ದಕ್ಕೆ ಸರಿಸಮನಾದ ಕನ್ನಡ ಪದಗಳನ್ನು ಜೋಡಾವಣೆ ಮಾಡಿದ್ದಾರೆ. ಆ ಕಮಿಷನ್ನಿನವರು ಸಾಧ್ಯವಾದಷ್ಟಿಗೂ ಕೆಲಸವನ್ನು ಮಾಡುತ್ತಿದ್ದಾರೆ. ಮೊದಲೇನೊ ಅಲ್ಲಿಗೆ ಸ್ವಲ್ಪ ಸಿಬ್ಬಂದಿ ವರ್ಗ ಕುಂಠಿತವಾಗಿತ್ತು.

ಇನ್ನು ಮಾನ್ಯ ಸದಸ್ಯರ ಎರಡನೇ ಪ್ರಶ್ನೆಗೆ ಉತ್ತರವೇನೆಂದರೆ—ರಾಯಚೂರಿಗೆ ಕೋರ್ಟನ್ನು ಕೊಡಬೇಕೆಂಬ ಇಚ್ಛೆ ನಮಗಿಲ್ಲ ಎಂದು ಅವರು ಭಾವಿಸಬೇಕಾಗಿಲ್ಲ. ಈಗ ಅದರ ಪ್ಲಾನು ಮತ್ತು ಎಸ್ಟಿಮೇಟುಗಳು ಬಂದಿವೆ ಸ್ಕ್ರೂಟಿನಿಯಾಗುತ್ತಿವೆ. ಈ ಪ್ರಕಾರವಾಗಿ ನಡೆಯುತ್ತಿರುವಾಗ ನೀವು ಕೋರ್ಟನ್ನು ಕೊಡಲಿಲ್ಲ—ನಿಮಗೆ ಕೊಡುವ ಇಚ್ಛೆಯಿಲ್ಲ ಎಂದು ಹೇಳುವುದು ಸರಿಯಲ್ಲ. ಹೋದ ವರ್ಷ ತುರ್ತು ಪರಿಸ್ಥಿತಿಯಿಂದ ಕೆಲಸವನ್ನು ಕೈಗೊಳ್ಳಲಿಲ್ಲ. ಈಗ ಅದಿಲ್ಲ. ನೋಡೋಣ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮುನ್ಸೀಫರ ನೇಮಕವನ್ನು ಪಿ.ಎಸ್.ಸಿ. ಅವರು ಮಾಡುತ್ತಾರೆಂದು ಮಾನ್ಯ ಮಂತ್ರಿಗಳು ತಿಳಿಸಿದರು. ಆದರೆ ಆ ಪಿ.ಎಸ್.ಸಿ. ಅಲ್ಲಿ ಒಬ್ಬರಾದರೂ ಮಹಿಳಾ ಸದಸ್ಯರು ಇಲ್ಲದಿರುವುದರಿಂದಲ್ಲವೇ ಆ ತೊಂದರೆ ಬಂದಿರುವುದು ? ಆದ್ದರಿಂದ ಈ ದೋಷವನ್ನು ಮೂಲದಲ್ಲೇ ಸರಿಪಡಿಸಲು ಪ್ರಯತ್ನ ಮಾಡಿದರೆ ಇದು ಸರಿಹೋಗುತ್ತದೆಯಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಅದು ವಿಚಾರ ಮಾಡತಕ್ಕ ವಿಷಯ.

ಶ್ರೀ ಕೆ. ಎಂ. ತಮ್ಮಯ್ಯ.—ಕಡೂರಿಗೆ ಕೋರ್ಟನ್ನು ಕೊಡಬೇಕೆಂದು ಹೈಕೋರ್ಟಿನವರು ಶಿಫಾರ್ಸು ಮಾಡಿದ್ದರೂ ಸರ್ಕಾರದವರು ಏಕೆ ಮನಸ್ಸು ಮಾಡುತ್ತಿಲ್ಲ ? ಮತ್ತು ಈಗಾಗಲೆ ಶ್ರೀ ಎನ್. ಹುಚ್ಚಮಾಸ್ತಿಗೌಡರು ಕೇಳಿದಂತೆ ನಮಗೆ ಇಲ್ಲಿ ಇರುವುದಕ್ಕೆ ಸರಿಯಾದ ಸ್ಥಳಾವಕಾಶವನ್ನು ಮಾಡಿಕೊಡಿ. ಇಲ್ಲವೇ ಈ ಅಧಿವೇಶನವನ್ನು 15 ದಿನಗಳಿಗೆ ಜಾಸ್ತಿ ಇಡಬೇಡಿ. ಇಲ್ಲವೇ ನಮಗೆ ಸರಿಯಾದ ಕಾಟೇಜಸ್‌ನ್ನು ಮಾಡಿಕೊಡಿ. ಅದೂ ಸಾಧ್ಯವಿಲ್ಲ ಅನ್ನುವುದಾದರೆ ಈ ವಯಸ್ಸಾದವರನ್ನೆಲ್ಲಾ ಒಂದು ಕೊಠಡಿಗೆ ಹಾಕಿ ಇನ್ನುಳಿದ ರೂಮುಗಳನ್ನು ನಮ್ಮಂಥ ಹುಡುಗರಿಗೆ ಇರುವುದಕ್ಕೆ ಅವಕಾಶ ಮಾಡಿಕೊಡಿ. ಇದಕ್ಕೇನು ಹೇಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಹೈಕೋರ್ಟಿನವರೇನೋ ರೆಕಮೆಂಡ್ ಮಾಡಿದ್ದಾರೆ. ಆದರೆ ಹೋದ ವರ್ಷ ದುಡ್ಡಿರಲಿಲ್ಲ. ಈ ವರ್ಷ ಅದನ್ನು ಆಲೋಚನೆ ಮಾಡೋಣ.

ಶ್ರೀ ಎಂ. ಮಲ್ಲಪ್ಪ (ಬೀರೂರು).—ಬೀರೂರಿಗೋ ?

ಶ್ರೀ ಎಸ್. ಆರ್. ಕಂಠಿ.—ಅಲ್ಲಿಗೂ ಆಲೋಚನೆ ಮಾಡೋಣ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಮಾನ್ಯ ಮಂತ್ರಿಗಳು ಕಿತ್ತೂರು ಚನ್ನಮ್ಮನ ಸ್ಮಾರಕದ ಬಗ್ಗೆ ಏನೂ ಹೇಳಲೇ ಇಲ್ಲವಲ್ಲ ?

ಶ್ರೀ ಎಸ್. ಆರ್. ಕಂಠಿ.—ಈಗ ಅದಕ್ಕೆ ಸಂಬಂಧಪಟ್ಟ ಹಾಗೆ ಜನರಿಂದ 16 ಲಕ್ಷ ರೂಪಾಯಿಗಳು ವಸೂಲಾಗಿದೆ. ಅದನ್ನು ಯಾವ ರೀತಿ ವಿನಿಯೋಗ ಮಾಡಬೇಕೆಂಬ ಬಗ್ಗೆ ಸ್ಟೇಟ್‌ಲೆವೆಲ್‌ನಲ್ಲಿ ಒಂದು ಕಮಿಟಿಯನ್ನು ಮಾಡಲಾಗಿದೆ. ಅವರು ಅದನ್ನು ಆಲೋಚನೆ ಮಾಡುತ್ತಿದ್ದಾರೆ. ಅಲ್ಲಿ ಒಂದು, ಎರಡು ಮತ್ತು ಮೂರನೆ ದರ್ಜೆಯ ಬಂಗಲೆಗಳನ್ನು ಕಟ್ಟಿಸುವುದಕ್ಕೆ ಹಾಗೂ ಅಲ್ಲಿ ಅಡ್ಮಿನಿಷ್ಟ್ರೇಟೀವ್ ಕ್ವಾರ್ಟರ್ಸ್‌ಗಳನ್ನೂ, ಒಂದು ಆಸ್ಪತ್ರೆ ಮತ್ತು ಒಂದು ಮ್ಯೂಜಿಯಂ, ಒಂದು ಪ್ರಿನ್ಸಿಪಾಲರ ಕ್ವಾರ್ಟರ್ಸ್ ಇಷ್ಟನ್ನು ಕಟ್ಟಿಸಲು ಆಲೋಚನೆ ನಡೆದಿದೆ. ತಾವುಗಳೆಲ್ಲರೂ ಒಮ್ಮೆ ಅಲ್ಲಿಗೆ ದಯಮಾಡಿಸಿ ತಮ್ಮ ಸಲಹೆಗಳನ್ನು ಕೊಟ್ಟರೆ ಅದನ್ನೂ ಪರಿಶೀಲಿಸಲಾಗುತ್ತದೆ. ನಮ್ಮ ಮಂತ್ರಿಗಳಾದ ಶ್ರೀ ಮಹಮದಾಲಿಯವರು ತಾವೆಲ್ಲರೂ ಅಲ್ಲಿಗೆ ಬರುವುದಾದರೆ ಅದಕ್ಕೆಲ್ಲಾ ಬಸ್‌ಗಳ ವ್ಯವಸ್ಥೆ ಮಾಡುತ್ತಾರೆ. ತಮ್ಮನ್ನು ನಾನು ಅಲ್ಲಿಗೆ ಅಳಿಯಂದಿರಹಾಗೆ ಕರೆದುಕೊಂಡು ಹೋಗಿ ಕರೆದುಕೊಂಡು ಬರುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ಈ ಹಿಂದೆ ಪೋಲೀಸ್ ಕೇಸುಗಳಲ್ಲಿ ಅಂದರೆ ಕ್ರಿಮಿನಲ್ ಕೇಸುಗಳಲ್ಲಿ ಪ್ರಾಸಿಕ್ಯೂಷನ್ನನ್ನು ಪೋಲೀಸಿನವರೇ ನಡೆಸುತ್ತಿದ್ದರು. ಈಗ ಆ ಸ್ಥಾನದಲ್ಲಿ ಸರ್ಕಾರದವರು ಕೆಲವರನ್ನು 280 ರೂಪಾಯಿಗಳ ತಲುಬಿನ ಮೇಲೆ ಕೆಲವು ಜನರನ್ನು ಅಸಿಸ್ಟೆಂಟ್ ಪಬ್ಲಿಕ್ ಪ್ರಾಸೆಕ್ಯೂಟರೆಂದು ನೇಮಕ ಮಾಡಿದ್ದಾರೆ........

ಶ್ರೀ ಎಸ್. ಆರ್. ಕಂಠಿ.—ಅದು ನನ್ನ ಇಲಾಖೆಗೆ ಸಂಬಂಧಪಟ್ಟಿದ್ದಲ್ಲ. ಅದನು ಗೃಹಮಂತ್ರಿಗಳ ಖಾತೆ ಚರ್ಚೆಯಾಗತಕ್ಕ ಕಾಲದಲ್ಲಿ ಕೇಳಿದರೆ ಒಳ್ಳೆಯದು.

PERSONAL EXPLANATION BY DEPUTY MINISTER FOR TRANSPORT.

ಶ್ರೀ ಹೆಚ್. ಸಿ. ಬೋರಯ್ಯ (ಸಾರಿಗೆ ಶಾಖೆಯ ಉಪ ಮಂತ್ರಿಗಳು).—ಮಾನ್ಯ ಶ್ರೀ ಹೆಚ್. ಸಿದ್ಧವೀರಪ್ಪನವರು ಭಾಷಣ ಮಾಡುತ್ತಾ ಹೇಳಿದರು. ನಮ್ಮ ಉಪಮಂತ್ರಿಗಳು ದೊಡ್ಡಸಿದ್ಧವನಹಳ್ಳಿಯಲ್ಲಿ ನಡೆದ ದರೋಡೆ ಕೇಸಿನಲ್ಲಿ ಫೋನ್ ಮೂಲಕ ಪೋಲೀಸ್ ಅಧಿಕಾರಿಗಳಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ ಎಂದು ಒಂದು ದೊಡ್ಡ ಆಕ್ಷೇಪಣೆ ಮಾಡಿದ್ದಾರೆ. ಇದರ ಬಗ್ಗೆ ನಾನು ಹೇಳುವುದು ಏನು ಎಂದರೆ, ದೊಡ್ಡಸಿದ್ಧವನಹಳ್ಳಿ ಎಂಬುದು ಒಂದು ದೊಡ್ಡ ಗ್ರಾಮ. ಅದು ನನ್ನ ಕ್ಷೇತ್ರಕ್ಕೆ ಸೇರಿದೆ. ಆ ಹಳ್ಳಿಯಲ್ಲಿ 12ನೇ ತಾರೀಖಿನಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆಯಬೇಕಾಗಿತ್ತು. ಆ ಸಂಬಂಧದಲ್ಲಿ ಆ ಊರಿನಲ್ಲಿ ಒಂದು ಘರ್ಷಣೆ ಆಗುವ ಸಂದರ್ಭ ಇತ್ತು. ನಾನು ಪೋಲೀಸ್ ಅಧಿಕಾರಿಗಳಿಗೆ ಈ ಘರ್ಷಣೆಗೆ ಅವಕಾಶ ಕೊಡಬೇಡಿ, ಬಂದೋಬಸ್ತು ಮಾಡಿ, ಯಾವ ರೀತಿಯೂ ಧಕ್ಕೆ ಬಾರದಂತೆ ನೋಡಿಕೊಳ್ಳಿ ಎಂದು ಹೇಳಿದ್ದು ಉಂಟು. ಆದರೆ ಅವರು ಹೇಳಿದಂತೆ ದರೋಡೆ ಕೇಸಿನ ವಿಚಾರದಲ್ಲಿ ನಾನು ಏನೂ ಫೋನ್ ಮೂಲಕ ಪೋಲೀಸ್ ಅಧಿಕಾರಿಗಳಿಗೆ ಹೇಳಿಲ್ಲ. ಮಾನ್ಯ ಸದಸ್ಯರು ಒಬ್ಬ ಪಾರ್ಲಿಮೆಂಟ್ ಸದಸ್ಯರನ್ನು ಆಧಾರವಾಗಿ ಇಟ್ಟುಕೊಂಡು ಮಾತನಾಡಿದ್ದಾರೆ. ಈ ಚುನಾವಣೆಯಲ್ಲಿ ಯಾವ ವಿಧವಾದ ಘರ್ಷಣೆಯೂ ಇಲ್ಲದಂತೆ ನಡೆಯಿತು. ಫಲಿತಾಂಶವೂ ಕೂಡ ಹೊರಬಿತ್ತು. ಯಾರೋ ಒಬ್ಬರ ಮನೆ ದರೋಡೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅವರಿಗೆ ಪಾರ್ಲಿಮೆಂಟ್ ಸದಸ್ಯರು ಆಪ್ತರು. ಕೇವಲ ಬಂಧುಗಳು ಎನ್ನುವುದನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಚುನಾವಣೆಯಲ್ಲಿ ಸೋತಿರುವುದರಿಂದ ಇದಾದ ಮೇಲೆ ಈ ಒಂದು ವಿಧವಾದ ಆಕ್ಷೇಪಣೆಯ ಮಾತು ನನ್ನ ಮೇಲೆ ಬಂತು. ನಾನು ಪೋಲೀಸಿನವರಿಗೆ ಈ ಘರ್ಷಣೆ ಬಗ್ಗೆ ಬಂದೋಬಸ್ತು ಮಾಡಿ ಯಾವ ಘರ್ಷಣೆಯೂ ಆಗದಂತೆ ನೋಡಿಕೊಳ್ಳಿ ಎಂದು ಮಾತ್ರ ಹೇಳಿದ್ದೇನೆ. ನಾನು ಆ ಕ್ಷೇತ್ರದಿಂದ ಆರಿಸಿಬಂದಿರುವುದರಿಂದ ಮತ್ತು

ಆ ಊರಿನ ಪರಿಸ್ಥಿತಿ ಬಲ್ಲವನಾಗಿರುವುದರಿಂದ ಈ ಕೆಲಸವನ್ನು ಮಾಡಬೇಕಾಗಿದೆ. ಆದುದರಿಂದ ಈ ಸಂದರ್ಭದಲ್ಲಿ ಗಮನ ಕೊಡದೆ ಪೋಲೀಸಿನವರಿಗೆ ಹೇಳದೆ ಇದ್ದಿದ್ದರೆ ಅದರ ಪರಿಣಾಮ ಏನಾಗುತ್ತಿತ್ತು ಎಂದು ತಾವು ಯೋಚಿಸಬೇಕು. ಈಗ ಪಶ್ಚಾತ್ತಾಪ ಪಡಬೇಕಾದ ಪರಿಸ್ಥಿತಿ ಬರುತ್ತಿತ್ತು. ಆದರೆ ಆ ಊರಿನಲ್ಲಿ ಚುನಾವಣೆ ನಡೆದು ಯಾವ ಉದ್ರೇಕ ಪರಿಸ್ಥಿತಿಯೂ ಇಲ್ಲ ಎಂದು ನಾನು ತಿಳಿದುಕೊಂಡಮಟ್ಟಿಗೆ ಈ ಸಭೆಯ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಉಪಮಂತ್ರಿಗಳು ನಮ್ಮ ಕ್ಷೇತ್ರ ಆದುದರಿಂದ ಹೇಳಿದೆ ಎಂದು ಹೇಳಿದ್ದಾರೆ ಮತ್ತು ಅವರ ಜಾಗದಲ್ಲಿ ಇನ್ನೊಬ್ಬರು ಇದ್ದಿದ್ದರೆ ಏನು ಮಾಡಬೇಕಾಗಿತ್ತು ಎಂದು ಕೇಳಿದರು. ಶಾಂತಿಪಾಲನೆ ಮಾಡುವುದು ಅವರ ಖಾತೆಗೆ ಸಂಬಂಧಪಡುವುದಿಲ್ಲ. ಆದುದರಿಂದ ಸಂಬಂಧಪಟ್ಟ ಮಂತ್ರಿಗಳಿಗೆ ಪರಿಸ್ಥಿತಿ ಹೀಗಿದೆ ಇದನ್ನು ವಿಚಾರ ಮಾಡಿ, ಸೂಕ್ತ ಪರಿಹಾರ ಕ್ರಮವನ್ನು ಕೈಗೊಳ್ಳಬೇಕಾದ್ದು ನ್ಯಾಯ ಮಾರ್ಗ. ಇದನ್ನು ಬಿಟ್ಟು ಪೋಲೀಸ್ ಅಧಿಕಾರಿಗಳಿಗೆ ನೇರವಾಗಿ ಹೇಳಿದ್ದಾರೆ. ಅವರು ಹಾಗೆ ಹೇಳಿದ್ದಕ್ಕೆ ಸಂತೋಷಪಡಬೇಕು. ಅವರು ಇನ್ನು ಮುಂದೆಯಾದರೂ ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಮಾಡುವುದು ಒಳ್ಳೆಯದು ಎಂದು ನಾನಾದರೂ ಹೇಳಬೇಕಾಗಿದೆ. ಒಬ್ಬ ಪಾರ್ಲಿಮೆಂಟ್ ಸದಸ್ಯರು ಹೇಳಿದಮೇಲೆ ಅವರು ಖಂಡಿತವಾಗಿಯೂ ಉತ್ಪ್ರೇಕ್ಷೆಯಾಗಿ ಹೇಳಲಿಲ್ಲ ಎಂದು ತಿಳಿದು ನಾನು ಹೇಳಿದ್ದೇನೆ. ಮಾನ್ಯ ಗೃಹಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಏನೆಂದರೆ, ಇದರಲ್ಲಿ ಎಷ್ಟುಮಟ್ಟಿಗೆ ನಿಜ ಇದೆ ಎನ್ನುವುದನ್ನು ವಿಚಾರ ಮಾಡಬೇಕು. ಉಪಮಂತ್ರಿಗಳು ದರೋಡೆ ಕೇಸಿನಲ್ಲಿ ಬಾಯಿ ಹಾಕಿ ದರೋಡೆ ಕೇಸು ಮುಂದೆ ಬಾರದ ರೀತಿ ಮಾಡಿದ್ದಾರೆ ಎಂದು ಗುರುತರವಾದ ಅಪಾದನೆ ಇದೆ. ನಿಜ ಇಲ್ಲದಿದ್ದರೆ ಎಲ್ಲರಿಗಿಂತಲೂ ನನಗೆ ಹೆಚ್ಚು ಸಂತೋಷವಾಗುತ್ತದೆ. ಇದನ್ನು ದಯವಿಟ್ಟು ವಿಚಾರಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿ. ಬೋರಯ್ಯ.—ದರೋಡೆ ಕೇಸು ಎಂದು ಹೇಳಿದ್ದಾರೆ. ದರೋಡೆ ಕೇಸಿನಲ್ಲಿ ಅವರ ಆಳು ಅವರ ಮನೆಯಲ್ಲಿ ಕದ್ದಿದ್ದಾನೆ. ಕೇಸ್ ರಿಜಿಸ್ಟರ್ ಆಗಿದೆ. ಕೇಸ್ ಈಗ ಸಬ್‌ಜುಡಿಸ್ ಆಗಿದೆ. ಸಬ್‌ಜುಡಿಸ್ ಆಗಿರುವುದರಿಂದ ನಿಜವಾದ ಚಿತ್ರವನ್ನು ರೂಪಿಸುವುದಕ್ಕೆ ಇಚ್ಛೆ ಇಲ್ಲ. ಆದುದರಿಂದ ನಾನು ಸುಮ್ಮನೆ ಆಗಿದ್ದೇವೆ.

Mr. CHAIRMAN.—The question is :

"That the respective sums not exceeding the amounts mentioned in the Demand Nos. 9, 10 and 11 including the sums already voted on account, be granted to the Government to defray the charges which will come in course of payment during the financial year for the period ending with 31st day of March 1969."

The motion was adopted.

As ordered by the Chair the motion for Demands for grants adopted by the chair are reproduced below :

DEMAND NO. 9.—STATE LEGISLATURE AND ELECTIONS.

18. *Parliament, State/Union Territory Legislature.*

"That a sum not exceeding Rs. 41 05,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Parliament State/Union Territory Legislature'."

(MR. CHAIRMAN)

DEMAND No. 10.—GENERAL ADMINISTRATION

19. *General Administration.*

"That a sum not exceeding Rs. 3,97,23,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'General Administration'."

DEMAND No. 11.—ADMINISTRATION OF JUSTICE.

21. *Administration of Justice.*

"That a sum not exceeding Rs. 1,41,40,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Administration of Justice'."

Mr. CHAIRMAN.—There is a small item of work. If the hon. Members are ready to sit for about five minutes, we can accommodate the request of Sri Gangadhar. He has given a call-attention notice and the Hon'ble Minister for Civil Supplies Sri Jatti is ready to reply.

HON. MEMBERS.—Yes, we shall sit a little more.

CALLING ATTENTION TO A MATTER OF URGENT PUBLIC IMPORTANCE

Sri B. P. GANGADHAR.—I call the attention of the Minister for Food and Civil Supplies to the acute scarcity of Food stuffs in Kasaba and Bellavi Hoblies in Tumkur Taluk.

Sri B. D. JATTI (Minister for Food and Civil Supplies).—The seasonal conditions in Tumkur District have not been satisfactory, and some parts of the District are reported to be more severely affected than others. Most of the tanks have dried up, there has been failure of crops. The availability of foodgrains in the open market is, however, quite good and the rates of foodgrains have also come down during the